
ಗೌರಿ ಲಂಕೇಶರ


ಲಂಕೇಶ್

ಜೂನ್ 21, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



1200 ಕೋಟಿ ಅರಣ್ಯ ಸ್ವಾಹಾ

ಆರೋಗ್ಯ ಮಂತ್ರಿಗೆ ಭೂ ರೋಗ!



ನಿಕಾಲಿಗೆ ಬಂದವನು ಕಪಾಲಿ

ಪೂಣೆಗೆ ಸ್ಕೆಚ್



ಡಿಯೂರಪ್ಪನ ಡವಟ್ಟು ಪುತ್ರರು

ಮಂಡ್ಯ ನಗರಸಭೆ ಜಪ್ರುಲ್ಲಾಗೆ ಹರಾಜು




ಹೆದ್ದಾರಿ ಯುದ್ಧ

ಕಳ್ಳ ಮಳ್ಳ



ರಂಗಿನ ಭರವಸೆಗಳು ಹಾಗು ಮೂರೂ ಬಿಟ್ಟ ರಾಜಕಾರಣಿಗಳು



ಈ ದೇಶದ ರಾಜಕಾರಣಿಗಳು ಮತ್ತು ರಾಜಕಾರಣ ಇನ್ನೇನಕ್ಕೂ ಅಲ್ಲದಿದ್ದರೂ ಸುಳ್ಳು ಭರವಸೆಗಳಿಗಂತೂ ಜಗತ್ತಿಗೇ ಮಾದರಿ. ಮೊದಲು ಸ್ವರ್ಗವನ್ನೇ ಧರೆಗೆ ಇಳಿಸುತ್ತೇವೆಂದು ಚುನಾವಣಾ ಭರವಸೆಗಳನ್ನು ಕೊಡುತ್ತಿದ್ದ ನಾಚಿಕೆಗೆಟ್ಟ ಪಕ್ಷಗಳು 91ರಿಂದ ಅಷ್ಟೆಲ್ಲಾ ಸುಳ್ಳು ಭರವಸೆಗಳನ್ನು ಕೊಡುವುದನ್ನು ನಿಲ್ಲಿಸಿದವು. ಕಾರಣ ಒಂದು ಕಡೆ ಜನ ಅದನ್ನು ನಂಬುವುದನ್ನು ನಿಲ್ಲಿಸಿದರು. ಮತ್ತೊಂದು ಕಡೆ 91ರಿಂದ ಈ ದೇಶದ ಹಣೆಬರಹವನ್ನು ಬರೆಯುತ್ತಿರುವ ವರ್ಲ್ಡ್ ಬ್ಯಾಂಕ್ ಈ ರೀತಿ ಚೀಪ್ ಭರವಸೆಗಳನ್ನು ಕೊಡುವುದು ಚೀಪ್ ಪಾಪ್ಯುಲಾರಿಟಿ ಎಂದೂ, ಆ ರೀತಿ ಜನರಿಗೆ ಭರವಸೆಗಳನ್ನು ಕೊಡಬಾರದೆಂದು ಪರೋಕ್ಷವಾಗಿ ತಾಕೀತು ಮಾಡಿತು. ಆದ್ದರಿಂದಲೇ ಕನಿಷ್ಠ ಕೆಲವು ವರ್ಷಗಳ ಕಾಲ ಈ ಸುಳ್ಳು ಭರವಸೆಗಳ ಹಾವಳಿ ಇರಲಿಲ್ಲ. ಆದರೆ ನಮ್ಮ ದೇಶದ್ದು ಈ ದೇಶದ ರಾಜಕಾರಣಿಗಳಂತೆ ಪೊಳ್ಳು ಭರವಸೆಗಳ ರಾಜತಂತ್ರವೇ ಆಗಿದೆ. ಅಂದರೆ ಐದು ವರ್ಷಗಳಿಗೊಮ್ಮೆ ಓಟು ಕೇಳಲು ಜನರ ಬಳಿಗೆ ಹೋಗಲೇಬೇಕಲ್ಲ. ಆದರೆ ಜನರಿಗೆ ಕೊಡಲು ರಾಜಕಾರಣಿಗಳ ಬಳಿ ಮೊದಲಿಂದಲೂ ಇದ್ದದ್ದು ಹುಸಿ ಭರವಸೆಗಳನ್ನು ಬಿಟ್ಟು ಬೇರಿನ್ನೇನು? ಹೀಗಾಗಿ ಮತ್ತೆ ಪೊಳ್ಳು ಭರವಸೆಗಳ ಯುಗ ಪ್ರಾರಂಭವಾಗಿದೆ. ಅದನ್ನು ಹೇಗಿದ್ದರೂ ಅನುಷ್ಠಾನಕ್ಕೆ ತರಲು ಸಾಧ್ಯವಿಲ್ಲ ಎಂದು ಗೊತ್ತಿರುವ ವಿಶ್ವಬ್ಯಾಂಕ್ ಸಹ ಮೌನ ವಹಿಸಿದೆ.


ಆದ್ದರಿಂದ ಆಂಧ್ರ ಚುನಾವಣೆಯಲ್ಲಿ ಬಿಟ್ಟಿ ವಿದ್ಯುತ್ತಿನ ಪುಕ್ಕಟೆ ಭರವಸೆ ಕೊಟ್ಟ ರಾಜಶೇಖರರೆಡ್ಡಿ ವರ್ಷ ಒಪ್ಪತ್ತು ಕಳೆಯುವಷ್ಟರಲ್ಲಿ ತಾನು ಆ ರೀತಿಯ ಭರವಸೆಯನ್ನೇ ಕೊಟ್ಟರಲಿಲ್ಲ ಎಂದು ಹೇಳಲು ಶುರು ಮಾಡಿದ್ದಾನೆ. ಅದೇ ರೀತಿ ತಮಿಳುನಾಡು ಚುನಾವಣೆಯಲ್ಲೂ ಜಯಲಲಿತ ಮತ್ತು ಕರುಣಾನಿಧಿಗಳ ನಡುವೆ ಪುಕ್ಕಟೆ ಭರವಸೆಗಳ ಹುಸಿ ಸಮರವೇ ನಡೆದಿತ್ತು. ಜಯಲಲಿತ ಸೋತು ಬಚಾವಾದಳು. ಆದರೆ ಈಗ ಕರುಣಾನಿಧಿ ನೀಡಿದ್ದ ಪುಕ್ಕಟೆ ವಿದ್ಯುತ್ ಹಾಗೂ ಬಿಟ್ಟಿ ಟೆಲಿವಿಷನ್ ಭರವಸೆ ಹೇಗೆ ಈಡೇರಿಸಲಿದ್ದಾರೆ? ಅದರಲ್ಲಿ ಅವರ ರಾಜಕೀಯ ಸೋದರ ರಾಜಶೇಖರರೆಡ್ಡಿ ಅವರಿಗೆ ಮಾರ್ಗದರ್ಶನ ನೀಡಲಿದ್ದಾರೆ. ಆ ಮಹಾಶಯರು ಮೊದಲು ಎಲ್ಲಾ ರೈತರಿಗೂ ಪುಕ್ಕಟೆ ವಿದ್ಯುತ್ ಅಂದರು. ಆ ನಂತರ ಅದು ಕೇವಲ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಮಾತ್ರ ಅಂದರು. ಆ ನಂತರ ಸಣ್ಣ ರೈತರಲ್ಲಿ ಬಡತನ ರೇಖೆಗಿಂತ ಕಡಿಮೆ ಇರುವವರಿಗೆ ಮಾತ್ರ ಅಂದರು. ನಂತರ ಒಣ ಬೇಸಾಯ ಮಾಡುವವರಿಗೆ ಮಾತ್ರ ಅಂದರು..! ಕೊನೆಯದಾಗಿ ಹಾಗೆ ಜಗ್ಗಾಡಿ ಹೀಗೆ ಜಗ್ಗಾಡಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಆದ ನಂತರ ತಾವು ಹಾಗೆ ಭರವಸೆ ನೀಡಿರಲೇ ಇಲ್ಲ ಎಂದು ಘೋಷಿಸಿಬಿಟ್ಟರು.!

ಕರುಣಾನಿಧಿಯವರೂ ಅದೇ ದಾರಿಯಲ್ಲಿ ಇದ್ದಾರೆ. ಮೊದಲು 21ಇಂಚಿನ ಕಲರ್ ಟಿ.ವಿ.ಎಲ್ಲರಿಗೂ ಎಂದರು. ಈಗ ಅದು 14ಇಂಚಿನ ಟಿ.ವಿ. ಎಂದಿದ್ದಾರೆ. ನಂತರ ತನ್ನ ಪ್ರಸ್ತಾವನೆಗೆ ಹಣಕಾಸು ಇಲಾಖೆಯ ಅನುಮೋದನೆಗೆ ಕಾದಿದ್ದೇನೆ ಎಂದಿದ್ದಾರೆ. ಮೊನ್ನೆ ಹಾಗೆ ಏಕಾಏಕಿ ಕೊಡಲಾಗುವುದಿಲ್ಲ, ಅದಕ್ಕೆ ಜಾಗತಿಕ ಟೆಂಡರ್ ಕರೆಯಬೇಕು, ಅದರ ವಿಧಿವಿಧಾನ ಪೂರೈಸಿ ಪೆರಿಯಾರ್ ಜನ್ಮದಿನವಾದ ಸೆಪ್ಟೆಂಬರ್‌ನಲ್ಲಿ ಸಾಂಕೇತಿಕವಾಗಿ ಕೆಲವರಿಗೆ ಕೊಡಲಾಗುವುದು ಎಂದು ಹೇಳಿದ್ದಾರೆ. ಕೊನೆಗೆ ಅದೇ ಗ್ಯಾರಂಟಿ. ಭರ್ತಿ ಭರವಸೆ. ಸಾಂಕೇತಿಕ ಪೂರೈಕೆ! ರಾಜಕಾರಣಿಗಳಿಗೆ ಅಭಾದಿತ ಅಧಿಕಾರ! ಇದು ವಿಶ್ವದ ಅತಿ ದೊಡ್ಡ ಪ್ರಜಾತಂತ್ರ!

ಹಣೆಯ ಮೇಲಿನ ನಾಮ ಜಾತಿಯದ್ದು... ಸರ್‌ನೇಮ್ ಮಾತ್ರ ಭಾರತದ್ದು!

ಚಾರ್ವಾಕ

- ಶಿವಸುಂದರ್-



ನಮ್ಮ ಮೀಸಲಾತಿ ವಿರೋಧಿ ಭಾರತೀಯರು ಹಲವಾರು ರೀತಿ ನಮ್ಮ ಸಂವಿಧಾನದ ಮೇಲೆ ಮತ್ತು ಪ್ರಜಾತಂತ್ರಗಳ ಮೌಲ್ಯಗಳ ಮೇಲೆ ಸಹಿಸಲಸಾಧ್ಯ ಕುಚೋದ್ಯವನ್ನು ಎಸಗುತ್ತಿದ್ದಾರೆ. ಮೊದಲನೆಯದಾಗಿ ಇಷ್ಟು ವರ್ಷ ತಾವು ಮಾಡಿದ ಮತ್ತು ಈಗಲೂ ಎಸಗುತ್ತಿರುವ ಅನ್ಯಾಯವನ್ನು ಮುಚ್ಚಿಟ್ಟುಕೊಳ್ಳಲು ತಮಗೇ ಅನ್ಯಾಯವಾದಂತೆ ದೇಶಾದ್ಯಂತ ಗೋಳಿಟ್ಟು ಜನತೆಯ ದಾರಿ ತಪ್ಪಿಸುತ್ತಿದ್ದಾರೆ. ಎರಡನೆಯದಾಗಿ ಕಸ ಗುಡಿಸುವ, ಬೂಟ್ ಪಾಲಿಷ್ ಮಾಡುವ ಮತ್ತು ಬಾಳೆಹಣ್ಣು ಮಾರುವಂತ ಅಣಕುಗಳನ್ನು ಮಾಡುತ್ತಾ ಆ ವೃತ್ತಿಗಳಿಗೂ ಅವಮಾನ ಮಾಡುತ್ತಿದ್ದಾರೆ ಹಾಗೂ ತಮ್ಮಲ್ಲಿ ಮಡುಗಟ್ಟಿ ನಿಂತಿರುವ ಜಾತಿ ಅಸಹನೆಯನ್ನು ಎತ್ತಿ ತೋರಿಸುತ್ತಿದ್ದಾರೆ. ಈ ದೇಶದಲ್ಲಿ ಆಳವಾಗಿ ಬೇರು ಬಿಟ್ಟಿರುವ ಅಸಮಾನತೆಯನ್ನು ಅದಕ್ಕೆ ಕಾರಣವಾಗಿರುವ ಜಾತಿ ಶ್ರೇಣೀಕರಣವನ್ನು ಯಥಾವತ್ ಬೆಂಬಲಿಸುವ ಈ ಮೀಸಲಾತಿ ವಿರೋಧಿಗಳು ಅದನ್ನು ಸ್ವಲ್ಪವಾದರೂ ಕಡಿಮೆ ಮಾಡ ಬಹುದಾದ ಮೀಸಲಾತಿಯನ್ನೂ ವಿರೋಧಿಸುತ್ತಿದ್ದಾರೆ.

ಆದರೂ ತಮ್ಮ ಸಂಘಟನೆಗೆ "ಸ್ಟೂಡೆಂಟ್ಸ್ ಫಾರ್ ಈಕ್ವಾಲಿಟಿ"- ಸಮಾನತೆಗಾಗಿ ವಿದ್ಯಾರ್ಥಿಗಳು-ಎಂದು ಕರೆದುಕೊಂಡು ಸಮಾನತೆಯೆಂಬ ಆಶಯಕ್ಕೆ ಮಸಿ ಬಳಿಯುತ್ತಿದ್ದಾರೆ.

ಈಗ ಅವರು ಮತ್ತೊಂದು ಹೊಸ ವರಸೆ ಶುರು ಮಾಡಿದ್ದಾರೆ. ಈ ದೇಶದಲ್ಲಿ ಜಾತಿ ಇಲ್ಲದಂತೆ ಮಾಡಲು ಇನ್ನು ಮುಂದೆ ಈ ಮೇಲ್ಜಾತಿ ವಿದ್ಯಾರ್ಥಿಗಳೆಲ್ಲರೂ ತಮ್ಮ ಮುಂದೆ ಮುಂದೆ ಇರುವ ಎಲ್ಲಾ ಸರ್‌ನೇಮ್‌ಗಳನ್ನೂ ತೆಗೆದು ಹಾಕಿ ಭಾರತ್ ಎಂದು ಇಟ್ಟುಕೊಳ್ಳುತ್ತಾರಂತೆ. ಸುನಿಲ್ ಭಾರತ್, ಸಚಿನ್ ಭಾರತ್, ಲಾಲ್‌ಕೃಷ್ಣ ಭಾರತ್, ಸುಷ್ಮ ಭಾರತ್ ಇತ್ಯಾದಿ...! ಆದರೆ ಹೆಸರ ಮೂಲೆಗಿರುವ ಸರ್‌ನೇಮ್ ತಗೆಯುವ ಇವರು ತಮ್ಮ ಹಣೆಯ ಮೇಲಿರುವ ಜಾತಿ ನಾಮಗಳನ್ನು ತೆಗೆಯುವರೇ?

ಶೋಷಿತ ಜನತೆ ತಮಗಾದ ಅನ್ಯಾಯಗಳ ಬಗ್ಗೆ ದನಿ ಎತ್ತಿದ ತಕ್ಷಣ ಸಮಾನತೆಯ ನಾಟಕವಾಡುವ ಈ ಮೇಲ್ಜಾತಿ ವಿಕೃತಿಗಳನ್ನು ನೋಡಿಯೇ ಅಂಬೇಡ್ಕರ್‌ರವರು "ಹಿಂದುಗಳೆಲ್ಲಾ ಒಂದೇ ಎಂಬ ಭಾಷಣ ಮಾಡುವುದರಿಂದ ಜಾತಿ ನಾಶವಾಗುವುದಿಲ್ಲ, ಅದು ರೋಟಿಕೆ ಸವಾಲ್ ಮತ್ತು ಭೇಟಿಕೀ ಸವಾಲ್" ಎಂದದ್ದು. ಅಂದರೆ ಸಹಭೋಜನ ಮತ್ತು ಅಂತರ್ಜಾತಿ ವಿವಾಹಗಳಿಂದ ಮಾತ್ರ ಜಾತಿ ವಿನಾಶ ಆಗಲಿಕ್ಕೆ ಸಾಧ್ಯ. ಈ "ಈಕ್ವಾಲಿಟಿ" ಜನರಲ್ಲಿ ಮತ್ತು 'ಸರ್‌ನೇಮ್ ಭಾರತೀಯರಲ್ಲಿ' ಎಷ್ಟು ಜನ ಇದಕ್ಕೆ ಸಿದ್ದರಿದ್ದೀರಿ ಪ್ರತಿಭಾ ಸಂಪನ್ನರೇ?

ಒಂದು ಪ್ರಶ್ನೆ:


ದೇಶದಲ್ಲಿ ರೈತರ ಆತ್ಮಹತ್ಯೆಗಳೂ ನಿಂತಿಲ್ಲ, ರೈತರ ಬರ್ಬಾದಿಯೂ ನಿಂತಿಲ್ಲ.



ವಾಸ್ತವವಾಗಿ ಕೃಷಿಕ್ಷೇತ್ರದಿಂದ ದೇಶದ ಜಿ.ಡಿ.ಪಿ.ಗೆ ಅತಿಹೆಚ್ಚಿನ ಕೊಡುಗೆ ನೀಡಿರುವ ರಾಜ್ಯವಾದ ಪಂಜಾಬಿನಲ್ಲೂ ರೈತರ ಆತ್ಮಹತ್ಯೆಗಳು ನಿಂತಿಲ್ಲ. ಆದರೂ ಇತ್ತೀಚೆಗೆ ಯೋಜನಾ ಆಯೋಗ ಬಿಡುಗಡೆ ಮಾಡಿದ ಅಂಕಿಅಂಶಗಳು ಹೇಳುವ ಕಥೆಯೇ ಬೇರೆ. ಯೋಜನಾ ಆಯೋಗದ ಪಂಡಿತರ ಪ್ರಕಾರ 2004-05ರ ಸಾಲಿನಲ್ಲಿ ದೇಶದ ಒಟ್ಟಾರೆ ರಾಷ್ಟ್ರೀಯ ಉತ್ಪನ್ನ(ಜಿ.ಡಿ.ಪಿ.)ಕ್ಕೆ ಕೃಷಿಯ ಕೊಡುಗೆ 0.7ಇದ್ದದ್ದು ಈ ಸಾಲಿನಲ್ಲಿ 3.9ಕ್ಕೇರಿದೆಯಂತೆ. ಇದು ಹೇಗೆ ಸಾಧ್ಯ? ರೈತರು ಸಾಯುತ್ತಿದ್ದರೂ, ಅವರು ಮಾಡುತ್ತಿದ್ದ ಕೃಷಿ ಬಿಕ್ಕಟ್ಟಿನಲ್ಲಿದ್ದರೂ ದೇಶದ ಜಿ.ಡಿ.ಪಿ.ಗೆ ಕೃಷಿಯ ಪಾಲು ಮಾತ್ರ ಹೇಗೆ ಜಾಸ್ತಿಯಾಗಲು ಸಾಧ್ಯ?

ಒಂದು ಸತ್ಯ:

ಸತ್ಯವೇನೆಂದರೆ ಈ ಜಿ.ಡಿ.ಪಿ. ಲೆಕ್ಕಾಚಾರಕ್ಕೂ ಈ ದೇಶದ ಜನತೆಯ ಬದುಕಿನ ಅಭಿವೃದ್ಧಿಗೂ ಏನೇನೂ ಸಂಬಂಧವಿಲ್ಲ. ಇದಕ್ಕೆ ಒಂದು ಸರಳ ಉದಾಹರಣೆ ಎಂದರೆ 1991ರ ನಂತರ ಈ ದೇಶದ ಜನತೆಯ ಬಡತನ ಹೆಚ್ಚಾಗಿದೆ. ವಾಸ್ತವವಾಗಿ 91ರ ನಂತರ ಅಭಿವೃದ್ಧಿಯನ್ನು ಮೊದಲು ಜಾಬ್ ಲೆಸ್(ಉದ್ಯೋಗ ರಹಿತ) ಅಭಿವೃದ್ಧಿಯೆಂದು ಕರೆಯುತ್ತಿದ್ದರು. ಈಗ ಈ ಅಬಿವೃದ್ಧಿ ಮಾದರಿಯಲ್ಲಿ 15 ವರ್ಷಗಳನ್ನು ಕಳೆದ ನಂತರ ಈ ಅಭಿವೃದ್ಧಿ ಸಾಮಾನ್ಯ ಜನರ ಪಾಲಿಗೆ ಕೇವಲ ಜಾಬ್‌ಲೆಸ್ ಅಭಿವೃದ್ಧಿ ಮಾತ್ರವಲ್ಲ, ಬದಲಿಗೆ ಜಾಬ್‌ಲಾಸ್ (ಎಂದರೆ ಉದ್ಯೋಗ ಕಡಿತ ಮಾಡುವ) ಅಭಿವೃದ್ಧಿ ಎಂದೇ ಕರೆಯಲಾಗುತ್ತದೆ. ಆದರೂ ಆಶ್ಚರ್ಯವೆಂದರೆ ಇದೇ ಕಾಲಾವಧಿಯಲ್ಲಿ ನಮ್ಮ ದೇಶದ ಜಿ.ಡಿ.ಪಿ. ಮಾತ್ರ ಶೇ.3ರಿಂದ ಶೇ.7ಕ್ಕೆ ಏರಿದೆ....!



ಈಗ ಅದೇ ರೀತಿಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ಕೃಷಿಯ ಅಭಿವೃದ್ಧಿ ದರ ಮಾತ್ರ 0.7ರಿಂದ 3.9ಕ್ಕೇರಿದೆ. ಇದರ ಗುಟ್ಟಿಷ್ಟೆ. ಈಗ ಕೃಷಿ ಕ್ಷೇತ್ರಕ್ಕೂ ಹೆಚ್ಚಿನ ರೀತಿಯಲ್ಲಿ ವಿದೇಶಿ ಬಂಡವಾಳ ಬರುತ್ತಿದೆ. ಕೃಷಿಯ ಸಂಪೂರ್ಣ ಪುನರ್ ರಚನೆ ನಡೆಯುತ್ತಿದ್ದು ಇಡೀ ದೇಶದ ಕೃಷಿಯನ್ನು ಇನ್ನು ಮುಂದೆ ವಿದೇಶಿ ಬಂಡವಾಳ ಕಾರ್ಪೊರೇಟ್ ಫಾರ್ಮಿಂಗ್ ಮತ್ತು ಕಾಂಟ್ರಾಕ್ಟ್ ಫಾರ್ಮಿಂಗ್ ಇತ್ಯಾದಿಗಳು ಆವರಿಸಲಿವೆ. ಅವೆಲ್ಲವೂ ದೇಶದ ರೈತರನ್ನು ಮತ್ತಷ್ಟು ಸಾವಿನ ಕೂಪಕ್ಕೆ ತಳ್ಳಿದರೂ ಅವು ವಿದೇಶಿ ಬಂಡವಾಳವನ್ನು ಕೃಷಿ ಕ್ಷೇತ್ರಕ್ಕೆ ತರುವುದರಿಂದ ಅದು ಜಿ.ಡಿ.ಪಿ.ಯಲ್ಲಿ ಕೃಷಿ ಕ್ಷೇತ್ರವನ್ನು ಹೆಚ್ಚಿಸಿದೆ ಎಂದು ಲೆಕ್ಕಾಚಾರ..!

ಕರಪತ್ರವೊಂದರ ಕೆಲವು ಸಾಲುಗಳು.....

ವಿಪ್ಲವ ರಚಯಿತುಲ ಸಂಘಂ(ವಿರಸಂ) ಆಂಧ್ರದ ಸಾಹಿತ್ಯ ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಹೊಸ ಕ್ರಾಂತಿಕಾರಿ ಶಕೆಯನ್ನು ಪ್ರಾರಂಭಿಸಿದ ಸಾಹಿತಿಗಳ ಸಂಘಟನೆ. ನಮ್ಮ ಬಂಡಾಯ ಸಾಹಿತ್ಯ ಸಂಘಟನೆ ಸಹ ಅದರಿಂದ ಪ್ರೇರಣೆ ಪಡೆದಿದೆ. ಕಷ್ಟಜೀವಿಗಳ ಪರವಾಗಿ ತಮ್ಮ ಲೇಖನಿಯನ್ನು ಮತ್ತು ಅದಕ್ಕೆ ತಕ್ಕ ಹಾಗೆ ತಮ್ಮ ಬದುಕನ್ನು ಬದ್ಧವಾಗಿಸಿಕೊಂಡ ವಿರಸಂ ಎಂದರೆ ಪ್ರಭುತ್ವಕ್ಕೆ ಯಾವಾಗಲೂ ಕಣ್ಣು ಕೆಂಪು. ಮೊನ್ನೆ ಆಂಧ್ರ ಸರ್ಕಾರ ಇದನ್ನು ಬ್ಯಾನ್ ಕೂಡ ಮಾಡಿತ್ತಲ್ಲದೆ ಅದರ ಪ್ರಮುಖರಾದ ಕವಿ ವರವರರಾವ್ ಮತ್ತು ಕಲ್ಯಾಣರಾವ್‌ರನ್ನು ಬಂಧಿಸಿ ಜೈಲಿಗೆ ಕಳಿಸಿತ್ತು.

ಇದೇ ಜೂನ್10-11ರಂದು ಅದರ 20ನೇ ಮಹಾಸಭೆ.



ಈ ಸಂದರ್ಭದಲ್ಲಿ ಅವರು ಹೊರಡಿಸಿರುವ ಕರಪತ್ರದಲ್ಲಿ ವಿರಸಂ ಎಂದರೆ ಪ್ರಭುತ್ವಕ್ಕೆ ಕಣ್ಣುರಿ ಏಕೆ ಎಂದು ವಿವರಿಸಿದ್ದಾರೆ. ಅದರ ಕೆಲವು ಸಾಲುಗಳು:

"ಪ್ರಭುತ್ವಕ್ಕೆ ವಿರಸಂ ಎಂದರೆ ಕಣ್ಣುರಿ. ಏಕೆಂದರೆ ಅದು ತಾನು ಕಾಗದದ ಮೇಲೆ ಬರೆದ ಅಕ್ಷರಕ್ಕೆ ಬದ್ಧವಾಗಿ ನಿಂತಿದ್ದಕ್ಕೆ....

ಕಷ್ಟಜೀವಿಗಳ ಎರಡು ಪಕ್ಕಕ್ಕೆ ನಿಂತು ತಾನು ಅವರ ಪರವಾಗಿದ್ದೇನೆ ಎಂದು ಬೆನ್ನು ತಟ್ಟುವುದೇ ಕವಿಯ ಕರ್ತವ್ಯ ಎಂದು ಪ್ರಕಟಿಸಿದ್ದಕ್ಕೆ....


ವಿರಸಂನಲ್ಲಿ ಕ್ರಾಂತಿ, ಸಾಹಿತ್ಯ ರಚನೆ, ಸಂಘ ನಿರ್ಮಾಣ ಇವೆಲ್ಲವೂ ಸಮಾನ ಪ್ರಾಮುಖ್ಯತೆಯುಳ್ಳ ಜವಾಬ್ದಾರಿಯಾಗಿಯೂ, ಕರ್ತವ್ಯವಾಗಿಯೂ, ಒಂದು ಸಾಮೂಹಿಕ ಸಾಹಿತ್ಯಾಚರಣೆಯಾಗಿ ನಡೆಸಿದ್ದಕ್ಕೆ...."

No Comments

"ಹೌದು ನಾನು ರಾವಣನೇ.."

-ಕರುಣಾನಿಧಿ.

ಜಯಲಲಿತಾ ತನ್ನನ್ನು ಕಲಿಯುಗದ ರಾವಣನೆಂದು ಟೀಕಿಸಿದ್ದರ ಕುರಿತು



"ಅನುಭವಿ ಆಟಗಾರರನ್ನು ಆಡಿಸಿದ್ದರೆ ಕ್ಷೇತ್ರರಕ್ಷಣೆಗೆ ಸಹಾಯಕವಾಗುತ್ತಿತ್ತೆಂದು ಹೇಳಲಾರೆ"



-ಏಕದಿನ ಸರಣಿ ಸೋತ ನಂತರ ದ್ರಾವಿಡ್

"ಅಸಹಾಯಕ ರೋಗಿಗಳನ್ನು ವಿಧಿಯ ಕೈಗೊಪ್ಪಿಸುವ ಮೆಡಿಕಲ್ ವಿದ್ಯಾರ್ಥಿಗಳ ವರ್ತನೆ ಘೋರವಾದದ್ದು"



-ಸುಪ್ರೀಂ ಕೋರ್ಟ್

ನಂಬಿದ್ರೆ ನಂಬಿ ಬಿಟ್ರೆ ಬಿಡಿ:


"ಬಿ.ಜೆ.ಪಿ.ಯಲ್ಲಿ ಒಳಜಗಳವಿಲ್ಲ. ಅದೆಲ್ಲಾ ಮಾಧ್ಯಮದ ವಿಕೃತಿ"

-ಅಟಲ್ ಬಿಹಾರಿ ವಾಜಪೇಯಿ



"ಕೃಷಿ ಕ್ಷೇತ್ರದ ಬೆಳವಣಿಗೆ ಶೇ.2.3ರ ಬದಲಿಗೆ ಶೇ.3.9ಕ್ಕೆ ಏರಿದೆ"

-ಮಾಂಟೆಕ್‌ಸಿಂಗ್ ಅಹ್ಲುವಾಲಿಯ. ಯೋಜನಾ ಆಯೋಗದ ಉಪಾಧ್ಯಕ್ಷ.



"ಶಾಸಕರನ್ನು ಕುದುರೆಗೆ ಹೋಲಿಸುವುದು ಸರಿಯಲ್ಲ"

-ದೇವೇಗೌಡ



"ಲಖನೌನಲ್ಲಿ ಕಸಗುಡಿಸುವ ಹುದ್ದೆಗೆ 1700 ಬ್ರಾಹ್ಮಣರ ಅರ್ಜಿ.

-ಪತ್ರಿಕಾ ವರ

ವಾರದ ಘೋಷಣೆ:

"ಈ ದೇಶದಲ್ಲಿ ನೈಜ ಪ್ರಜಾಪ್ರಭುತ್ವವೇ ಇಲ್ಲ"

-ಮೇಧಾ ಪಾಟ್ಕರ್



ಹೆಣ್ಣು ಮಾನವ ಬದುಕಿನ ಬೆಳಕು. ಹೆಣ್ಣ ಇಲ್ಲದಿದ್ದರೆ ಇಡೀ ಭೂಮಂಡಲವೇ ಖಾಲಿ ಖಾಲಿ... ಕತ್ತಲೆ ಬೆಳಕುಗಳ ಅರ್ಥವೇ ಹೆಣ್ಣು....

ಈ ಸಲದ ಸೂಕ್ತಿಗಳು ಹೆಣ್ಣನ್ನು ಕುರಿತವು. "ದೇವರು ಮಾಡಿದ ಮೊದಲ ತಪ್ಪೆಂದರೆ ಹೆಣ್ಣನ್ನು ಸೃಷ್ಟಿಸಿದ್ದು" ಎಂದು ಲಾರೆನ್ಸ್‌ನಂಥ ಗಂಡಸರೇ ಹೇಳುವಾಗ ಇಡೀ ಜಗತ್ತಿನ ಬೌದ್ಧಿಕತೆ ಇನ್ನೆಂಥಾ ಅಂಧಕಾರದಲ್ಲಿರಬೇಕು.

-ಮೂತೀ

ಹುಡುಗಿಯೊಬ್ಬಳ ರಕ್ತದ ಪುಟಗಳು

ಹಲವು ಗಂಟೆಗಳ ಕಾಲ ಆರಣ್ಯದ ಮೌನವನ್ನು ಕದಡಿದ್ದ ಬಂದೂಕುಗಳ, ಬಾಂಬುಗಳ ಸದ್ದು ನಿಂತಿತ್ತು. ಆ ದಟ್ಟ ಆರಣ್ಯದ ನೆಲದ ಮೇಲೆ ಗುಂಡೇಟಿಗೆ ಬಲಿಯಾದ ಅವಳ ಹೆಣ ಬಿದ್ದಿತ್ತು, ಪಕ್ಕದಲ್ಲೇ ಒಂದು ಲಡಕಾಸಿ ಬಂದೂಕು ಮತ್ತು ಪುಸ್ತಕ, ಪೆನ್, ಔಷಧಿ ಇತ್ಯಾದಿ ಸಾಮಾನುಗಳಿದ್ದ ಅವಳ ಬ್ಯಾಗ್ ಇದ್ದವು.

ಸಮಾನ ಸಮಾಜಕ್ಕಾಗಿ ಆಕೆ ಕಾಡನ್ನು ಹೊಕ್ಕುವ ಮುನ್ನ ಪ್ರೀತಿ ತುಂಬಿದ್ದ ಸಂಸಾರದಲ್ಲಿ ಬೆಳೆದಿದ್ದಳು. ವೈದ್ಯಕೀಯ ಕಾಲೇಜು ಸೇರಿ ಡಾಕ್ಟರ್ ಆಗಿದ್ದಳು. ತಾನು ಚಿಕ್ಕವಳಾಗಿದ್ದಾಗಿನಿಂದಲೂ ಗೊತ್ತಿದ್ದ ಯುವಕನನ್ನು ಅಪಾರವಾಗಿ ಪ್ರೀತಿಸಿದ್ದಳು. ಎಲ್ಲರಂತೆ ತಾನೂ ಒಂದು ಚಿಕ್ಕ ಸಂಸಾರ, ತೃಪ್ತಿ ನೀಡುವ ವೃತ್ತಿ, ನೆಮ್ಮದಿಯ ಜೀವನ ಸಾಗಿಸಬೇಕೆಂದು ಕನಸು ಕಂಡಿದ್ದಳು. ಆದರೆ ಅದ್ಯಾವುದೂ ನನಸಾಗದೆ ತನ್ನ 27 ನೇ ವಯಸ್ಸಿನಲ್ಲೇ ಆಕೆ ಆರಣ್ಯದಲ್ಲಿ ಅನಾಥ ಶವವಾಗಿದ್ದಳು.

ಅವಳ ಹೆಸರು ಡಾಂಗ್ ಥುಯ್ ಟ್ರಾಮ್. 1965 ರಿಂದ 1975 ರವರೆಗೆ ವಿಯಟ್ನಾಂ ಮೇಲೆ ಅಮೆರಿಕಾ ಯುದ್ಧ ನಡೆಸಿದಾಗ ಟ್ರಾಮ್ ವಿಯಟ್‌ಕಾಂಗ್‌ರ ಪರವಾಗಿ ಮೂರು ವರ್ಷ ಹೋರಾಡಿದ್ದಳು. ತನ್ನ ದೇಶದ ಯೋಧರಿಗೆ ಚಿಕಿತ್ಸೆ ನೀಡುತ್ತಾ ನೆರವಾಗಿದ್ದಳು. ಒಂದು ದಿನ ಆಕೆ ಇದ್ದ ಕ್ಯಾಂಪಿನ ಮೇಲೆ ಅಮೆರಿಕಾದ ಸೈನಿಕರು ದಾಳಿ ಇಟ್ಟಾಗ ಇತರರಿಗೆ ಪಾರಾಗಲು ಹೇಳಿ ತಾನು ಒಬ್ಬಳೇ ನಿಂತು ವೈರಿಗಳೊಂದಿಗೆ ಸೆಣಸಾಡಿದ್ದಳು. ಕೊನೆಗೆ ತನ್ನ ಜೀವವನ್ನೇ ಕಳೆದುಕೊಂಡಳು.



ಟ್ರಾಮ್ ಸತ್ತಾಗ ಅವಳ ಬ್ಯಾಗ್‌ನಲ್ಲಿ ಎರಡು ಪುಟ್ಟ ಡೈರಿಗಳಿದ್ದವು. ಆ ಡೈರಿಗಳಲ್ಲಿ ಆಕೆ ಯುದ್ಧ, ರೋಗಿಗಳು, ಸ್ನೇಹಿತರು, ಆಶೆ-ನಿರಾಶೆ, ರಕ್ತ, ಬೆವರು, ಸಿದ್ಧಾಂತ, ಸತ್ತ ಸಹಚರರ ಸ್ಮರಣೆ... ಎಲ್ಲವನ್ನೂ ದಾಖಲಿಸಿದ್ದಾಳೆ. ಎಲ್ಲರೂ ಯುದ್ಧ/ಹೋರಾಟಗಳ ಬಗ್ಗೆ ವೀರಾವೇಶದ ಕತೆಗಳನ್ನು ಬಿತ್ತುವಾಗ, ಮೂರು ವರ್ಷಗಳ ಕಾಲ ಹೋರಾಡಿದ ಟ್ರಾಮ್ ಅದರ ವಾಸ್ತವ ಚಿತ್ರವನ್ನು ನೀಡಿದ್ದಾಳೆ. ಅವಳ ಡೈರಿಯಲ್ಲಿರುವ ಹಲವನ್ನು ಇಲ್ಲಿ ನೀಡುತ್ತಿದ್ದೇನೆ.

"ಇಲ್ಲ, ನಾನು ಪುಟ್ಟ ಮಗುವಲ್ಲ, ಬದಲಾಗಿ ಕಷ್ಟಗಳನ್ನು ಎದುರಿಸುತ್ತಾ ಗಟ್ಟಿಯಾಗಿದ್ದೇನೆ; ದೊಡ್ಡವಳಾಗಿದ್ದೇನೆ. ಆದರೂ ಈ ಕ್ಷಣ ನಾನ್ಯಾಕೆ ನನ್ನ ತಾಯಿಯ ಪ್ರೀತಿಯ ಸ್ಪರ್ಶಕ್ಕಾಗಿ ಕಾತರಿಸುತ್ತಿದ್ದೇನೆ? ನನ್ನ ತಾಯಿ ಸಿಗದಿದ್ದರೆ ಹೋಗಲಿ, ಹತ್ತಿರದ ಗೆಳತಿಯ ನೆರವಿನ ಹಸ್ತ ಯಾಕೆ ನನಗೆ ಈಗ ಬೇಕೆನಿಸುತ್ತಿದೆ? ಅದೂ ಇಲ್ಲದಿದ್ದರೆ ಕನಿಷ್ಠ ಪರಿಚಿತರ ಸಾನಿಧ್ಯಕ್ಕಾಗಿ ನಾನ್ಯಾಕೆ ಕಾತರಳಾಗಿದ್ದೇನೆ? ಏಕಾಂಗಿಯಾಗಿರುವ ನನ್ನ ಕೈ ಹಿಡಿಯಲು ಯಾರಾದರೊಬ್ಬರು ದಯವಿಟ್ಟು ಬನ್ನಿ, ಬಂದು ನನಗೆ ಪ್ರೀತಿ ನೀಡಿ, ಧೈರ್ಯ ತುಂಬಿ ನನ್ನ ಮುಂದಿರುವ ಕಠೋರತೆ ಮತ್ತು ಸವಾಲುಗಳು ತುಂಬಿರುವ ರಸ್ತೆಯನ್ನು ಹಾದು ಹೋಗಲು ನೆರವಾಗಿ....

ಈ ನನ್ನ ಪುಟ್ಟ ಪುಸ್ತಕದ ಹಾಳೆಗಳು ರಕ್ತದಿಂದಲೇ ತುಂಬಿ ಹೋಗುತ್ತಿವೆ. ಆದರೂ ಥುಯ್ (ಟ್ರಾಮ್‌ಗಳ ಅಡ್ಡ ಹೆಸರು) ನೀನು ನೆನಪಿಟ್ಟುಕೊ... ಕಳೆದ ಇಪ್ಪತ್ತು ವರ್ಷಗಳಿಂದ ನಮ್ಮ ದೇಶದ ಜನರ ರಕ್ತ, ಬೆವರು, ಕಣ್ಣೀರು ಸಾಕಷ್ಟು ಹರಿದಿದೆ. ಈಗ, ಈ ಸಾವು ಮತ್ತು ಬದುಕಿನ ಕೊನೆಯ ಹೋರಾಟದಲ್ಲಿ ಪ್ರತಿತ್ಯಾಗವೂ ಮುಖ್ಯ....

ನನ್ನ ಪ್ರೀತಿಯ ಅಪ್ಪ-ಅಮ್ಮ, ನಾನು ಚಿಕ್ಕವಳಾಗಿದ್ದಾಗಿನಿಂದಲೂ ನೀವು ಪ್ರೀತಿಸಿದ ಈ ನಿಮ್ಮ ಮಗಳು ಬದುಕುವುದನ್ನು ನಿಲ್ಲಿಸಿಲ್ಲ, ಬದಲಾಗಿ ಇಲ್ಲಿ ನಾನು ವಾಸ್ತವಿಕ ಜೀವನ ನಡೆಸುತ್ತಿದ್ದೇನೆ. ಇಲ್ಲಿ ಪ್ರೀತಿ, ದ್ವೇಷ, ನಂಬಿಕೆ, ದುಃಖ ಎಲ್ಲವೂ ಇವೆ. ಈ ನನ್ನ ಜೀವನದಲ್ಲಿ ರಕ್ತ, ಕಣ್ಣೀರು, ಬೆವರು ತುಂಬಿವೆ; ಹಾಗೆಯೇ ಸಾವಿರ ಗಟ್ಟಲೆ ಕಷ್ಟಗಳ ನಡುವೆಯೂ ಜಯ ಸಾಧಿಸುತ್ತೇವೆ ಎಂಬ ನಂಬಿಕೆ ಇದೆ. ನಾನು ಇದೆಲ್ಲವನ್ನು ಹಾದು ಬರುತ್ತೇನೆ ಅನ್ನಿಸುತ್ತಾ ನಿಮಗೆ....?

ನನ್ನ ಪ್ರೀತಿಯ M, ಎಲ್ಲಿದ್ದೀಯಾ ನೀನು? ನಾವಿಬ್ಬರೂ ಒಬ್ಬರಿಂದ ಇನ್ನೊಬ್ಬರು ಇಷ್ಟು ದೂರವಾಗಿದ್ದೀವಾ ಪ್ರಿಯತಮ? ಯಾಕೆ ನನ್ನ ಹೃದಯ ಇನ್ನೂ ರಕ್ತದ ಕಣ್ಣೀರನ್ನು ತೊಟ್ಟಿಕ್ಕುತ್ತಿದೆ?....

ನಿನ್ನೆ, ತುಂಬಾ ಗಾಯಗೊಂಡಿದ್ದ 21 ವರ್ಷದ ಸೈನಿಕನೊಬ್ಬ ನನ್ನ ಹೆಸರನ್ನು ಹಿಡಿದು ಕರೆದ... ನಾನು ಅವನಿಗೆ ನೆರವಾಗುತ್ತೇನೆ ಎಂಬ ಆಶಯದಿಂದ. ಆದರೆ ನಾನು ಅವನಿಗೆ ನೆರವಾಗಲಾಗಲಿಲ್ಲ. ನನ್ನ ಈ ನಿರುಪಯುಕ್ತ ಕೈಗಳಲ್ಲಿ ಆತ ಕೊನೆ ಉಸಿರೆಳೆದಾಗ ನಾನು ಕಣ್ಣೀರಿಡುವ ಹೊರತಾಗಿ ಏನನ್ನೂ ಮಾಡಲಾಗಲಿಲ್ಲ....


ಇವತ್ತು ನನ್ನ ಹುಟ್ಟಿದ ಹಬ್ಬ, ನಾಲ್ಕು ದಿಕ್ಕುಗಳಿಂದ ವೈರಿಗಳ ಬಂದೂಕುಗಳ ಶಬ್ದ ಕೇಳಿಸುತ್ತಿದೆ. ಆದರೆ ಈ ಸನ್ನಿವೇಶ ನನಗೆ ಮಾಮೂಲಾಗಿದೆ. ನನ್ನ ಹೆಗಲ ಮೇಲೆ ರಕ್‌ಸ್ಯಾಕ್ ಹೊತ್ತು ನನ್ನ ರೋಗಿಗಳು ತಪ್ಪಿಸಿಕೊಳ್ಳುವಂತೆ ನೋಡಿಕೊಳ್ಳುವುದೇ ಮುಖ್ಯವಾಗಿದೆ. ಎರಡು ವರ್ಷ ಯುದ್ಧ ಭೂಮಿಯಲ್ಲಿ ಕಳೆದಿರುವ ನನಗೆ ಇದೆಲ್ಲ ಎಂತಹದ್ದೂ ಅಲ್ಲ...."

ಕಂಡಹಾಗೆ



ಯುದ್ಧದ ಕಠೋರತೆ, ಹೋರಾಟದ ಹಸಿವು, ಕಾಡಿನಲ್ಲಿನ ಕಷ್ಟದ ಜೀವನ, ವೈದ್ಯೆಯಾಗಿ ತಾನು ಸಲ್ಲಿಸುತ್ತಿದ್ದ ಸೇವೆ, ಸಾವನ್ನು ತಡೆಗಟ್ಟಲಾರದೇ ಮರಣ ಹೊಂದಿದ ಯುವಕರಿಗಾಗಿ ಕಣ್ಣೀರು, ಪ್ರೀತಿಯ ಹಂಬಲ, ಏಕಾಂಗಿತನದ ನೋವು, ಸೈದ್ಧಾಂತಿಕ ಬದ್ಧತೆ... ಇವೆಲ್ಲವನ್ನೂ ಮನಕರಗುವಂತೆ ಬಿಂಬಿಸಿರುವ ಟ್ರಾಮ್‌ಳ ಡೈರಿಗಳು ಅಮೆರಿಕನ್ ಸೈನಿಕನೊಬ್ಬನಿಗೆ ಸಿಕ್ಕಿದವು. ವಿಯಟ್‌ಕಾಂಗ್‌ಗಳ ಕ್ಯಾಂಪುಗಳನ್ನು ಧ್ವಂಸ ಮಾಡಿದ ನಂತರ ಅಲ್ಲಿ ಸಿಕ್ಕ ದಾಖಲೆಗಳನ್ನು ಪರಿಶೀಲಿಸಿ, ಅನಗತ್ಯವಾದದ್ದನ್ನು ಸುಟ್ಟು ಹಾಕುವ ಜವಾಬ್ದಾರಿಯನ್ನು ಆ ಸೈನಿಕನಿಗೆ ವಹಿಸಲಾಗಿತ್ತು. ಈ ಕಾರ್ಯದಲ್ಲಿ ಅವನಿಗೆ ನೆರವಾಗುತ್ತಿದ್ದ ದುಭಾಷಿ ಟ್ರಾಮ್‌ಳ ಡೈರಿಗಳನ್ನು ಓದಿ "ಇದನ್ನು ಸುಡಬೇಡ. ಇದರಲ್ಲೇ ಸಾಕಷ್ಟು ಬೆಂಕಿ ಇದೆ" ಎಂದು ಹೇಳಿದ್ದ. ಅದರಂತೆ ಆಕೆಯ ಡೈರಿಗಳನ್ನು ಜೋಪಾನವಾಗಿಟ್ಟುಕೊಂಡ ಆತ ವಿಯಟ್ನಾಂ ಯುದ್ಧ ಅಂತ್ಯಗೊಂಡ 35 ವರ್ಷಗಳ ನಂತರ ಕಳೆದ ವರ್ಷ ಅವುಗಳನ್ನು ಟ್ರಾಮ್‌ಳ 81 ವರ್ಷ ವಯಸ್ಸಿನ ತಾಯಿಗೆ ಹಿಂದಿರುಗಿಸಿದ್ದ.

ತನ್ನ ಮಗಳನ್ನು ಕಳೆದುಕೊಂಡ ಆ ತಾಯಿ ಅವಳ ಶವವನ್ನೂ ನೋಡಿರಲಿಲ್ಲ, ಅಂತ್ಯ ಸಂಸ್ಕಾರವನ್ನೂ ಮಾಡಲಾಗಿರಲಿಲ್ಲ. ಆದರೆ ತನ್ನ ಅಂತರಂಗವನ್ನೇ ದಾಖಲಿಸಿದ್ದ ಮಗಳ ಡೈರಿಗಳನ್ನು ಕಂಡು ಅವುಗಳನ್ನು ಬಿಗಿಯಾಗಿ ತನ್ನ ಎದೆಗೆ ಅಪ್ಪಿಕೊಂಡಳು. "ಈ ಪುಸ್ತಕಗಳು ನನ್ನ ಮಗಳ ಆತ್ಮ. ಅವಳ ಆತ್ಮವನ್ನು ನಾನು ಅಪ್ಪಿಕೊಂಡಿದ್ದೇನೆ" ಎಂದು ಟ್ರಾಮ್‌ಳ ತಾಯಿ ಕಣ್ಣೀರಿಟ್ಟಿದ್ದಳು.



ಟ್ರಾಮ್ ತಾಯಿ

ಆ ಡೈರಿಗಳೊಂದಿಗೆ ಟ್ರಾಮ್‌ಳ ಒಂದು ಚಿತ್ರವೂ ಇತ್ತು. ಕಾಡಿನಲ್ಲಿ ತೆಗೆದಿರುವ ಆ ಚಿತ್ರದಲ್ಲಿ ಆ ಯುವತಿ ವಿಯಟ್ನಾಂ ದೇಶದ ಒಂದು ಟೋಪಿ ತೊಟ್ಟು ನಸುನಗೆ ಬೀರುತ್ತಿದ್ದಾಳೆ; ಯೌವ್ವನ, ಪ್ರೀತಿ, ಕಾಳಜಿ, ನಂಬಿಕೆ ಹೊಂದಿರುವ ಆಕೆ ಆ ಚಿತ್ರದಲ್ಲಿ ಸುಂದರವಾಗಿ ಕಾಣಿಸುತ್ತಿದ್ದಾಳೆ....

ಸಮಾಜವಾದದಲ್ಲಿ ಭರವಸೆ ಇಟ್ಟಿದ್ದ, ಅಮೆರಿಕನ್ನರನ್ನು "ರಕ್ತದಾಹಿ ಪಿಶಾಚಿಗಳು" ಎಂದು ನಂಬಿದ್ದ, ತನ್ನ ದೇಶದ ಹೋರಾಟಗಾರರಿಗೆ ನೆರವಾಗಿದ್ದ, ತಾನು ಪ್ರೀತಿಸಿದ ಯುವಕ 'M' ನೊಂದಿಗೆ ಇರಬೇಕೆಂದು ಆಶಿಸಿದ್ದ, ತನ್ನ ದೇಶಕ್ಕಾಗಿ ತನ್ನ ಪ್ರಾಣವನ್ನೇ ತ್ಯಜಿಸಿದ್ದ ಈಕೆ ನಿಜವಾಗಲೂ ಅಪ್ರತಿಮ ಯುವತಿ...

ಅಂದಹಾಗೆ, ಟ್ರಾಮ್‌ಳ ಡೈರಿಗಳು ವಿಯಟ್ನಾಂನ ದಿನಪತ್ರಿಕೆಗಳಲ್ಲಿ ಧಾರವಾಹಿಯಾಗಿ ಪ್ರಕಟಗೊಂಡ ನಂತರವೂ ಪುಸ್ತಕದ ರೂಪದಲ್ಲಿ ಹೊರಬಂದು ಹತ್ತಿರತ್ತಿರ ನಾಲ್ಕು ಲಕ್ಷ ಪ್ರತಿಗಳು ಮಾರಾಟವಾಗಿವೆ. ಆ ಮೂಲಕ ಆಕೆ ವಿಯಟ್ನಾಂ ಜನರ ಕಣ್ಮಣಿಯಾಗಿದ್ದಾಳೆ.

'ಜೀವನ ಎಂಬುದೇ ಒಂದು ಕಲ್ಲು-ಮುಳ್ಳುಗಳ ಹಾದಿಯಾಗಿರುವಾಗ ಟ್ರಾಮ್ ಎಂಬ ಯುವತಿ ತನ್ನ ದೇಶದ ಪರವಾಗಿ ಹೋರಾಡುತ್ತಾ ರಣರಂಗದಲ್ಲಿನ ಆಶೆ-ಹತಾಶೆ, ನಂಬಿಕೆ-ಅನುಮಾನ, ನೋವು-ನಲಿವುಗಳನ್ನು ದಾಖಲಿಸುತ್ತಾ "ಅಯ್ಯೋ ನಾನ್ಯಾಕೆ ಕನಸು ಮತ್ತು ಪ್ರೀತಿಗಳನ್ನು ಇಷ್ಟೊಂದು ಪ್ರಮಾಣದಲ್ಲಿ ಹೊತ್ತು ಹುಡುಗಿಯಾಗಿ ಜನಿಸಿದೆ?" ಎಂದು ಹತಾಶೆ ವ್ಯಕ್ತಪಡಿಸುತ್ತಾಳೆ.

ಒಂದು ಕಡೆ "ಯುದ್ಧ ಯಾರ ಬಗ್ಗೆಯೂ ಚಿಂತಿಸುವುದಿಲ್ಲ" ಎಂದು ಹೇಳುವ ಟ್ರಾಮ್ ಇನ್ನೊಂದು ಕಡೆ "ಯುದ್ಧ ಭೂಮಿಯಲ್ಲಿ ಮಾತ್ರ ಮನುಷ್ಯನೊಬ್ಬನ ನಿಜವಾದ ವ್ಯಕ್ತಿತ್ವವನ್ನು ಅಳೆಯಬಹುದು... ನಾನು ಇಲ್ಲಿ ಹಲವಾರು ಉಪಯುಕ್ತ ಕೆಲಸಗಳಲ್ಲಿ ತೊಡಗಿದ್ದೇನೆ. ಗಾಯಾಳುಗಳಿಗೆ ಆಶಾಕಿರಣವಾಗುತ್ತಾ, ಇತರರಿಗೆ ಸಂತೋಷ ಕೊಡುತ್ತಿದ್ದೇನೆ. 15 ವರ್ಷಗಳ ಕಾಲ ಸಮಾಜವಾದದ ಶಾಲೆಯಲ್ಲಿ ಕಲಿತಿದ್ದನ್ನು ಇಲ್ಲಿ ಅಳವಡಿಸುತ್ತಿದ್ದೇನೆ. ಇಲ್ಲಿನ ಕಷ್ಟದ ಪರಿಸ್ಥಿತಿಯಲ್ಲಿ ನಾನು ನಿಜವಾದ ಸಂತೋಷವನ್ನು ಪಡೆಯುತ್ತೇನೆ...."

ಈ ಟ್ರಾಮ್ ಎಂಬ ಹುಡುಗಿ ನನ್ನಲ್ಲಿ ಮೂಡಿಸಿದ ಕುತೂಹಲವನ್ನು, ಮೆಚ್ಚುಗೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಪುಟ್ಟ ಪ್ರಯತ್ನ ಈ ಟಿಪ್ಪಣಿ....

-ಗೌರಿ ಲಂಕೇಶ್

ಚಂದದ ಫೋಟೋಗಳೊಂದಿಗೆ ನೋವಿನ ಪತ್ರ....

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಉಪ್ಪಿನಂಗಡಿಯ ಉಪ್ಪಿನ ಮಹಿಮೆಯೋ ಏನೋ.... ಆ ಸಣ್ಣ ಊರು ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಿಂದ ಹಲವಾರು ಪ್ರತಿಭಾನಿತ್ವ ಮುಸ್ಲಿಮ್ ಬರಹಗಾರರು ಉದ್ಭವಿಸಿದ್ದಾರೆ. ಅವರುಗಳಲ್ಲೊಬ್ಬನಾದ, ಚಿಕ್ಕ ವಯಸ್ಸಿನಲ್ಲೇ ನಮ್ಮನ್ನೆಲ್ಲ ತನ್ನ ಸೂಕ್ಷ್ಮ ಬರಹಗಳಿಂದ ಮೆಚ್ಚಿಸಿ ಚಿಕ್ಕವಯಸ್ಸಿನಲ್ಲೇ ಕಣ್ಮರೆಯಾದ ನಮ್ಮ ಬಿ.ಎಂ. ರಶೀದ್‌ನನ್ನು ಮರೆಯಲಾದೀತೆ?

ಇದೇ ಉಪ್ಪಿನಂಗಡಿಯಿಂದ ಬಂದ ಮತ್ತೊಬ್ಬ ಮುಸ್ಲಿಮ್ ಬರಹಗಾರ ರಫೀಕ್ ಉಪ್ಪಿನಂಗಡಿ. ತನ್ನ ಲೇಖನಗಳ ಮೂಲಕ ನನ್ನ ಗಮನವನ್ನು ಸೆಳೆದಿದ್ದ, ಅಚ್ಚ ಕನ್ನಡದಲ್ಲಿ ಅಚ್ಚರಿ ಮೂಡಿಸುವಂತೆ ಬರೆಯಬಲ್ಲ ಈ ರಫೀಕ್.

ಕಳೆದ ಸೋಮವಾರ ಇಡೀ ದಿನವನ್ನು ಅಮ್ಮನ [illegible] ತೋಟದಲ್ಲಿ ಕಳೆದು ಸುಸ್ತಾಗಿ ರಾತ್ರಿ [illegible] ಗಂಟೆಗೆ ಆಫೀಸಿಗೆ ಹಿಂದಿರುಗಿದಾಗ ನನ್ನ ಟೇಬಲ್ ಮೇಲೆ ನನ್ನ ಭಾವಚಿತ್ರವಿದ್ದ ಐದು ದೊಡ್ಡ ಫೋಟೋಗಳಿದ್ದವು. ಯಾವುದೋ ಸಭೆಯಲ್ಲಿ ಸೆರೆಹಿಡಿದಿದ್ದ ನನ್ನ ಈ ಚಿತ್ರಗಳನ್ನು ಯಾರು ಕಳುಹಿಸಿರಬಹುದು ಎಂದು ನೋಡಿದಾಗ ನನಗೆ ಅಚ್ಚರಿ ಮತ್ತು ದುಃಖ... ಎರಡೂ ಕಾದಿತ್ತು, ಏಕೆಂದರೆ ಆ ಫೋಟೋಗಳೊಂದಿಗೆ ಬಂದಿದ್ದ ಪತ್ರ ಹೀಗಿತ್ತು:

"ಆತ್ಮೀಯ ಗೌರಿ ಲಂಕೇಶ್ ಅವರಿಗೆ ನಮಸ್ಕಾರಗಳು.

ನಾನು ನಿಮ್ಮ ಈ ಚಿತ್ರಗಳನ್ನು ತೆಗೆದು ಎಷ್ಟು ಸಮಯವಾಯಿತು ಎಂದು ನನಗೆ ನೆನಪಿಲ್ಲ, ಇವುಗಳನ್ನು ನಿಮಗೆ ಕಳುಹಿಸಬೇಕು ಎಂದು ಪ್ರಯತ್ನಿಸುತ್ತಿದ್ದೆ, ಆದರೆ ಹಲವಾರು ಕಾರಣಗಳಿಂದಾಗಿ ಕಳುಹಿಸಲು ಸಾಧ್ಯವಾಗಲಿಲ್ಲ, ನನ್ನ ಪತ್ನಿಯೂ ಈ ಚಿತ್ರಗಳನ್ನು ಕಳುಹಿಸುವಂತೆ ಒತ್ತಾಯಿಸುತ್ತಲೇ ಇದ್ದಳು. ಈ ಬಾರಿ ಅವುಗಳನ್ನು, ಕಳುಹಿಸುವ ಜವಾಬ್ದಾರಿಯನ್ನು ಅವಳಿಗೇ ವಹಿಸಿದ್ದೇನೆ.

ಪತ್ರಿಕೆಯ ಮೊದಲ ವಾರ್ಷಿಕೋತ್ಸವಕ್ಕೆ ಮುನ್ನ ಕಳುಹಿಸೋಣ ಎಂದುಕೊಂಡಿದ್ದೆ. ಆದರೆ ನನ್ನ ಅನಾರೋಗ್ಯದಿಂದಾಗಿ ಅದು ಸಾಧ್ಯವಾಗಲಿಲ್ಲ.

ಎರಡು ವರ್ಷಗಳ ಹಿಂದೆ ಕ್ಯಾನ್ಸರ್‌ಗೆ ತುತ್ತಾದ ನಾನು ಅದರ ವಿರುದ್ಧ ಹೋರಾಡುವುದರಲ್ಲಿಯೇ ಕಾಲ ಕಳೆಯುತ್ತಿದ್ದೇನೆ. ಈ ಚಿತ್ರಗಳ ನೆಗೆಟಿವ್‌ಗಳನ್ನು ಹುಡುಕಿ ಪ್ರಿಂಟ್ ಹಾಕಿ ಕಳುಹಿಸುವ ಶಕ್ತಿ ಈಗ ನನಗೆ ಇಲ್ಲ. ಆದ್ದರಿಂದ ಕಂಪ್ಯೂಟರ್‌ನಲ್ಲಿ ಸ್ವಲ್ಪ ಟಚ್ ಅಪ್ ಮಾಡಿ ಕಳುಹಿಸುತ್ತಿದ್ದೇನೆ.

ಇತಿ

ರಫೀಕ್ ಉಪ್ಪಿನಂಗಡಿ

ಈ ಪತ್ರದ ಅಡಿ ನಾಲ್ಕೈದು ಸಾಲುಗಳಿದ್ದು ಅವು ಹೀಗಿದ್ದವು:

"ಈ ಚಿತ್ರಗಳನ್ನು ರಫೀಕ್ ಕಂಪ್ಯೂಟರ್‌ನಲ್ಲಿ ಟಚ್ ಅಪ್ ಮಾಡಿ ಎರಡು ಮೂರು ತಿಂಗಳಾಯ್ತು, ಈಗ ಅವರು ಮಂಗಳೂರಿನ ಆಸ್ಪತ್ರೆಯಲ್ಲಿ ಕೀಮೋಥೆರಪಿ ತೆಗೆದುಕೊಳ್ಳುತ್ತಿದ್ದು ಇವುಗಳನ್ನು ನಿಮಗೆ ಕಳುಹಿಸಲು ನನಗೆ (ಅವರ ಪತ್ನಿ ಗೀತಾ) ಹೇಳಿದ್ದಾರೆ. ಈಗ ನಾನು 4-5 ದಿನಗಳ ಮಟ್ಟಿಗೆ ಮೈಸೂರಿಗೆ ಬಂದಿದ್ದು ಇವುಗಳನ್ನು ಕೊರಿಯರ್ ಮಾಡುತ್ತಿದ್ದೇನೆ. ಫೋಟೋ ತಲುಪಿದ ಕೂಡಲೆ ತಿಳಿಸಿ.

ಇಂತಿ

ಗೀತಾ. ಜೆ

ಪತ್ರ ಓದಿ ಮುಗಿಸುತ್ತಿದ್ದಂತೆ ಪತ್ರದಲ್ಲಿದ್ದ ಮೊಬೈಲ್ ನಂಬರ್‌ಗೆ ಫೋನ್ ಮಾಡಿದರೆ ರಫೀಕ್ ಮತ್ತು ಗೀತಾ ಇಬ್ಬರೂ ಸಿಕ್ಕಿದರು. ಲಂಗ್ ಕ್ಯಾನ್ಸರ್‌ನಿಂದಾಗಿ ಆಸ್ಪತ್ರೆಯಲ್ಲಿದ್ದ ರಫೀಕ್‌ನೊಂದಿಗೆ ಮಾತನಾಡಿ, ಆರೋಗ್ಯದ ಬಗ್ಗೆ ವಿಚಾರಿಸಿ, ಫೋಟೋಗಳನ್ನು ಕಳುಹಿಸಿದ್ದಕ್ಕೆ ಧನ್ಯವಾದಗಳನ್ನು ಹೇಳಿದೆ.

ರಫೀಕ್ ಉಪ್ಪಿನಂಗಡಿ ಆದಷ್ಟು ಬೇಗ ಚೇತರಿಸಿಕೊಳ್ಳುವಂತಾಗಲಿ ಎಂದು [illegible] ಆಶಿಸುತ್ತೇನೆ. ಅವರಂತಹ ಸೂಕ್ಷ್ಮ ಮನಸ್ಸಿನ ಬರಹಗಾರರು ನಮ್ಮ ನಡುವೆ ಇನ್ನೂ ಬಹಳಷ್ಟು ವರ್ಷ ಇರಬೇಕಾಗಿದೆ.

-ಗೌರಿ

ನೊಂದಷ್ಟು ಹೂ ಹಣ್ಣು ಮಕ್ಕಳೊದ್ದರೆ ಅವಳ ಅಂಗಾಂಗ ಪುಲಕ -ಲಂಕೇಶ್




ನೀವು ಕೆಎಎಸ್ ಆಫೀಸರ್ ಆಗಬೇಕಾ?

ಹಾಗಾದರೆ ಒಂದೋ ನಿಮ್ಮ ಕೈಲಿ ಸಖತ್ ಹಾವಿರಬೇಕು! ಇಲ್ಲಾ ನೀವು ಬ್ಯಾಚುಲರ್ ಆಗಿರಬೇಕು!

ಕೆಪಿಎಸ್‌ಸಿ ಚೇರ್ಮನ್ ಶ್ರೀಮಾನ್ ಕೃಷ್ಣರವರ ಹೊಸ ತಾಳಿಭಾಗ್ಯ ಸ್ಕೀಂ ಇದು. 2005 ರ ಕೆಎಎಸ್ ಬ್ಯಾಚ್‌ನಲ್ಲಿ ಆಯ್ಕೆಯಾಗಿರುವ 153 ಅಭ್ಯರ್ಥಿಗಳ ಪೈಕಿ ಈಗ ಕನಿಷ್ಠ ಎರಡು ಡಜನ್ ಹುಡುಗರು 'ಸ್ವಯಂವರ'ದಲ್ಲಿ ಪೆರೇಡ್ ಮಾಡಿ ಮಂತ್ರಿ, ಶಾಸಕರ ಹೆಣ್ಣುಮಕ್ಕಳನ್ನು ಮದುವೆಯಾಗುವ ಕಮಿಟ್‌ಮೆಂಟ್ ಮಾಡಿಕೊಂಡು ಎಸಿ, ಡಿವೈಎಸ್‌ಪಿ ಇತ್ಯಾದಿ ಹುದ್ದೆ ಗಿಟ್ಟಿಸಿಕೊಂಡಿದ್ದಾರೆ. ಇವರ ನೇಮಕಾತಿ ಆದೇಶ ಹೊರಬೀಳುವುದರ ಹಿಂದೆಯೇ ಮದುವೆಯ ಆಹ್ವಾನ ಪತ್ರಿಕೆಗಳೂ ಪ್ರಿಂಟಾಗುವ ಭರದಲ್ಲಿವೆ.

ಕೆಪಿಎಸ್‌ಸಿ ಚೇರ್ಮನ್ ಕಂ ಮ್ಯಾರೇಜ್ ಬ್ರೋಕರ್ ಕೃಷ್ಣ ಸಾಹೇಬರ ಕೈವಾಡದಿಂದ ನಡೆಯುತ್ತಿರುವ ಮದುವೆಗಳಿವು. ಈ ಸ್ವಯಂವರ ಹಾಗೂ ತಾಳಿಭಾಗ್ಯ ಸ್ಕೀಂನ ಭರಾಟೆಯಲ್ಲಿ ಅಸಲಿ ಪ್ರತಿಭಾವಂತರು, ಕಷ್ಟಪಟ್ಟು ಓದಿದ್ದವರು ಮೂಲೆಗೆ ಒತ್ತರಿಸಲ್ಪಟ್ಟಿದ್ದಾರೆ. ಲಿಖಿತ ಪರೀಕ್ಷೆಯಲ್ಲಿ ಕಡಿಮೆ ಮಾರ್ಕ್ಸ್ ತೆಗೆದಿದ್ದರೂ ಇಂಟರ್‌ವ್ಯೂನಲ್ಲಿ ಜಾಸ್ತಿ ಮಾರ್ಕ್ಸ್ ಕದ್ದವರು, ಮಂತ್ರಿ, ಶಾಸಕರ ಹಾಗೂ ಅಧಿಕಾರಿಗಳ ಮಕ್ಕಳನ್ನು ಮದುವೆ ಆಗುವುದಾಗಿ ಒಪ್ಪಿಕೊಂಡು 'ಕೆಎಎಸ್ ಪಾಸು' ಅನ್ನಿಸಿಕೊಂಡಿರುವವರ ಕತೆಗಳು ಈಗ ರಾಜ್ಯದ ತುಂಬ ಹಾರಾಡುತ್ತಿವೆ.



ಕೆ.ಆರ್. ಪೇಟೆಯ ಯೋಗೀಶ ಎಂಬುವನು ಈಗ ಅಸಿಸ್ಟೆಂಟ್ ಕಮಿಷನರ್ ಆಗಿ ಆಯ್ಕೆಯಾಗಿದ್ದಾನೆ. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಓತ್ಲಾ ಹೊಡೆದುಕೊಂಡು ತಿರುಗುತ್ತಿದ್ದ ಈ ಪ್ರತಿಭೆ ಅದ್ಹೇಗೊ ರಿಟನ್ ಟೆಸ್ಟ್‌ನಲ್ಲಿ 914 ಅಂಕ ಗಿಟ್ಟಿಸಿತ್ತು. ನಂತರ ಸಾರಿಗೆ ಸಚಿವ ಚಲುವರಾಯಸ್ವಾಮಿ ನಾದಿನಿಯನ್ನು ಮದುವೆಯಾದರೆ ಎಸಿ ಪೋಸ್ಟ್ ಗ್ಯಾರಂಟಿ ಎಂಬ ಆಫರ್ ಬಂದಿದ್ದರಿಂದ ಇವನು ನಿಂತ ಹೆಜ್ಜೆಯಲ್ಲೇ "ಆಗಲಿ" ಎಂದ ಕಾರಣ ಇಂಟರ್‌ವ್ಯೂನಲ್ಲಿ 155 ಮಾರ್ಕ್ಸ್‌ನ ವರದಕ್ಷಿಣೆ ಸಿಕ್ಕಿದೆ.

ಕೆ.ಆರ್. ಪೇಟೆಯವನೇ ಆದ ಬಾಲಚಂದ್ರ ಎಂಬಾತನೂ ಈಗ ಎಸಿ. ಈ ಸ್ವಯಂ'ವರ'ನು ಬೆಂಗಳೂರಿನ ನಾಗರಬಾವಿಯ ಐಸಾಕ್‌ನಲ್ಲಿ ರಿಜಿಸ್ಟ್ರಾರ್ ಆಗಿರುವ ಸಿ. ಬೋರೇಗೌಡರ ಸುಪುತ್ರಿಯನ್ನು ವಿವಾಹವಾಗಲು ಒಪ್ಪುವುದಾದರೆ ಸಾಕ್ಷಾತ್ ಅಸಿಸ್ಟೆಂಟ್ ಕಮಿಷನರ್ ಹುದ್ದೆಯನ್ನೇ ದಯಪಾಲಿಸಲಾಗುವುದಾಗಿ ಆಮಿಷ ಒಡ್ಡಲಾಗಿತ್ತು, ಬಾಲಚಂದ್ರನೂ 'ಹ್ಞೂ' ಎಂದ; ಎಸಿನೂ ಆದ.

ಈ ಮದುವೆ ದಳ್ಳಾಳಿ ಕೆಲಸ ಮಾಡಿದ್ದೂ ಕೃಷ್ಣ.


ಮಂಡ್ಯದ ಶಿವಕುಮಾರ್ ಎಂಬಾತನಿಗೆ ಈಗ ಡಿವೈಎಸ್‌ಪಿ ಆಗುವ ಯೋಗ ಬಂದಿದೆ. ಅಭಿನಯ ಚತುರ ಮಾಜಿ ಪ್ರಧಾನಿ ದೇವೇಗೌಡರ ಪತ್ನಿ ಚೆನ್ನಮ್ಮನವರ ತಮ್ಮನ ಮಗಳೊಂದಿಗೆ ಪಾಣಿ ಗ್ರಹಣ ಮಾಡಬೇಕೆಂಬ ಷರತ್ತಿನೊಂದಿಗೆ ಶಿವಕುಮಾರ ಈಗ ಡಿವೈಎಸ್‌ಪಿ ಆಗುತ್ತಿದ್ದಾನೆ. ರಿಟನ್ ಟೆಸ್ಟ್‌ನಲ್ಲಿ ಕೇವಲ 887 ಅಂಕ ಗಳಿಸಿದ್ದ ಈ 'ಪ್ರತಿಭೆ' ಮದುವೆಗೆ ಒಪ್ಪಿದ್ದರಿಂದ ಇಂಟರ್‌ವ್ಯೂನಲ್ಲಿ 200 ಕ್ಕೆ 167 ಮಾರ್ಕ್ಸ್ ಬರುವಂತೆ ನೋಡಿಕೊಳ್ಳಲಾಗಿದೆ. 3A ಗ್ರೂಪ್‌ನಲ್ಲಿ ಇವನಿಗಿಂತಾ ಹೆಚ್ಚು ಮಾರ್ಕ್ಸ್ ಪಡೆದಿದ್ದ ಬ್ಯಾಚುಲರ್ ಅಲ್ಲದವರನ್ನು ಇಂಟರ್‌ವ್ಯೂ ಎಂಬ ಬ್ರಹ್ಮಾಸ್ತ್ರ ಪ್ರಯೋಗಿಸಿ ಕಡಿಮೆ ಅಂಕ ಕೊಟ್ಟು ತುಳಿಯಲಾಗಿದೆ.

ಪ್ರಭುಲಿಂಗ ಕಾವಲಕಟ್ಟಿ ಎಂಬ ಜಾಣ ಅಭ್ಯರ್ಥಿಯ ಕತೆ ಸ್ವಲ್ಪ ಸ್ವಾರಸ್ಯಕರವಾಗಿದೆ. ಕೆಪಿಎಸ್‌ಸಿ ಮೆಂಬರ್ ದಾಸಯ್ಯನವರ ಮಗಳನ್ನು ಮದುವೆಯಾಗಬೇಕೆಂಬ ಕಂಡೀಷನ್ ಹಾಕಿ ಇವನಿಗೆ ಎಸಿ ಹುದ್ದೆ ಕೊಡಲಾಗಿತ್ತು. ದಾಸಪ್ಪನವರು ಇನ್ನೇನು ತಾನು ಧನ್ಯನಾದೆ ಎಂದುಕೊಳ್ಳುವಷ್ಟರಲ್ಲೇ ಪ್ರಭುಲಿಂಗ ಇಂಡಿಯನ್ ರೆವಿನ್ಯೂ ಸರ್ವೀಸ್‌ಗೆ ಆಯ್ಕೆಯಾಗಿ ಅವನೀಗ ಎಲ್ಲರಿಗೂ ಕೈಕೊಟ್ಟು ದೆಹಲಿಗೆ ಪರಾರಿಯಾಗಿದ್ದಾನೆ. ಪಾಪ ದಾಸಯ್ಯ ಪೆಚ್ಚಾಗಿದ್ದಾರೆ.

ಮಂಡ್ಯಾದಲ್ಲಿ ಈಗ ಸಬ್‌ಇನ್ಸ್‌ಪೆಕ್ಟರ್ ಆಗಿರುವ ಪ್ರಕಾಶ್ ಎಂಬುವನೂ ಕೆಎಎಸ್ ಬರೆದು ಈಗ ಡಿವೈಎಸ್‌ಪಿ ಎನಿಸಿಕೊಂಡಿದ್ದಾನೆ. ಯಥಾಪ್ರಕಾರ ಇದೂ ತಾಳಿಭಾಗ್ಯ ಸ್ಕೀಂ ನೇಮಕಾತಿಯೆ. ಚೇರ್ಮನ್ ಕೃಷ್ಣರ ಗೆಣೆಕಾರ ಮೈಸೂರಿನ ದೊಡ್ಡ ಕಾಂಟ್ರ್ಯಾಕ್ಟರ್ ಒಬ್ಬರ ಮಗಳನ್ನು ಪ್ರಕಾಶ ಮದುವೆಯಾಗಲು ಒಪ್ಪಿಕೊಂಡಿರುವುದಕ್ಕೆ ಈ ಉಡುಗೊರೆ ದಕ್ಕಿದೆ. ಕೆಪಿಎಸ್‌ಸಿ ಮೆಂಬರ್ ಪಾಟೀಲರು ತಮ್ಮ ಅಣ್ಣನ ಮಗಳಿಗೆ ಲಿಂಗಾಯಿತ ಹುಡುಗರ ಶಿಕಾರಿ ಮಾಡುತ್ತಾ ಕೊನೆಗೆ ಗಂಗಾಧರ ಮೂರ್ತಿ ಎಂಬುವನನ್ನು ಬಲೆ ಹಾಕಿ ಹಿಡಿದಿದ್ದಾರೆ. ರಿಟನ್ ಟೆಸ್ಟ್‌ನಲ್ಲಿ 899 ಅಂಕ ಪಡೆದಿದ್ದ ಗಂಗಾಧರ್‌ಗೆ ಇಂಟರ್‌ವ್ಯೂನಲ್ಲಿ ಅನಾಮತ್ತು 150 ಮಾರ್ಕ್ಸ್ ಕೊಡಿಸಿ ಎಸಿ ಮಾಡಲಾಗಿದೆ.

ಕೆಪಿಎಸ್‌ಸಿ ಮೆಂಬರ್‌ನ ಅಳಿಯ ಆಗುವವನು ಜುಜುಬಿ ಲೇಬರ್ ಇನ್ಸ್‌ಪೆಕ್ಟರ್, ತಹಶೀಲ್ದಾರ್ ಆಗಿದ್ದರೆ ಲೆವೆಲ್ ಕಡಿಮೆ ಆಗಲ್ಲವಾ! ಈ ಗಂಗಾಧರನಿಗೆ ಎಸಿ ಹುದ್ದೆ ಕೊಡಿಸಲೇಬೇಕೆಂದು ಪಣ ತೊಟ್ಟಿದ್ದ ಪಾಟೀಲರು ಅದೇ ಗ್ರೂಪಿನಲ್ಲಿ ಒಳ್ಳೇ ಮಾರ್ಕ್ಸ್ ತೆಗೆದಿದ್ದ ನಟೇಶ್, ಮಹೇಶ ಮತ್ತಿತರರಿಗೆ ಸಂದರ್ಶನದಲ್ಲಿ ಕಡಿಮೆ ಮಾರ್ಕ್ಸ್ ಬರುವಂತೆ ಮಾಡಿ ಗಂಗಾಧರನ ದಾರಿ ಕ್ಲಿಯರ್ ಮಾಡಿಸಿದ್ದಾರೆ. ಉಳಿದ ಕೆಲ ಅಭ್ಯರ್ಥಿಗಳನ್ನು ಖಾಸಗಿಯಾಗಿ ಕರೆಸಿ ಗೆಜೆಟೆಡ್ ಬಿ ಹುದ್ದೆ ಕೊಡಿಸುವುದಾಗಿಯೂ, ಗಂಗಾಧರನ ಹಾದಿಗೆ ಅಡ್ಡ ಬರದಂತೆಯೂ ದಮಕಿ ಹಾಕಿದ್ದಾರೆ.

ಡಿವೈಎಸ್‌ಪಿ ಎನಿಸಿಕೊಂಡಿರುವ ಜಗದೀಶನ ಕತೆಯೂ ಇದಕ್ಕಿಂತಾ ಭಿನ್ನವಾಗಿಲ್ಲ. ಮಾಜಿ ಕಾಂಗ್ರೆಸ್ ಮಂತ್ರಿ ಎಚ್. ವಿಶ್ವನಾಥರ ಸಂಬಂಧಿಯ ಜೊತೆ ಮದುವೆ ಎಂಬ ಬಾರ್ಟರ್ ಸಿಸ್ಟಂನಡಿ ಜಗದೀಶ ಡಿವೈಎಸ್‌ಪಿ ಆಗಿದ್ದಾನೆ.


ಕೃಷ್ಣ

99 ರ ಬ್ಯಾಚ್‌ನಲ್ಲಿ ತಹಶೀಲ್ದಾರ್ ಆಗಿರುವ ಮದ್ದೂರಿನ ಸತೀಶ ಎಂಬುವನಿಗೆ ಎಂಎಲ್‌ಸಿ ಪುಟ್ಟಣ್ಣನ ಅಣ್ಣನ ಮಗಳನ್ನು ಮದುವೆಯಾಗುವಂತೆ ಒಪ್ಪಿಸಿ ನಂತರ ತಹಶೀಲ್ದಾರ್ ಹುದ್ದೆ ದಯಪಾಲಿಸಲಾಗಿದೆ. ಅಂದಹಾಗೆ ಈ ಮೇಲ್ಜಾತಿ ಸ್ವಯಂ'ವರ'ಗಳೆಲ್ಲರೂ ಮಾತೆತ್ತಿದರೆ ಪ್ರತಿಭೆ, ಮೆರಿಟ್ಟು ಎಂಬ ಬೊಗಳೆ ಮಾತಾಡುವವರೆ.

ಚೇರ್ಮನ್ ಕೃಷ್ಣ ಕೆಪಿಎಸ್‌ಸಿ ರಿಪೇರಿ ಮಾಡಬಹುದೆಂದು ಕಾಯುತ್ತಿದ್ದವರಿಗೆ ಈಗ ನಿಜವಾಗಲೂ ನಿರಾಶೆಯಾಗಿದೆ. ಈತನೇ ಮ್ಯಾರೇಜ್ ಬ್ರೋಕರ್ ಲೆವೆಲ್‌ಗಿಳಿದ ಮೇಲೆ ಇನ್ನು ಕೆಪಿಎಸ್‌ಸಿ ರಿಪೇರಿ ಮಾತೆಲ್ಲಿಂದ ಬಂತು?

ಜಾತಿ, ಲಂಚ ಹಾಗೂ ತಾಳಿ ಭಾಗ್ಯ ಸ್ಕೀಂನ ಒಟ್ಟಾರೆ ಟ್ರೆಂಡ್ ಅನ್ನು ಗಮನಿಸುತ್ತಿದ್ದರೆ ಅಧಿಕಾರ, ಹಣ ಹಾಗೂ ಸಾಮಾಜಿಕ ಸ್ಥಾನಮಾನಕ್ಕಾಗಿ ಇರುವುದನ್ನು ಉಳಿಸಿಕೊಳ್ಳುವುದಕ್ಕಾಗಿ, ಇವರೆಲ್ಲಾ ಯಾವ ಲೆವೆಲ್‌ಗಾದರೂ ಹೋಗುತ್ತಾರೆ ಎಂಬುದು ಇದರಿಂದ ಗೊತ್ತಾಗುತ್ತಿದೆ.

ಸಜ್ಜನಿಕೆಯ ಮುಖವಾಡ ಧರಿಸಿರುವ ಚೇರ್ಮನ್ ಕೃಷ್ಣ ಅವರಾದರೂ ಇಷ್ಟು ಲೋ ಲೆವೆಲ್‌ಗಿಳಿಯಬಾರದಿತ್ತಲ್ಲವಾ?

-ಈಶ

ಇಂಟರ್‌ವ್ಯೂ ಅಲ್ಲ ಸ್ವಯಂವರ!

2002 ರ ಮಾರ್ಚ್ 2 ರ No. DPAR 34 SRR 2002 ರ ಆದೇಶವೊಂದು ಲಿಖಿತ ಪರೀಕ್ಷೆಯ ಒಟ್ಟು ಅಂಕಗಳಲ್ಲಿ ಸಂದರ್ಶನ ಅಂಕ ಶೇ. 5 ರಷ್ಟಿದ್ದರೆ ಸಾಕು ಎಂದು ಸ್ಪಷ್ಟವಾಗಿ ಹೇಳಿದೆ. ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆದೇಶವಿದು.

ಈ ಆಧಾರದಲ್ಲಿ ಹೇಳಲೇಬೇಕೆಂದರೆ ಕೆಎಎಸ್ ನೇಮಕಾತಿ ಸಂದರ್ಶನ 80 ಮಾರ್ಕ್ಸ್‌ಗೆ ಸೀಮಿತಗೊಳ್ಳಬೇಕಾಗುತ್ತದೆ. ಆದರೆ ಕೆಪಿಎಸ್‌ಸಿ ಈ ಸರ್ಕಾರಿ ಆದೇಶಕ್ಕೆ ಕಿಲುಬು ಕಾಸಿನ ಬೆಲೆಯನ್ನೂ ಕೊಟ್ಟಿಲ್ಲ, ಇಂಟರ್‌ವ್ಯೂಗೆ 200 ಮಾರ್ಕ್ಸ್ ನಿಗದಿ ಮಾಡಿದೆ. ಹಣ ಪಾವತಿಸಿ ಹುದ್ದೆ ಖರೀದಿಸುವವರಿಗೆ, ಜಾತಿ ಲಾಬಿ ನಡೆಸುವವರಿಗೆ, ಮುಖ್ಯವಾಗಿ ತಾಳಿಭಾಗ್ಯ ಸ್ಕೀಂನಲ್ಲಿ ವರಗಳ ತಲಾಶ್ ನಡೆಸಲಷ್ಟೇ ಈ ಇಂಟರ್‌ವ್ಯೂ ನಾಟಕ ಆಡಲಾಗುತ್ತಿದೆ. ಹಾಗಾಗೆ ರಿಟನ್ ಟೆಸ್ಟ್‌ನಲ್ಲಿ ಕಡಿಮೆ ಮಾರ್ಕ್ಸ್ ಪಡೆದಿದ್ದರೂ ಕೆಲವರು ಲಾಬಿ ಮಾಡಿ ಇಂಟರ್‌ವ್ಯೂನಲ್ಲಿ ಜಾಸ್ತಿ ಮಾರ್ಕ್ಸ್ ಗಳಿಸುವಂತ ಪವಾಡಗಳೇ ನಡೆದಿವೆ.

ಮಂಡ್ಯದ ಪೂರ್ಣಿಮ ಎಂಬಾಕೆಗೆ ರಿಟನ್ ಟೆಸ್ಟ್‌ನಲ್ಲಿ ಜುಜುಬಿ 808 ಬಂದಿದ್ದರೂ ಇಂಟರ್‌ವ್ಯೂನಲ್ಲಿ 156 ಅಂಕಗಳ ಗಿಫ್ಟ್ ನೀಡಲಾಗಿದೆ. ಈಕೆ ಪೋಲೀಸ್ ಆಫೀಸರ್ ಒಬ್ಬರ ಸೋದರಿ. ಈ ಪೂರ್ಣಿಮಾಗೆ ಅನುಕೂಲ ಮಾಡಿಕೊಡಲು ಕೆಪಿಎಸ್‌ಸಿ ಎಂಥ ನೀಚ ಕೆಲಸ ಮಾಡಿದೆಯೆಂದರೆ 931 ಮಾರ್ಕ್ಸ್ ತೆಗೆದಿದ್ದ ದಿವ್ಯಶ್ರೀ ಎಂಬುವರಿಗೆ ಇಂಟರ್‌ವ್ಯೂನಲ್ಲಿ ಕೇವಲ 40 ಅಂಕ ಕೊಟ್ಟು ತುಳಿದು ಹಾಕಿದೆ.

ಇಂತದ್ದನ್ನೆಲ್ಲಾ ನೋಡಿ ರೊಚ್ಚಿಗೆದ್ದಿರುವ ಬೆಂಗಳೂರಿನ ತ್ಯಾಗರಾಜನಗರದ ಗೀತಾ ಪಾಟೀಲ ಎಂಬುವರು ಈಗ ಕೆಎಟಿಗೆ ಅಪೀಲು ಹೋಗಿದ್ದಾರೆ.


ಗೊಡ್ಡು ಮುಖವಾಡಗಳು V/s ಪ್ರಾಮಾಣಿಕ ಮುಖಗಳು

ಎಂಎಲ್‌ಸಿ ಎಲೆಕ್ಷನ್

ಮೇಲ್ಮನೆಗೆ ಸೇರಲು ಕೆಳಹಂತದ ಹೋರಾಟ ಶುರುವಾಗಿದೆ. ಶಿಕ್ಷಕರ ಕ್ಷೇತ್ರದಿಂದ ಮೂವರು, ಪದವೀಧರ ಕ್ಷೇತ್ರದಿಂದ ಮೂವರು ಎಂಎಲ್‌ಸಿಗಳನ್ನು ಆರಿಸಲು ಶಿಕ್ಷಕರು, ಪದವೀಧರರು ತಯಾರಾಗಿದ್ದಾರೆ. ಹಲವು ಹೊಸ ಮುಖಗಳು ಹಳೆಯ ಗೊಡ್ಡು ಮುಖವಾಡಗಳಿಗೆ ಸವಾಲು ಎಸೆಯುತ್ತಿವೆ ಎಂಬ ಪಾಸಿಟಿವ್ ಅಂಶವೇ ಸದ್ಯದ ಆಶಾದಾಯಕ ಬೆಳವಣಿಗೆಯಾಗಿದೆ.

ರಾಜ್ಯದ ವಿವಿಧ ಭಾಗಗಳಿಂದ ನಮ್ಮ ವರದಿಗಾರರು ಕಳಿಸಿದ ವಿವರಗಳಿವೆಯಿಲ್ಲಿ...

ಬೆಂ. ಪದವೀಧರ: ರಾಮು V/s ಲಕ್ಷ್ಮಿ


ರಾಮಚಂದ್ರೇಗೌಡ

ಬೆಂಗಳೂರು ಪದವೀಧರ ಕ್ಷೇತ್ರದಿಂದ ರಾಮಚಂದ್ರೇಗೌಡ ಎಂಬ ಗೊಡ್ಡು ಚೆಡ್ಡಿ ಗೆಲ್ಲುವ ಲಕ್ಷಣಗಳಿವೆಯಾದರೂ ಎಲ್ಲವೂ ಅಷ್ಟು ಸುಲಭವಾಗಿಲ್ಲ. ಬಿಜೆಪಿಯ ಈ 'ರಾಮು' ಮೂರು ಬಾರಿ ಗೆದ್ದರೂ ಪದವೀಧರರಿಗೆ ನಯಾಪೈಸೆ ಕೆಲಸ ಮಾಡಿಕೊಡಲಿಲ್ಲ. ಎರಡು ಬಾರಿ ಬೆಂಗಳೂರು ಸೆನೆಟ್ ಸದಸ್ಯರಾಗಿ ಒಳ್ಳೆ ಹೆಸರು ಗಳಿಸಿರುವ ಸಿಪಿಐ (ಎಂ)ನ ಕೆ. ಲಕ್ಷ್ಮಿ ನಿಜಕ್ಕೂ ಗೆಲ್ಲಲೇಬೇಕಾದ ಅಭ್ಯರ್ಥಿ. ಕೆ. ಲಕ್ಷ್ಮಿ ಸ್ಪರ್ಧಿಸುತ್ತಿರುವುದನ್ನು ಮೊದಲೇ ಅರಿತ ಆರ್.ಎಸ್.ಎಸ್. ಚೆಡ್ಡಿಗಳು ಬಹುಹಿಂದೆಯೇ ಕುತಂತ್ರ ಆರಂಭಿಸಿಬಿಟ್ಟವು. 45 ಸಾವಿರ ದಷ್ಟಿದ್ದ ನೋಂದಾಯಿತ ಪದವೀಧರರ ಸಂಖ್ಯೆ ಏಕಾಏಕಿ 71 ಸಾವಿರಕ್ಕೇರುವಂತೆ ಮಾಡಿಬಿಟ್ಟರು. ಈ ಹೊಸ ಸೇರ್ಪಡೆಯಲ್ಲಿ ಆರ್‌ಎಸ್‌ಎಸ್ ಒಲವಿನ ಬ್ರಾಹ್ಮಣರೇ ತುಂಬಿರುವುದು ಚೆಡ್ಡಿ ರಾಮಚಂದ್ರೇಗೌಡನಿಗೆ ಅನುಕೂಲವಾಗಬಹುದು. ಕಾಂಗ್ರೆಸಿಂದ ನಿಂತಿರುವ ಆ. ದೇವೇಗೌಡ, ಜೆಡಿಎಸ್‌ನ ಉಪೇಂದ್ರ ಶೆಟ್ಟಿಗಳು ರಾಮಚಂದ್ರೇಗೌಡನ ಓಟ್‌ಬ್ಯಾಂಕ್ ಒಡೆದರೆ ಕೆ. ಲಕ್ಷ್ಮಿ ಗೆಲ್ಲಬಹುದೇನೋ..... ಹಾಗಾಗಲಿ ಎಂಬುದೇ ಪ್ರಜ್ಞಾವಂತರ ಆಶಯ.


ಲಕ್ಷ್ಮಿ

ದಕ್ಷಿಣ ಶಿಕ್ಷಕರ ಕ್ಷೇತ್ರ: ದೇವು V/s ಸಿದ್ದು

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರದ 18 ಸಾವಿರ ಶಿಕ್ಷಕರ ಎದುರು 11 ಅಭ್ಯರ್ಥಿಗಳು ನಿಂತಿದ್ದರೂ ಸ್ಪರ್ಧೆ ದೇವು V/s ಸಿದ್ದು ಎಂಬಂತಾಗಿದೆ. ಜೆಡಿಎಸ್‌ನಿಂದ ಸ್ಪರ್ಧಿಸಿರುವ ಪಿ. ಶಾರದಮ್ಮ ಹೆಚ್ಚೂಕಡಿಮೆ ಗೆಲುವಿನ ದಾರಿಯಲ್ಲಿದ್ದಾರೆ. 35 ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆಗೈದಿರುವ ಶಾರದಮ್ಮ ಮಾಜಿ ಶಾಸಕ ಪುಟ್ಟೇಗೌಡರ ಮಗಳು. ಸಿದ್ದುರ ರಾಜಕೀಯ ಪ್ರಭಾವದ ಮೇಲೆ ಗೆಲುವಿನ ಆಶೆ ಕಾಣುತ್ತಿರುವ ಎಚ್.ಎ. ವೆಂಕಟೇಶ್ ಈ ಹಿಂದೆ ಮೂರು ಸಾರಿ ಸೋತಿದ್ದರು. ಮೈಸೂರು, ಚಾಮರಾಜನಗರದ ಲಿಂಗಾಯತರ ಓಟುಗಳಷ್ಟೇ ಬಿಜೆಪಿಯ ಗುರುಲಿಂಗಯ್ಯನಿಗೆ ದಕ್ಕಬಹುದು..


ಶಾರದಮ್ಮ

ಮುಖ್ಯಮಂತ್ರಿ ಈ ಕ್ಷೇತ್ರವನ್ನು ಪ್ರತಿಷ್ಠಿತ ಎಂದು ಭಾವಿಸಿರುವುದರಿಂದ ಶಾರದಮ್ಮನಿಗೆ ಗೆಲುವು ಖಚಿತವಾದಂತಿದೆ.

ನೈರುತ್ಯ ಕ್ಷೇತ್ರ: ಒಂದು 'ಕೋ'ಗೆ, ಒಂದು 'ಜಾ'ಗೆ

ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ಕೊಡಗು, ಮಂಗಳೂರು ಜಿಲ್ಲೆಗಳನ್ನೊಳಗೊಂಡಿರುವ ನೈರುತ್ಯ ಕ್ಷೇತ್ರದಲ್ಲಿ ಪದವೀಧರರ ಕೋಟಾದಿಂದ ಸಚಿವ

"ಸಿದ್ದು ಕಾಂಗ್ರೆಗೆ..."

ಇದು ದಿನಪತ್ರಿಕೆಗಳಲ್ಲಿ ನೂರಾ ಎಂಟನೇ ಸಲದ ನ್ಯೂಸ್ ಇರಬಹುದು. ಆದರೆ ಈ ಸಲ ಮಾತ್ರ ಈ ಸುದ್ದಿಗೆ ಒಂದಿಷ್ಟು ವಿಶ್ವಾಸಾರ್ಹತೆ ಬಂದಿದೆ.

ಕಾಂಗ್ರೆ ಜೊತೆ ಸಿದ್ದು

ವಿಲೀನವೋ, ಮೈತ್ರಿಯೋ....

ಸಿದ್ಧರಾಮಯ್ಯ ಹೆಚ್ಚೂಕಡಿಮೆ ಕಾಂಗ್ರೆಸ್ ಹೊಸ್ತಿಲಲ್ಲಿ ನಿಂತಿದ್ದಾರೆ. ಎಬಿಪಿಜೆಡಿಯನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಲು ಕಾಂಗ್ರೆಸ್ ಹೈಕಮಾಂಡ್ ಆಹ್ವಾನ ನೀಡುತ್ತಲೇ ಬಂದಿದೆಯಾದರೂ, ಎಬಿಪಿಜೆಡಿಯ ಬಹುತೇಕ ನಾಯಕರಿಗೆ ಮಾತ್ರ ಕಾಂಗ್ರೆಸ್ ಜೊತೆ ವಿಲೀನವೋ, ಮೈತ್ರಿಯೊ ಅಥವಾ ಅಹಿಂದ ಸಂಘಟನೆಯನ್ನು ಶಕ್ತಿಶಾಲಿಯಾಗಿಸಿ ಎಬಿಪಿಜೆಡಿಯನ್ನು ಬೆಳೆಸುವುದೋ ಎಂಬ ಗೊಂದಲಗಳು ಈ ಹೊತ್ತಿನಲ್ಲೂ ಕಾಡುತ್ತಲೇ ಇವೆ.




ಮೊನ್ನೆಯ ಎಂಎಲ್‌ಸಿ ಎಲೆಕ್ಷನ್ನಿನಲ್ಲಿ ಜೆಡಿಎಸ್‌ನ 'ಗೌಡ ಪ್ರಭುತ್ವ'ಕ್ಕೆ ಅಪಮಾನವಾಗುವಂತೆ ಕಾಂಗ್ರೆನ ವಿ.ಆರ್. ಸುದರ್ಶನ್‌ರನ್ನು ಗೆಲ್ಲಿಸುವ ಮೂಲಕ, ಜೆಡಿಎಸ್‌ನ ನಾಲ್ಕನೇ ಅಭ್ಯರ್ಥಿ ರತ್ನಾಕರ ಶೆಟ್ಟಿಯನ್ನು ಸೋಲಿಸಿ ಅಧಿಕಾರಾರೂಢ ಜೆಡಿಎಸ್‌ಗೇ ಸವಾಲು ಎಸೆದ ಎಬಿಪಿಜೆಡಿಯ ಒಂಭತ್ತು ಎಂಎಲ್‌ಎಗಳಿಗೆ ಈಗಲೂ ಜೆಡಿಎಸ್ ಸದಸ್ಯರಾಗೇ ಮುಂದುವರೆಯಲೇಬೇಕಾದಂತಹ ಅನಿವಾರ್ಯ, ಸಂದಿಗ್ಧತೆ ಇದ್ದೇ ಇದೆ.

ವಿಲೀನದ ಗೊಂದಲ... ಮೈತ್ರಿಯ ಮಹದಾಶೆ

ಉಳಿದೆಲ್ಲ ನಾಯಕರಿಗಿಂತ ಸಿದ್ಧರಾಮಯ್ಯನವರು ಕಾಂಗ್ರೆಗೆ ಸೇರುವುದಕ್ಕೆ ಹೆಚ್ಚು ಉತ್ಸುಕರಾದಂತಿದೆ. ಇತ್ತ ಕಡೆ ಕಾಂಗ್ರೆನಲ್ಲೂ ಸಿದ್ದುಗೆ ಅವಿರೋಧ ಸ್ವಾಗತ ಕಾಯುತ್ತಲೇ ಇದೆ. ಇತ್ತೀಚೆಗಷ್ಟೇ ಸೋನಿಯಾ ಗಾಂಧಿಯನ್ನು ಕಂಡು ಸಿದ್ದು ಸೇರ್ಪಡೆ ವಿಚಾರವನ್ನು ಚರ್ಚಿಸಿ ಬಂದಿರುವ ಧರ್ಮಸಿಂಗ್, ಮಲ್ಲಿಕಾರ್ಜುನ ಖರ್ಗೆಯಂವರಾಗಲೇ ಸಿದ್ಧು ಸೇರ್ಪಡೆ ಖಚಿತ ಎಂಬಂತೆ ಮಾಧ್ಯಮಗಳ ಮುಂದೆಯೇ ಹೇಳಿಕೆಗಳನ್ನು ನೀಡುತ್ತಿದ್ದಾರೆ.

ಸದ್ಯ ಎಬಿಪಿಜೆಡಿಯ ಕಾರ್ಯಕರ್ತರಲ್ಲಿ ಈ ವಿಲೀನ, ಮೈತ್ರಿಗಳ ಕುರಿತು ಕನ್‌ಫ್ಯೂಷನ್ ಇದ್ದೇ ಇದೆ. ಅಲ್ಲಿ ಹಲವಾರು ವಿವಿಧ ಸಾಧ್ಯತೆಗಳಂತೂ ಗೋಚರಿಸುತ್ತಿವೆ.

ಈಗ ಸಿದ್ಧರಾಮಯ್ಯ ಒಬ್ಬರೇ ಕಾಂಗ್ರೆಸ್ ಸೇರುವುದು. ಇಡೀ ಎಬಿಪಿಜೆಡಿಯೇ ಅಧಿಕೃತವಾಗಿ ವಿಲೀನಗೊಂಡರೆ ಒಂಭತ್ತು ಶಾಸಕರ ಸದಸ್ಯತ್ವಕ್ಕೇ ಕುತ್ತು ಬರುವುದನ್ನು ತಪ್ಪಿಸಲು ಸಿದ್ಧರಾಮಯ್ಯ ಒಬ್ಬರೇ ಶಾಸಕತ್ವಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಪಕ್ಷಕ್ಕೆ ಸೇರುವ ಸಾಧ್ಯತೆಯೇ ಹೆಚ್ಚಾಗಿದೆ. ಸದ್ಯದ ಮಟ್ಟಿಗೆ ಎಬಿಪಿಜೆಡಿ ಕಾಂಗ್ರೆಸ್ ಜೊತೆ ಸಹಕರಿಸುತ್ತಲೇ ತನ್ನ ಅಸ್ತಿತ್ವ ಕಾಪಾಡಿಕೊಳ್ಳುತ್ತಾ ಸಾಗಿ ಎಲೆಕ್ಷನ್ ವೇಳೆಗೆ ಕಾಂಗ್ರೆಸ್‌ನಲ್ಲಿ ವಿಲೀನಗೊಳ್ಳಬಹುದು. ಅಲ್ಲಿವರೆಗೆ ಸಿದ್ದುರನ್ನು ಬಿಟ್ಟು ಉಳಿದ 8 ಶಾಸಕರು ಸದನದ ಒಳಗೆ ಜೆಡಿಎಸ್ ಸದಸ್ಯರೆಂಬ ಸಂದಿಗ್ಧತೆಯನ್ನು ನುಂಗಿಕೊಂಡು ಆಡಳಿತದಲ್ಲಿ, ಸದನದ ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತಾ ಇರಲಿದ್ದಾರೆ.



ಆದರೆ ಇದೂ ಸಹ ಅಷ್ಟೊಂದು ಸರಳವಾಗಿ ಕಾಣುತ್ತಿಲ್ಲ. ಹಲವಾರು ಹಿರಿಯ ನಾಯಕರಿಗೆ ವಿಲೀನಕ್ಕಿಂತ ಚುನಾವಣಾ ಮೈತ್ರಿಯಷ್ಟೇ ಮುಖ್ಯವಾಗಿದೆ. ಎಬಿಪಿಜೆಡಿಯ ಅಸ್ತಿತ್ವವನ್ನು ಹಾಗೆ ಕಾಪಾಡಿಕೊಂಡರಷ್ಟೇ ತಮಗೆಲ್ಲ ಗೌರವ ಸ್ಥಾನಮಾನ ಸಿಗುವುದು ಎಂಬುದು ಇವರ ಲೆಕ್ಕಾಚಾರ. ಜಿ.ಪಂ, ತಾ.ಪಂ. ಚುನಾವಣೆಗಳಲ್ಲಿ ಕಾಂಗ್ರೆ, ಎಬಿಪಿಜೆಡಿಯ ಹೊಂದಾಣಿಕೆಯಿಂದ ಜೆಡಿಎಸ್‌ಗೆ ನಷ್ಟ ಮಾಡಿದ್ದು, ಆ ಮೂಲಕ ಹಲವಾರು ಕಡೆ ಎಬಿಪಿಜೆಡಿ ಅಧಿಕಾರ ಹಿಡಿದಿದ್ದನ್ನು ಜ್ಞಾಪಿಸಿಕೊಳ್ಳುವ ಇವರೆಲ್ಲ ವಿಲೀನಕ್ಕಿಂತ ಮೈತ್ರಿಯೇ ಹೆಚ್ಚು ಲಾಭದಾಯಕ ಎಂದು ಕಂಡುಕೊಂಡಿದ್ದಾರೆ.



ವೈಜನಾಥ್ ಪಾಟೀಲ್, ಬಿ.ಆರ್. ಪಾಟೀಲ್, ಡಾ. ಮಹದೇವ ಪ್ರಸಾದ್, ಸತೀಶ್ ಜಾರಕಿಹೊಳಿಯವರಿಗೆ ವಿಲೀನಕ್ಕಿಂತ ಚುನಾವಣಾ ಮೈತ್ರಿಯಲ್ಲೇ ಹೆಚ್ಚು ಒಲವಿದ್ದರೆ, ಕೋದಂಡರಾಮಯ್ಯ, ಎ.ಕೆ. ಸುಬ್ಬಯ್ಯ, ಇಬ್ರಾಹಿಂರವರಿಗೆ ಕಾಂಗ್ರೆ ಸಖ್ಯವೇ ಬೇಡ ಎನ್ನುವ ಚಡಪಡಿಕೆ ಇದ್ದೇ ಇದೆ. ಇಬ್ರಾಹಿಂ, ಸುಬ್ಬಯ್ಯ ಸೇರ್ಪಡೆಗೆ ಕಾಂಗ್ರೆನಲ್ಲಿ ಒಂದಿಷ್ಟು ವಿರೋಧ ಬಂದರೂ ಬರಬಹುದು.


ಒಟ್ಟಿನಲ್ಲಿ ರ್‍ಯಾಲಿ ರಾಜಕೀಯದಿಂದ ಸುಸ್ತಾದಂತೆ ಕಾಣುತ್ತಿರುವ ಎಬಿಪಿಜೆಡಿ ನಾಯಕಗಣವೇ ಗೊಂದಲಕ್ಕೆ ಬಿದ್ದಂತಿದೆ. ಸಿದ್ದು ಒಬ್ಬರೇ ಕಾಂಗ್ರೆ ಹೊಸ್ತಿಲ ಸಮೀಪ ಹೋದಂತೆ ಭಾಸವಾಗುತ್ತಿದ್ದಾರೆ.

ಹೇಗೋ ಕಾಂಗ್ರೆ, ಎಬಿಪಿಜೆಡಿಗಳ ಸ್ನೇಹ ಅರಳಲಿದೆ. ಅದು ವಿಲೀನದಲ್ಲೋ, ಮೈತ್ರಿಯಲ್ಲೋ ಎಂಬುದಿನ್ನೂ ಗೊಂದಲದಲ್ಲಿದೆ, ನಿಗೂಢವೂ ಆಗಿದೆ.

-ಪಿ.ಕೆ. ಮಲ್ಲನಗೌಡರ್

O.B.C. ಯತ್ತ ಹೈಕಮಾಂಡು !

ಈಗ ಕಾಂಗ್ರೆಸ್ ಮಂಡಲ್ II ವಿಷಯ ಎತ್ತುವುದರ ಮೂಲಕ ಹಿಂದುಳಿದ ವರ್ಗಗಳ ಪರ ತಾನು ಎಂದು ಬಿಂಬಿಸಿಕೊಳ್ಳಲು ಪ್ರಯತ್ನಿಸುತ್ತಿದೆಯಲ್ಲವೇ? ಕಾಕತಾಳೀಯವೋ ಏನೋ, ಅದನ್ನು ಸಾಬೀತುಗೊಳಿಸಲು ಎಂಬಂತೆ ಕರ್ನಾಟಕದ ಇಬ್ಬರು ಹಿಂದುಳಿದ ವರ್ಗಗಳ ನಾಯಕರಿಗೆ ಮನ್ನಣೆ ನೀಡುತ್ತಿದೆ ಕಾಂಗ್ರೆಸ್ ಹೈಕಮಾಂಡ್!



ಇತರೆ ಹಿಂದುಳಿದ ವರ್ಗ (OBC)ಗಳಿಗೆ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ಒದಗಿಸುವುದರ ಕುರಿತು ಅಧ್ಯಯನ ಮಾಡಲು ನೇಮಿಸಿರುವ ಸಮಿತಿಗೆ ಹಿಂದುಳಿದ ವರ್ಗಕ್ಕೆ ಸೇರಿದ ವೀರಪ್ಪ ಮೊಯ್ಲಿಯೇ ಅಧ್ಯಕ್ಷರು... ಹಾಗೆಯೇ ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರ ಪರ ಅಹಿಂದ ಸಂಘಟನೆಗೆ ಚಾಲನೆ ನೀಡಿದ ಕುರುಬ ಜನಾಂಗದ ಲೀಡರು ಸಿದ್ಧರಾಮಯ್ಯನವರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಕಾಂಗ್ರೆಸ್ ಯೋಚಿಸುತ್ತಿದೆ.

ಕಳೆದ ಬಾರಿಯ ಅಸೆಂಬ್ಲಿ ಎಲೆಕ್ಷನ್ನಿನಲ್ಲಿ ಕುರುಬರು ಸಿದ್ದು ಬೆನ್ನಿಗೆ ನಿಂತಿದ್ದು, ಇತ್ತೀಚಿನ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಚುನಾವಣೆಗಳಲ್ಲಿ ಸಿದ್ದು ಜೊತೆಗಿನ ಮೈತ್ರಿಯಿಂದ ಬಿಜೆಪಿ-ಜೆಡಿಎಸ್‌ಗಳಿಗೆ ಇರಿಸುಮುರಿಸು ಉಂಟು ಮಾಡಲು ಸಾಧ್ಯವಾಗಿದ್ದನ್ನೆಲ್ಲ ಪರಿಗಣಿಸಿರುವ ಕಾಂಗ್ರೆಸ್, ಜನಸಮೂಹವನ್ನು ಆಕರ್ಷಿಸಬಲ್ಲ ಸಿದ್ಧರಾಮಯ್ಯನವರನ್ನು ತನ್ನೆಡೆ ಸೆಳೆಯಲು ಯೋಚಿಸದೆ ಇರುತ್ತಾ?

ಏಕೆಂದರೆ ಕಾಂಗ್ರೆನ ಹಿಂದುಳಿದ ವರ್ಗದ ನಾಯಕರಲ್ಲಿ ಒಬ್ಬೊಬ್ಬರಿಗೂ ಒಂದೊಂದು ಕೊರತೆ! ಜನಾರ್ದನ್ ಪೂಜಾರಿ ವಿದೂಷಕನಂತೆ ಭಾಸವಾದರೆ, ವೀರಪ್ಪ ಮೊಯ್ಲಿ ಅಕಾಡೆಮಿಕ್ ಗಿರಾಕಿಯಂತೆ ಗೋಚರಿಸುತ್ತಾರೆ. ಕಾಂಗ್ರೆನಲ್ಲಿ ಹಿಂದುಳಿದ ವರ್ಗದವರಿಗೆ ನ್ಯಾಯ ಸಿಗುತ್ತಲೇ ಇಲ್ಲ ಎಂದು statistics ಹಿಡಿದುಕೊಂಡು ಚಡಪಡಿಸುತ್ತಲೇ ಇರುವ ಕುರುಬ ಜನಾಂಗದ ಎಚ್. ವಿಶ್ವನಾಥ್‌ರೇ ಸಿದ್ಧರಾಮಯ್ಯರನ್ನು ಕಾಂಗ್ರೆಗೆ ತರುವ ಪ್ರಕ್ರಿಯೆಯನ್ನು ಮೊದಲು ಆರಂಭಿಸಿದ್ದು!

ಕಾಂಗ್ರೆನ ಹಿಂದುಳಿದ ವರ್ಗದ (ಹೆಚ್ಚಾಗಿ ಕುರುಬರೇ!) ಶಾಸಕರು, ನಾಯಕರು ಸಿದ್ಧರಾಮಯ್ಯರ ಅಹಿಂದ ಸಮಾವೇಶಗಳಲ್ಲಿ ಬಹಿರಂಗವಾಗಿ ಕಾಣಿಸಿಕೊಳ್ಳುವಂತೆ ಮಾಡಿದ್ದೂ ಇದೇ ವಿಶ್ವನಾಥ್!

O.B.C. ಓಟ್‌ಬ್ಯಾಂಕ್ ಮೇಲೆ ಗಮನ ಕೇಂದ್ರೀಕರಿಸುತ್ತಿರುವ ಕಾಂಗ್ರೆ ಹೈಕಮಾಂಡ್ ಸಿದ್ಧರಾಮಯ್ಯರನ್ನು ಆಲಂಗಿಸುತ್ತಿರುವುದು ಸಹಜವೇ ತಾನೇ?

ವಿರೋಧ ತಣ್ಣಗಾಯ್ತೆ?

ಸಿದ್ಧರಾಮಯ್ಯ ಕಾಂಗ್ರೆಗೆ ಬರುವುದನ್ನು ಈ ಮೊದಲು ಜಾಫರ್ ಷರೀಫ್ ವಿರೋಧಿಸಿದ್ದರು. ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿದರೆ ಅವರೇ ಅಹಿಂದ ನಾಯಕ ಎನಿಸುವುದರಿಂದ ನಿಮಗೆ ಪ್ರಾಮುಖ್ಯತೆ ಕಡಿಮೆಯಾಗುತ್ತೆ ಎಂದು ದೇವೇಗೌಡರೇ ಷರೀಫ್‌ಗೆ ಹೇಳಿಕೊಟ್ಟಿದ್ದರಂತೆ. ಕುರುಬರ ಜನಾಂಗದ ಎಚ್. ವಿಶ್ವನಾಥ್‌ರೇ ಸಿದ್ದು ಪರ ಇದ್ದುದರಿಂದ ಕಾಂಗ್ರೆಸ್ ಹೈಕಮಾಂಡ್ ಷರೀಫ್‌ರನ್ನು ತಣ್ಣಗೆ ಮಾಡಬೇಕಾಯ್ತಂತೆ. ಇಬ್ರಾಹಿಂ ಎಂಟ್ರಿಗೆ ಷರೀಫ್ ಖಂಡಿತಾ ವಿರೋಧಿಸಬಹುದು ಎಂಬ ಭಾವನೆಯಿದ್ದರೂ, ಅದು ಕೂಡಾ sort out ಆಗಲಿದೆಯಂತೆ!






ಶಂಕರಮೂರ್ತಿ, ವಾಗೀಶ್, ಗಣೇಶ್ ಕಾರ್ಣಿಕ್

ಶಂಕರಮೂರ್ತಿ ಗೆಲ್ಲುವುದು ಬಹುತೇಕ ಗ್ಯಾರಂಟಿ. ಆರ್‌ಎಸ್‌ಎಸ್ ಮತಗಳು ಸಾಲಿಡ್ ಆಗಿ ಈ ಚೆಡ್ಡಿ ಚತುರನಿಗೆ ಬೀಳಲಿವೆ. ಕಾಂಗ್ರೆನ ಎ.ಎಸ್. ಮಹೇಶ್, ಜೆಡಿಎಸ್‌ನ ಯೇಸುದಾಸ್ ಸ್ಪರ್ಧೆ ಅಷ್ಟಕಷ್ಟೇ.

ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಕಳೆದ ಬಾರಿ ಗೆದ್ದಿದ್ದ ಬಾಲಕೃಷ್ಣ ಭಟ್‌ಗೆ ಬಿಜೆಪಿಯ ಟಿಕೆಟ್ ಸಿಗದೇ ಇದ್ದದ್ದು ಜೆಡಿಎಸ್‌ನಿಂದ ಸ್ಪರ್ಧಿಸಿರುವ ಪಿ. ವಾಗೀಶ್‌ಗೆ ಅನುಕೂಲವಾಗಿದೆ. ಬಿಜೆಪಿಯಿಂದ ಸ್ಪರ್ಧಿಸಿರುವ ಕ್ಯಾ. ಗಣೇಶ್ ಕಾರ್ಣಿಕ್‌ಗೆ ಸೋಲುಣಿಸಲು ವಾಗೀಶ್ ಮುನ್ನುಗ್ಗುತ್ತಿದ್ದಾರೆ. ಕಳೆದ ಬಾರಿ ಪಕ್ಷೇತರರಾಗಿ ಸ್ಪರ್ಧಿಸಿ ಕೇವಲ 200 ಮತಗಳಿಂದ ಸೋತಿದ್ದ ವಾಗೀಶ್ ಈ ಸಾರಿ ಜಯಶಾಲಿಯಾಗಲಿದ್ದಾರೆ.


ಆಗ್ನೇಯ ಶಿಕ್ಷಕರ ಕ್ಷೇತ್ರ: ಕೋ-ಜಾಗಳಿಗೆ ನಾರಾಯಣಸ್ವಾಮಿ ಸವಾಲು!

ಒಂದಿಷ್ಟು ಅಪಸ್ವರಗಳನ್ನು ಬಿಟ್ಟರೆ, ಪಕ್ಷೇತರರಾಗಿ ಸ್ಪರ್ಧಿಸಿರುವ ವೈ. ನಾರಾಯಣಸ್ವಾಮಿ ಬಗ್ಗೆ ಶಿಕ್ಷಕರಿಗೆಲ್ಲ ಭರವಸೆಯಿದೆ. ತುಮಕೂರು, ದಾವಣಗೆರೆ, ಚಿತ್ರದುರ್ಗ, ಕೋಲಾರ ಜಿಲ್ಲೆಗಳ ಶಿಕ್ಷಕರಲ್ಲಿ ನಾರಾಯಣಸ್ವಾಮಿ ಜನಪ್ರಿಯರಾಗಿದ್ದಾರೆ.



ನಾರಾಯಣ ಸ್ವಾಮಿ

ಹಿಂದೊಮ್ಮೆ ಈ ಕ್ಷೇತ್ರದಿಂದ ಗೆದ್ದಿದ್ದ ಪುಟ್ಟಸಿದ್ದ ಶೆಟ್ಟಿ ಎಂಬ ಭಾಷಣಕೋರ ಬಿಜೆಪಿಯಿಂದ ಸ್ಪರ್ಧಿಸಿ ಲಗಾಟ ಹೊಡೆಯಲು ರೆಡಿ ಆಗಿದ್ದಾನೆ.




ಜಯಣ್ಣ

ರಾಮಕೃಷ್ಣ ಹೆಗಡೆ ಕಾಲದಲ್ಲಿ ಪ್ರೌಢಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿಯಾಗಿದ್ದ ಪುಟ್ಟಸಿದ್ಧ ಶೆಟ್ಟಿ, ಶಿಕ್ಷಕರು ಮೂಲವೇತನವನ್ನು 1720 ರೂ.ಗೆ ಹೆಚ್ಚಿಸಬೇಕೆಂದು ಹೋರಾಡುತ್ತಿರುವಾಗ, 1600 ರೂ.ಗಳಿಗೆ ಒಪ್ಪಿಕೊಂಡು ಶಿಕ್ಷಕರ ಬೆನ್ನಿಗೆ ಚೂರಿ ಹಾಕಿದ್ದ.

ಜೆಡಿಎಸ್‌ನಿಂದ ಸ್ಪರ್ಧಿಸಿರುವ ತುಮಕೂರಿನ ಕೆ.ಬಿ. ಜಯಣ್ಣನಿಗೆ ಮಠಮಾನ್ಯಗಳ ಆಶೀರ್ವಾದ ಇದ್ದರೂ ಗೆಲುವು ಕಷ್ಟವೇ. ಕಾಂಗ್ರೆನ ಹಾಲನೂರು ಲೇಪಾಕ್ಷಿಗೆ ತುಮಕೂರಲ್ಲಷ್ಟೇ ಬೆಂಬಲ ಕಂಡುಬಂದಿದೆ.

ಈಶಾನ್ಯ ಪದವೀಧರ ಕ್ಷೇತ್ರ: ಮಸ್ಕಿ V/s ಸಂಗಮೇಶ್ವರ....

ಹೈದರಾಬಾದ್ ಕರ್ನಾಟಕದ 62 ಸಾವಿರ ಪದವೀಧರರ ಮುಂದೆ ಬಿಜೆಪಿಯ ವಂಚಕ ಮನೋಹರ್ ಮಸ್ಕಿ ಮತ್ತು ಜೆಡಿಎಸ್‌ನ ಕ್ರಿಯಾಶೀಲ ಪ್ರೊ. ಸಂಗಮೇಶ್ವರ ನಿಂತಿದ್ದಾರೆ. ಸುಕೊ ಬ್ಯಾಂಕಿನ ಪ್ರಚಾರಕ್ಕೆ ಅನುಪ್ರಭಾಕರಳನ್ನು ತಂದಿದ್ದ ಈ ಮಸ್ಕಿ ಮಸ್ಕಾ ಹೊಡೆಯುವುದರಲ್ಲಿ ಎತ್ತಿದ ಕೈ. ಕಾಂಗ್ರೆನ ಸೂರ್ಯಕಾಂತ ಕೊರಳ್ಳಿಗಿಂತ ಜೆಡಿಎಸ್‌ನ ಪ್ರೊ. ಸಂಗಮೇಶ್ವರರೇ ಮಸ್ಕಿಗೆ ಹೆಚ್ಚು ಚಾಲೆಂಜ್ ಮಾಡುತ್ತಿದ್ದಾರೆ. ಕಳೆದ ಮೂರು ಅವಧಿಗೆ ಬಿಜೆಪಿಯಿಂದ ಇಲ್ಲಿ ಗೆದ್ದಿದ್ದ ದಿ. ಡಾ. ತಂಗಾ ಸ್ಥಾನಕ್ಕೆ ಬರಲು ಮಸ್ಕಿ ಎಲ್ಲಾ ಕಸರತ್ತು ಮಾಡುತ್ತಿದ್ದಾನೆ.




ಮಸ್ಕಿ

ರಾಜ್ಯ ಕಾಲೇಜು ಶಿಕ್ಷಕರ ಸಂಘದ ಕಾರ್ಯದರ್ಶಿಯಾಗಿ ಕೆಲಸ ಮಾಡಿ ಒಳ್ಳೆ ಹೆಸರು ಗಳಿಸಿರುವ ಪ್ರೊ. ಸಂಗಮೇಶ್ವರರನ್ನು ಗೆಲ್ಲಿಸುವ ಮೂಲಕ ಚಿಣ್ಣಗಳಿಗೆ ಪಾಠ ಕಲಿಸಿದರೆ ಪದವೀಧರರಿಗೂ ಗೌರವ ಸಿಗಲಿದೆ.



ಪ್ರೊ.ಸಂಗಮೇಶ್ವರ್

ಪುಟಬಾಲಾಟದಲ್ಲಿ ದ್ಯಾವೇಗೌಡ್ರು ವರಲ್ಡ್ ಚಾಂಪಿಯನ್



ಭೂಮಿ ಬೀಜ ಕೇಳುವ ಸಮಯ ಹತ್ತಿರ ಬರತೊಡಗಿತ್ತು, ಬಿಸಿಲು ಚುರುಗುಟ್ಟುತ್ತಿದ್ದರೂ ಮರ ಗಿಡ ಬೇಲಿಯೆಲ್ಲಾ ನಳನಳಿಸುತ್ತಿದ್ದವು. ಇದ್ದಕ್ಕಿದ್ದಂತೆ ಉತ್ಸಾಹಗೊಂಡ ಜುಮ್ಮಿ,

"ಲೇ ಉಗ್ರಿ ಅದ್ಯಾವುದೊ ಆಟಾಗ್ರಫಿ ಅನ್ನೊ ಸಿನುಮ ಚನ್ನಾಗ್ಯದಂತೆ ನಡಿಲ ಹೋಗಿ ನೋಡನ" ಎಂದಳು.

"ಒಂದ್ಯರಡು ದಿನ ಬುಟ್ಟು ಹೋಗನಿರು."

"ಯರಡು ದಿನಗಂಟ ಇದ್ದತ್ಲ?"

"ಆಕಸ್ಮಾತ್ ತಗುದ್ರೆ ಕಳಕಳದೇನೆ, ಇನ್ನೊಂದು ಸಿನುಮ ನೋಡಿದರಾಯ್ತು ಬುಡು."

"ಲೇ ಇದು ಚನ್ನಾಗಿದ್ದತಂತೆ ಕಂಡ್ರ. ಯೀರೋ ಮದಿವಿಗೆ ಅವುನ ಜ್ವತೆ ಓತ್ತಿದ್ದೋರಿಗ್ಯಲ್ಲ ಲಗ್ನಪತ್ರುಕೆ ಕೊಡಕ್ಕೋಯ್ತನಂತೆ. ಅವುನ ಜ್ವತೆ ಓದ್ತಾ ಯಿದ್ದ ಹುಡುಗಿರ್‍ಯಲ್ಲ ಈಗೇನಾಗ್ಯವುರೆ ಅಂತ ತೋರ್‍ತರಂತೆ. ಚನ್ನಾಗ್ಯದಂತೆ ಕಂಡ್ರ" ಎಂದು ಜುಮ್ಮಿ ಸಂಕ್ಷಿಪ್ತವಾಗಿ ಸ್ಟೋರಿ ಹೇಳಿ ಕಣ್ಣರಳಿಸಿದಳು.

"ಯಕ್ಕ ಅದೇನು ಅಪರೂಪದ ಕತೆಯೇನಲ್ಲ, ನಮ್ಮ ಕಾಳದೊಡಪ್ಪ, ಸೀರಚಿಗಪ್ಪ, ನಿನ್ನ ಲೈಪಲ್ಲಿ ನ್ಯಡದಿಲ್ದೆ ಯಿರಬವುದು. ಆದ್ರೆ ನನ್ನ ಲೈಪಲ್ಲಿ ನಮ್ಮ ಉಗ್ರಿ ಲೈಪಲ್ಲಿ ನ್ಯಡದಿರೊ ಇನ್ಸಿಡೆಂಟ್‌ಗಳ ಸಿನುಮ ಮಾಡಿದ್ರೆ, ಮೈ ಆಟೋಗ್ರಾಪ್ ಸಿನುಮ ಮೀರಿಸಿ ತಗಿಬವುದು" ಎಂದ ವಾಟಿಸ್ಸೆ.

"ನೀನ್ಯಾರುನ್ನ ಲವ್ವು ಮಾಡಿದ್ದ?"

"ಅದನ್ಯಲ್ಲ ಈಗೇಳಿ ಏನು ಪ್ರಯೋಜನ ಅಕ್ಕ? ಸುಮ್ಮನೆ ಮನಸಿಗೆ ಪೀಲಾಯ್ತದೆ ಅಷ್ಟೆ."

"ನಾನ್ಯಾರಿಗೂ ಹೇಳದಿಲ್ಲ ಹೇಳ್ಳ?"

"ಈಗೇಳಿದ್ರೂ ಏನೂ ಆಗದಿಲ್ಲ ಕಣಕ್ಕ. ಉಪ್ಪು ಹೋಯ್ತು, ಉಪ್ಪು ಕಟ್ಟಿದ ಬಟ್ಟೆನೂ ಹೋಯ್ತು ಅನ್ನಂಗೆ. ಉಪ್ಪು ತಿಂದ ಅನುಭವ ಉಳದದೆ ಅಷ್ಟೆ."

"ಅಂಗರೆ ನೀನು ಲವ್ವು ಮಾಡಿ ಇಂಗುತಿಂದ ಮಂಗಾದೆ ಅನ್ನು?" ಎಂದು ಜುಮ್ಮಿ ನಕ್ಕಳು.

"ಅಂಗೇನು ಆಗಿಲ್ಲ ಕಣಕ್ಕ. ಮಿಢ್ಳಿಸ್ಕೂಲಲ್ಲಿದ್ದಾಗ ಮಂಜುಳ ಅನ್ನೊ ಹುಡುಗಿಯ ಲವ್ವು ಮಾಡಿದ್ದೆ. ಅವುಳು ಏಳನೆ ಕ್ಲಾಸ್ ಮುಗಿಸಿದ ಮ್ಯಾಲೆ ಮದುವೆ ಮಾಡಿದ್ರು. ಅಲ್ಲಿಗಲ್ಲಿಗೆ ಹತ್ತೊರ್ಸಾದ ಮ್ಯಾಲೆ ಇದೇ ಬಸುರಾಜನ ಮದಿವಿಗೆ ಭದ್ರಾವತಿ ಮಾವಿನ ಕ್ಯರಿಗೋಗಿದ್ವೊ. ನ್ಯಡದೂ ನ್ಯಡದೂ ಸಾಕಾಗಿ ಅಲ್ಲೊಂದು ಗುಡಸಲಿಗೆ ನೀರು ಕುಡಿಯಕ್ಕೋದ್ರೆ ಅದೇ ಮಂಜುಳ ನೀರು ತಂದು ಕೊಟ್ಲು. ಕರಟ್ಟಾಗಿ ಐದು ಮಕ್ಕಳ ತಾಯಿಯಾಗಿದ್ಲು. ಅದ ನೋಡಿ ನಾನೇನಾಗಬೇಕಕ್ಕ?"

"ಐದು ಮಕ್ಕಳಿತ್ತಿದ್ವ?"

"ಊ ಕಣಕ್ಕ. ಅವುಳ ಗಂಡ ಮೂರು ಕುಂಟೆ ಗದ್ದೆ ಮಡಗಿದ್ದ. ಹೆಂಡತಿನೂ ಗದ್ದೆ ಅಂತ್ಲೆ ತಿಳಕಂಡಿದ್ದ. ಅಂಗಾಗಿ ಐದು ಮಕ್ಕಳ ತಾಯಿ ಆಗಿದ್ಲು ಮಂಜುಳ. ಇದೇ ತರ ನನಿಗೆ ಇನ್ನು ಮೂರು ಎಕ್ಸ್‌ಪೀರಿಯನ್ಸವೆ".

"ಇನ್ನು ಮೂರಿದ್ದವೆ ಅದ್ಯಾವುಲ?"

"ಈ ಟೇಮಲ್ಲಿ ಹೇಳಂಗಿಲ್ಲ ಕಣಕ್ಕ ಆದ್ರು ಒಂದೇಳ್ತಿನಿ ಕೇಳಕ್ಕ. ಕದಬಳ್ಳಿ ಹೈಸ್ಕೂಲಲ್ಲಿದ್ದಾಗ ಮಾಲ ಅಂತ ಒಬ್ಬಿದ್ಲು ಕಣಕ್ಕ. ಅವುಳ ಮಕ ನೋಡಿದ್ರೆ ಹುಣ್ಣಿಮೆ



ಚಂದ್ರನ್ನೋಡಿದಂಗಾಗದು. ಮೇಷ್ಟ್ರುಗಳೂ ಅವುಳ ಕಿತಗಂಡು ತಿನ್ನಂಗೆ ನೋಡತಿದ್ರು."

"ಅದಿನ್ಯಂತ ಮೇಟ್ರುಲಾ ಅವುರು?"

"ಇರಕ್ಕ ಹೇಳ್ತಿನಿ. ಅವುಳು ಹೈಸ್ಕೂಲ್ ಮುಗಿತಿದ್ದಂಗೆ ಮದುವೆ ಮಾಡಿದ್ರು. ಅವುಳ ಮದಿವಾದೋನಿಗೆ ಯಾವ ಟೇಸ್ಟೂ ಇರಲಿಲ್ಲ. ನನಗಿಂತ ಕುಡಕಾಗಿಬುಟ್ಟ. ಪಾಪ ಮಾಲ ಗಂಡನ್ನ ತಿದ್ದಕ್ಯಾಗ್ದೆ ಸುಯ್‌ಸೈಡ್ ಮಾಡಿಕಂಡ್ಳು ಕಣಕ್ಕ. ರಿಯಲಿ ಐ ಪೀಲ್ ವೆರಿ ಬ್ಯಾಡ್."

"ನಿನ್ನ ಮದಿವಾಗಿದ್ರೆ ಇರತಿದ್ಲೆ ಅವುಳು, ಯಾವತ್ತೊ ಸಾಯಳು."

"ಆಕಸ್ಮಾತ್ ನಾನು ಮಾಲನ್ನ ಮದಿವಾಗಿದ್ರೆ ಕುಡಿತಿರಲಿಲ್ಲ ಕಣಕ್ಕ, ಚನ್ನಾಗಿರತಿದ್ದೆ."

"ನಿನ್ನೆದ್ದಿ ಗಿರಜನ್ನೆ ಮಾಲ ಅಂತ ತಿಳಕಳೊ. ಅವುಳ್ಯಾತ್ರುಲ್ಲಿ ಕಡಿಮ್ಯಾಗಿದ್ದಳು" ಎಂದ ಉಗ್ರಿ.

"ಏನೊ ನೀನೇಳದು ಆದ್ಯಲ್ಲ ಇಂಪಾಜಿಬಲ್. ಈಗ ನನ್ನ ಪರಸನಲ್ ಸುದ್ದಿ ಬ್ಯಾಡ. ಇಡೀ ವರಲ್ಡು ಪುಟ್‌ಬಾಲ್ ಆಟ ಆಡಕ್ಕೆ ತಯಾರಾಯ್ತ ಅದೆ, ಅದರ ಸುದ್ದಿ ಏನಾರ ಇದ್ರೆ ಹೇಳೋ ಉಗ್ರಿ."

"ಜರಮನಿಲಿ ಪುಟ್‌ಬಾಲಾಟ ಸುರುವಾಯ್ತಂತೆ ಕಣೊ. ನಮ್ಮ ದೇಸದೋರು ಯಾರೋದ್ರೊ ಏನೊ ಗೊತ್ತಾಗಲಿಲ್ಲ."

"ನಮ್ಮ ದೇಸದಲ್ಲಿ ಪುಟಬಾಲಾಡೋರು ಯಾರಿದ್ದರು ನಾನು ಕಾಣದಂಗೆ?"

"ದೇವೇಗೌಡ್ರಿಲವೇನೊ?"

"ದೇವೇಗೌಡ್ರು ರಾಗಿಬಾಲಾಟ ಆಡ್ತರೆ ವರತು ಪುಟ್‌ಬಾಲ್ ಬರದಿಲ್ಲ ಕಣೊ ಉಗ್ರಿ."

"ಆದ್ರು ಪುಟ್‌ಬಾಲಾಟ ಆಡಿಬುಟ್ರಲ್ಲೊ?"

"ಏಜ್ಯಾಟ್ಲಿ ಕರಟ್, ಅದು ವಳೆನರಸೀಪುರದ ಪೀಲ್ಡಲ್ಲಿ ಟ್ರೈನಿಂಗ್ ತಗಂಡು ಸಕ್ಸಸ್ ಆದ್ರು. ಅದನ್ನೇ ಸ್ಟೇಟ್ ಪ್ಲೇ ಗ್ರೌಂಡಲ್ಲಿ ಆಡಿದ್ರು."

"ಅಂಗರೆ ದ್ಯಾವೇಗೌಡ ಅದ್ನೂ ಆಡ್ತನೇನ್ಲ?" ಎಂದ ಕಾಳಮಾವ ಮುಗ್ಧ ಕುತೂಹಲದಿಂದ.

"ಇದೇನು ದ್ವಡಪ್ಪ ಹಿಂಕೇಳ್ತಿ? ಗೌಡ್ರು ಇಲ್ಲಿಗಂಟ ಆಡಿರೊ ಆಟ ಏನನ್ನ ಕಂಡೆ ನೀನು? ರಿಯಲಿ ದಿಸೀಸ್ ಪುಟ್‌ಬಾಲ್ ಪ್ಲೇ. ಆದ್ರೆ ಆಟಗಾರ್ರು ಚೆಂಡು ಬಳಸಿದ್ರೆ, ಇವುರು ಮನುಸುರ್ನೆ ಬಳಿಸಿಬುಟ್ರು."

"ಅದೇನು ಸರಿಯಾಗೇಳ್ಳ?"

"ನೋಡು ದ್ವಡಪ್ಪ, ವಳೆನರಸೀಪುರದ ಲೋಕಲ್ ಪ್ಲೇ ಗ್ರೌಂಡಲ್ಲಿ ಆಡುವಾಗ ಪುಡಸ್ವಾಮಿಗೌಡನ ಜ್ವತಿಗೆ ಕುರುಬರ ಕುಮಾರಸ್ವಾಮಿ, ದೊಡ್ಡೇಗೌಡ ಅನ್ನೋರಿಗೆ ಕಿಕ್ ಮಾಡಿದ್ರು. ಅವುರು ಹ್ಯಾಂಡಿಕ್ಯಾಪಾದೇಟ್ಗೆ ರೇವಣ್ಣನ್ನ ರೆಡಿ ಮಾಡಿದ್ರು."

" !?"

"ಇನ್ನು ಸ್ಟೇಟ್ ಪಾಲಿಟಿಕ್ಸ್‌ಗೆ ಬಂದಾಗ ಕೊಟ್ಟ ಮೊದಲ ಹ್ವಡತನೆ ಬಮ್ಮಾಯಿಗೆ, ಅವುನು ಸರ್ಕಾರ ಕೆಡಿಕಂಡು ಬಿದ್ದ. ಆನಂತರ ಗೌಡ್ರು ನಮ್ಮ ಜನಾಂಗದಲ್ಲಿ ಯಾರ್‍ಯಾರವುರೆ ಅಂತ ಪೀಲ್ಡಲ್ಲಿ ನಿಂತಗಂಡು ನೋಡಿದ್ರು. ಕೊಡಗಿನ ಕಡೆ ಗುಂಡೂರಾಯ ಅನ್ನೊ ಮುಖ್ಯಮಂತ್ರಿನೇ ಸೋಲಿಸಿ ಬಂದಿದ್ದ ಜೀವಿಜಯ ಇದ್ದ. ಅವುನಿಗೊಂದು ಗುನ್ನ ಕೊಟ್ರು ಮುಂಡಿಲಿ. ಅವುನು ಅಲ್ಲಿಂದ ಎದ್ದು ಬರಲಿಲ್ಲ."

"!?"

"ಇನ್ನ್ಯಾರ‍್ರವುರೆ ಅಂತ ನೋಡಿದ್ರು. ತುಂಬ ತಿಳಿವಳಿಕಸ್ಥ ಯೋಗ್ಯ ಸಿಟ್ಟಿನ ಮನ್ಸ ವೈ.ಕೆ. ರಾಮಯ್ಯ ಕಂಡ. ಅವುನಿಗೊದ್ದೇಟಿಗೆ ಕಾಂಗ್ರೆ ಪಾರ್ಟಿಗೋಗಿ ಬಿದ್ದ. ಅದೇ ತರ ತನ್ನ ಮಕ್ಕಳನ್ಯಲ್ಲ ಸೈಡೊಡಕಂಡು ದೇವೇಗೌಡನಿಗಿಂತ್ಲೂ ಎತ್ತರವಾಗಿ ಕಾಣ್ತಯಿದ್ದ ಬಿ.ಎಲ್. ಶಂಕರ್ ಕಂಡ. ಅವುನಿಗೆ ತಿಗದ ಮ್ಯಾಲೊದ್ದೇಟಿಗೆ ಕಾಂಗ್ರೆಸ್ಸಿಗೋಗಿ ಮಕ್ಕಡೆ ಬಿದ್ದ."

"!?"

"ತಿರಗ ಇನ್ಯಾರವುರೆ ಅಂತ ನೋಡಿದ. ಬೈರೇಗೌಡ, ನಾಗೇಗೌಡ ಒಂದೇ ತರ ಕಾಣತಿದ್ರು. ಅವುರಿಗೆ ತೊಡರುಗಾಲು ಕೊಟ್ಟ. ಕ್ಯಳಿಕೆ ಬಿದ್ದೋರು ಮ್ಯಾಕೇಳಲೇಯಿಲ್ಲ, ಅವುರ ಪೋಸ್ಟ್ ಮಾರ್ಟಂ ರಿಜಲ್ಟು ಮಾಟ ಅಂತ ಬತ್ತು."

"!?"

"ಇನ್ನು ಇತ್ತೀಚೆಗೆ ಮೂರು ಕಿಕ್ಕೆತ್ತಿದ ಕಣ್ರೊ. ಆದು ಯಂತ ಕಿಕ್ಕು ಅಂತಿರಿ. ಪೀಲ್ಡಿಂದ ಹ್ವರಿಕೋದ್ರೊ ಅತ್ತಗೆ."

"ಅವ್ಯಾವೊ?"

"ನಿನಗೊತ್ತಿಲವೇನೊ ಉಗ್ರಿ? ಸಿದರಾಮಯ್ಯ, ಸಿಂಧ್ಯಾ, ಎಂ.ಪಿ. ಪ್ರಕಾಶ್! ಇವುರಿಗೆ ಸರಿಯಾಗಿ ಗ್ಯಜ ಕಟ್ಟಗೇ ಕಿಕ್ ಮಾಡಿದ ಮ್ಯಾಲೆ ಕುಮಾರ್ ಸ್ವಾಮಿ ಅನ್ನೊ ಬಾಲ ಗೋಲ್ ಮಾಡಿದ. ಈಗೇಳಿ ಪುಟ್ ಬಾಲಲ್ಲಿ ನಂ ಗೌಡ್ರು ವರಲ್ಡ್ ಚಾಂಪಿಯನ್ನಲವೆ?"

"ತಲರಟೆ ನನ್ನ ಮಗ ನೀನು" ಎಂದ ಕಾಳಮಾವ.


-ಬಿ. ಚಂದ್ರೇಗೌಡ

Zero Hour ಮುನ್ನಿ

1. "ಈ ದೇಹದಿಂದ ದೂರವಾದೆ ಏಕೆ ಆತ್ಮನೆ" ಎಂದು ಡಾ. ಅನ್ನದಾನಿ ಸದನದಲ್ಲಿ ಹಾಡಿದರು. ಕೆಲವರು ಆಕ್ಷೇಪಿಸಿದರು. ಇದು ಏನನ್ನು ಸೂಚಿಸುತ್ತದೆ?
   - a) ದೇವೇಗೌಡ ಎಂಬ ಆತ್ಮವು ಸದನ ಎಂಬ ದೇಹದಿಂದ ಹೊರಗಿರುವುದಕ್ಕೆ ಬೇಜಾರಂತೆ
   - b) ಈ ಹಾಡಿಗೆ ಆಕ್ಷೇಪಣೆ ಮಾಡಿದವರಿಗೆ "ಸಂಜೆ ಹೊತ್ತಿನ್ಯಾಗೆ, ಬಂದ್ರೆ ಇತ್ತಾಗೆ" ಹಾಡು ಕೇಳುವ ಆಸೆಯಾಗಿರಬಹುದು.
   - c) ಮೋಟಮ್ಮ ಇದ್ದಿದ್ದರೆ "ಜೋಕೆ, ನಾನು ಬಳ್ಳಿಯ ಮಿಂಚು...." ಎಂದು ಹಾಡ್ತಿದ್ದರೇನೊ....
   - d) ಕುಮಾರ್ ಬಂಗಾರಪ್ಪ ಬಿ.ಸಿ.ಪಾಟೀಲ್‌ಗಳು ನೃತ್ಯ ಮಾಡಬೇಕಿತ್ತು ಎಂಬುದು ಕೆಲವರ ಆಶೆ...
   - e) ಯಾವ ಉತ್ತರ ಬರೆದರೂ ಮಾರ್ಕ್ಸ್ ಸಿಗುತ್ತವೆ.
2. ಫುಟ್‌ಬಾಲ್‌ನಲ್ಲಿ ಭಾರತ ಹಿಂದಿರಲು ಕಾರಣ?



   - a) ಫುಟ್‌ಬಾಲ್ ಎಂದರೆ ಕಾಲಿಗೆ ಬುದ್ಧಿ ಹೇಳುತ್ತಾರೆ.
   - b) ಹ್ಯಾಂಡ್‌ಬಾಲ್‌ನಲ್ಲಿ 'ಕೈ ಚಳಕ' ತೋರಿಸುತ್ತಿರುವುದರಿಂದ ಫುಟ್‌ಬಾಲ್‌ಗೆ ಟೈಮ್ ಇಲ್ಲ.
   - c) ಮೆರಿಟ್ಟಿನ ಜೊತೆ ಬೆವರು ಹರಿಸಬೇಕಲ್ಲ?
   - d) ಮೆರಿಟ್ ಪ್ರತಿಭೆಗಳಿಗೆ ಆಡಲು ಟೈಮ್ ಇಲ್ಲ.
3. "ಸಚಿವ ಹೊರಟ್ಟಿ 'ನಿಸರ್ಗದ ಕರೆ' (nature's call) ಗೆ ಓಗೊಟ್ಟು ಧಾವಿಸಿ ಬಂದು ಸೀಟಿ ಹೊಡೆದರು". ಈ ವಾಕ್ಯವನ್ನು ವಿವರಿಸಿ
   - a) ಹೊರಟ್ಟಿ ಅರ್ಜೆಂಟಾಗಿ ಟಾಯ್ಲೆಟ್‌ಗೆ ಹೋಗಿ ಮೂತ್ರ ವಿಸರ್ಜಿಸಿದರು.
   - b) 'ನಿಸರ್ಗದ ಕರೆ'ಗೆ ಹೊರಟ್ಟಿಯೂ ಸೇರಿದಂತೆ ಎಲ್ಲರೂ ತಲೆಬಾಗಲೇಬೇಕು.
   - c) ತಮ್ಮ 'ನಿಸರ್ಗ' ಫಾರ್ಮ್‌ಗೆ ಧಾವಿಸಿದ ಮಾಜಿ ಆಟದ ಮಾಸ್ತರು ಹೊರಟ್ಟಿ whistle (ಶಿಳ್ಳೆ) ಹೊಡೆದು ಕುಣಿದಾಡಿದರು.
   - d) 'ನಿಸರ್ಗ' ಎನ್ನುವ ಹುಡುಗಿಯ ಕಾಲ್ ಬಂದಿರಬಹುದು
4. 'ಮಿಸ್‌ಕಾಲ್' ಎಂಬುದರ ಗೂಡಾರ್ಥ.
   - a) ಸುಮ್ಮನೆ ರಿಂಗ್ ಕೊಡುವುದು.
   - b) ರಿಂಗ್ ತೊಟ್ಟ ಗೆಳತಿ (ಮಿಸ್) ಆಹ್ವಾನ.
   - c) ಮಿಸೆಸ್ ಬೋರಾದಾಗ 'ಮಿಸ್' ಕಾಲ್!
   - d) 'ಮಿಸ್' ಚೆಲುವೆ ಕಾಲು ತೋರಿಸುವುದು
   - e) b) ಮತ್ತು c) ಎರಡೂ ಸರಿ.
5. 'ಪ್ರೇಮ್ ತಿಂದಿಗೆ ರಕ್ಷಿತಾಗೆ ತುರಿಕೆ'.... ಹೀಗೆಂದರೇನು?



   - a) ಪ್ರೇಮ್‌ನ ಪ್ರೇಮಪಾಶದಲ್ಲಿ ಬಿದ್ದ ರಕ್ಷಿತಾಗೆ, ಹಿಂದಿಂದೆಯೇ ತಿರುಗುವ ಪ್ರೇಮ್‌ನ ತೆವಲಿನಿಂದಾಗಿ ಕಿರಿಕಿರಿ ಆಗ್ತಿದೆ.
   - b) ಪ್ರೇಮ್ ಕೊಟ್ಟ ತಿಂಡಿ ತಿಂದ ರಕ್ಷಿತಾ ಫುಡ್ ಪಾಯಿಜನ್‌ನಿಂದ ಅಲರ್ಜಿಗೊಳಗಾದಳು.
   - c) ಪ್ರೇಮ್ ಎಂಬ ತುರಿಕೆ ಸೊಪ್ಪು ಮುಟ್ಟಿದ ರಕ್ಷುಗೆ ತುರಿಕೆ ಖಾಯಂ!
   - d) a) ಮತ್ತು c) ಸರಿ


ಉತ್ತರಗಳು 1.e 2.c 3.c 4.e 5.d

ಹೆಣ್ಣಿನ ಎಲ್ಲ ಕಾರ್ಯದಲ್ಲಿ ಅವಳು ಗಂಡಿನ ಹೃದಯದಲ್ಲಿ ಕಟ್ಟಿದ್ದಕ್ಕಿಂದ ಬಾಳಿಕೆಯುಳ್ಳದ್ದು ಬೇರಾವುದೂ ಇಲ್ಲ -ಆಂಡರ್‌ಸನ್

ಒಂದು ಅದ್ಭುತ ಜೋಡಿ

ನಾವು ದುರ್ಬಲರೆಂದು ಯಾರು ಹೇಳಿದ್ದು? ಅಮೃತಮಹಲ್ ನೋಡಿ.


ಅದೊಂದು ಸಂಜೆ. ಮೊನ್ನೆ 31ನೇ ತಾರೀಖು ಸಂಜೆ. ಅಜ್ಜಂಪುರಕ್ಕೆ ನಾನು ಹೋದದ್ದರಿಂದ ಆ ಊರಿನಲ್ಲೇ ಇರುವ ಅಮೃತಮಹಲ್ ಸಾಕಣೆಯ ಜನ ಕರೆದಿದ್ದರು. ಹುಣ್ಣಿಮೆ ಹತ್ತಿರವಾಗುತ್ತಿತ್ತು, ಪೂರ್ಣಚಂದ್ರ ಇನ್ನೂ ಪೂರ್ತಿ ಮೈತುಂಬಿಕೊಂಡಿರಲಿಲ್ಲ. ಎಲ್ಲ ಊರುಗಳಂತೆಯೇ ಇರುವ ಅಜ್ಜಂಪುರ ಮುಸ್ಸಂಜೆಗೆ ಮುತ್ತಿದ್ದಂತೆ, ಮಂದ ಬೆಳದಿಂಗಳು ಕೊಮ್ಮತೊಡಗಿತ್ತು. ಇದಕ್ಕೆ ಸರಿಯಾಗಿ ವಿದ್ಯುತ್ ಕೈಕೊಟ್ಟಿತ್ತು. ಅಮೃತಮಹಲ್ ಹೋರಿಗಳ ಉಸ್ತುವಾರಿ ನೋಡಿಕೊಳ್ಳುತ್ತಿರುವವರು ಕೃಷ್ಣಮೂರ್ತಿ. ನಿಮಗೆ ನೆನಪಿರಬಹುದು. ಕೆಲವು ವರ್ಷಗಳ ಹಿಂದೆ ಈ ಅಮೃತಮಹಲ್ ಹೋರಿಗಳ ಬಗ್ಗೆ, ಕೃಷ್ಣಮೂರ್ತಿಯವರ ಬಗ್ಗೆ ಬರೆದಿದ್ದೆವು. ಕರ್ನಾಟಕದ ಅನೇಕ ಕಡೆ ಸುಮಾರು ಒಂದು ಸಾವಿರ ಎಕರೆ ನೆಲ, ಸಾವಿರಾರು ಅಮೃತಮಹಲ್ ಹೋರಿಗಳು, ಹಸುಗಳನ್ನು ಪಡೆದ ಸಂಸ್ಥೆ ಇದು. ಇದು ನಾಶದ ಅಂಚಿನಲ್ಲಿತ್ತು. ಯಾವ ಅಧಿಕಾರಿಗೂ 'ದನ ಕಾಯುವ' ಕೆಲಸ ಇಷ್ಟವಿಲ್ಲ. ರಾಜಕಾರಣಿಗಳ ತಂಟೆ, ವಿಮಾನ, ರಾಕೆಟ್, ವೈಜ್ಞಾನಿಕ ಕೃಷಿಯ ಈ ದಿನಗಳಲ್ಲಿ ಎತ್ತುಗಳ ರಗಳೆ ಯಾರಿಗೆ ಬೇಕು?



ಕೃಷ್ಣಮೂರ್ತಿ ಐ.ಎ.ಎಸ್ ಅಧಿಕಾರಿ. ಈತ ಸಂಸ್ಥೆಗೆ ಬಂದು ಅದನ್ನು ಉಳಿಸಿದರು. ಅಮೃತಮಹಲ್ ಹೋರಿಗಳ ಮಹತ್ವ ಕಲಿತು ಈ ಸಂಸ್ಥೆ ಬೆಳೆಯುವಂತೆ ಮಾಡಿದರು. ಇದನ್ನು ಸಹಿಸದ ಸಹೋದ್ಯೋಗಿಗಳು, ರಾಜಕಾರಣಿಗಳು ಇವರ ಮೇಲೆ ಹರಿಹಾಯ್ದರು. ಇವರನ್ನು ವರ್ಗಾ ಮಾಡಿಸಲು ಮಸಲತ್ತು ನಡೆಸಿದರು. ಅಷ್ಟರಲ್ಲಿ ಇದು ನಮ್ಮ ಗಮನಕ್ಕೆ ಬಂತು. ಅಮೃತಮಹಲ್ ದೊಡ್ಡಿಯಲ್ಲಿ ಆಗುತ್ತಿರುವುದರ ಬಗ್ಗೆ, ಅದರ ಚರಿತ್ರೆಯನ್ನೆಲ್ಲ ಸೇರಿಸಿ ಬರೆದೆವು. ಕೃಷ್ಣಮೂರ್ತಿಗಳ ವರ್ಗಾ ರದ್ದಾಯಿತು; ಆಮೇಲೆ ಈ ವ್ಯಕ್ತಿಗೆ ಪ್ರಶಸ್ತಿಗಳೆಲ್ಲ ದೊರೆತವು. ವಿಜಯನಗರ ಸಾಮ್ರಾಜ್ಯದ ಕಾಲದಿಂದ, ಟಿಪ್ಪೂ ಸುಲ್ತಾನ್ ಈ ಅಮೃತಮಹಲ್ ಹೋರಿಗಳ ತಳಿಯನ್ನು ಮೆಚ್ಚಿ ಸೈನ್ಯದ ತುಕಡಿಗೆ ನೆರವಾಗಲು ತರಬೇತಿ ನೀಡಿದಂದಿನಿಂದ ಎಲ್ಲವನ್ನೂ ದಾಖಲೆಗೊಳಿಸಿದೆವು.

ಅಪರೂಪಕ್ಕೆ ಅಜ್ಜಂಪುರದಲ್ಲಿದ್ದೆ. ಸಂಜೆ ತಮ್ಮೊಂದಿಗಿದ್ದ ಅಮೃತಮಹಲ್ ಹೋರಿಗಳನ್ನು ನೋಡಲು, ಅಲ್ಲಿ ಸಾಕಿದ್ದ ಮೊಲಗಳನ್ನು ನೋಡಲು, ಊಟ ಮಾಡಲು ಕರೆದಿದ್ದರು. ಬೆಳಿಗ್ಗೆಯಿಂದ ಧೂಳು, ಗದ್ದಲ ಮಾತುಕತೆಯಲ್ಲಿ ಕಾಲ ಕಳೆದಿದ್ದ ನನಗೆ ಸುಸ್ತಾಗಿತ್ತು, ಆದರೂ ಹೋದೆ.

ಅಲ್ಲಿ ತಿಂಗಳ ಸಣ್ಣ ಬೆಳಕು. ಒಂದರ ಮುಂದೊಂದು ಟ್ರ್ಯಾಕ್ಟರು. ಎರಡೂ ಟ್ರ್ಯಾಕ್ಟರುಗಳಲ್ಲಿ ಮುಂದಿನ ಟ್ರ್ಯಾಕ್ಟರಿಗೆ ನೊಗ ಹೂಡಲು ವ್ಯವಸ್ಥೆ ಮಾಡಿದ್ದರು. ಅಮೃತಮಹಲ್ ಹೋರಿಗಳ ಶಕ್ತಿಯನ್ನು ತೋರಲು ಸಿದ್ಧತೆ ನಡೆದಿತ್ತು. ಎರಡೂ ಟ್ರ್ಯಾಕ್ಟರುಗಳು ಮತ್ತು ಅವುಗಳಲ್ಲಿದ್ದ ಸರಕಿನ ತೂಕ ಎಷ್ಟಿರಬಹುದು? ಕಡಿಮೆ ಅಂದರೆ ಏಳು ಮೆಟ್ರಿಕ್ ಟನ್; ಅಂದರೆ ಒಂದು ಲಾರಿ ಲೋಡ್. ಅವುಗಳನ್ನು ಈ ಒಂದೇ ಜೊತೆ ಹೋರಿ ಎಳೆಯಲು ಸಾಧ್ಯವೇ? ನಿಂತು ನೋಡುತ್ತಿದ್ದೆವು. ಹೋರಿಗಳನ್ನು ಹೊಡೆದುಕೊಂಡು ಬಂದರು. ಕೇವಲ ಐದೂವರೆ ಅಡಿ ಎತ್ತರದ, ಎಲ್ಲ ಎತ್ತುಗಳಂತೆಯೇ ಕಾಣುವ, ಉದ್ದನೆಯ ಸ್ವಲ್ಪವೇ ಬಾಗಿದ ಕೊಂಬುಗಳ ಹೋರಿಗಳು. ಜನರನ್ನು ನೋಡಿದೊಡನೆ ಸಿಡಿಮಿಡಿಗೊಂಡವು. ಹಿಡಿದುಕೊಂಡಿದ್ದವರನ್ನು ಎಳೆದುಕೊಂಡು ಓಡಿದವು. ನಾವು ಸ್ವಲ್ಪ ದೂರಕ್ಕೆ ಹೋದೆವು. ಹೂಡಿದೊಡನೆ ಕರೆಯಲು ಹೇಳಿದೆವು. ಆ ಸಂಸ್ಥೆಯಲ್ಲಿದ್ದ ಇನ್ನಿತರ ಹೋರಿಗಳ ದೊಡ್ಡಿ ನೋಡುತ್ತಿದ್ದೆವು. ದೊಡ್ಡಿಯಲ್ಲಿ ನಿಂತಿದ್ದ ದಿಟ್ಟ, ಕಷ್ಟಸಹಿಷ್ಣುಗಳಾದ ನೂರಾರು ಹೋರಿಗಳು, ಇಪ್ಪತ್ತು ಗಂಟೆ ಮೇವು, ನೀರಿಲ್ಲದೆ ಗೇಯಬಲ್ಲ ತಳಿ; ವರ್ಷಕ್ಕೊಮ್ಮೆ ನಡೆವ ಹರಾಜಿನಲ್ಲಿ ಜೊತೆಗೆ ಅತ್ಯಂತ ಹೆಚ್ಚು ಬೆಲೆಯೆಂದರೂ ಒಂಭತ್ತೂವರೆ ಸಾವಿರ. ಈಗ ಸಾಮಾನ್ಯ ಎತ್ತುಗಳಿಗೇ ಜೊತೆಗೆ ನಾಲ್ಕೈದು ಸಾವಿರವಾಗುತ್ತದೆ. ಈ ಅಮೃತಮಹಲ್ ವಿಶಿಷ್ಟ ಎತ್ತುಗಳು. ಟಿಪ್ಪುಸುಲ್ತಾನ್ ಈ ಹೋರಿಗಳನ್ನು ಸಾಮಾನು ಸಾಗಿಸಲು ಬಳಸುತ್ತಿದ್ದ; ಒಂದು ಜಂಗುಳಿಯನ್ನು ಶತ್ರುಸೈನ್ಯದ ಮೇಲೆ ಬಿಟ್ಟು ದಿಕ್ಕಾಪಾಲು ಮಾಡಲು, ತುಳಿದುಹಾಕಲು ಬಿಡುತ್ತಿದ್ದ. ಒಮ್ಮೆ ಹತ್ತಿಪ್ಪತ್ತು ಮುದಿ ಅಮೃತಹೋರಿಗಳನ್ನು ಮಾರಲು ಸಂತೆಗೆ ಹೊಡೆದುಕೊಂಡು ಬಂದರು. ಆ ಮುದಿ ಹೋರಿಗಳು ಸಂತೆಯ ಜನರನ್ನು ನೋಡಿ ಬೆಚ್ಚಿ ಎಲ್ಲರ ಮೇಲೆ ನುಗ್ಗಿ ಸಂತೆಯನ್ನೇ ಚದುರಿಸಿದವು.



ಏಪ್ರಿಲ್ 17, 1988

ಶಿಳ್ಳೆ ಹಾಕಿದರು. ಟ್ರ್ಯಾಕ್ಟರುಗಳಿಗೆ ಹೋರಿಗಳನ್ನು ಹೂಡಿದ್ದರು. ಒಂದೇ ಜೊತೆ. ಆದರೆ ಅವು ಹೋಳೆ ಹರಿದಂತೆ ಸರಾಗವಾಗಿ ಎರಡೂ ಟ್ರ್ಯಾಕ್ಟರ್, ಸರಕನ್ನು ಎಳೆಯತೊಡಗಿದವು. ಎಂಥ ದೈತ್ಯ ಬಲ. ವೇಗವಾಗಿ ಎಳೆಯುತ್ತಿವೆ. ಎರಡೂ ಟ್ರ್ಯಾಕ್ಟರ್ ಸಾಗುತ್ತಿವೆ. ಅಚ್ಚರಿಗೊಂಡು ನಿಂತೆ.

ಆ ಎತ್ತುಗಳ ಶಕ್ತಿ ಬೆಚ್ಚಿಬೀಳಿಸುವಂತಿತ್ತು. ಆನೆಗಳ ಬಲದ ಬಗ್ಗೆ ಹೇಳುತ್ತಾರೆ. ಆದರೆ ಅವು ಎತ್ತರಕ್ಕೆ ಪುಟ್ಟ ಪರ್ವತದಂತೆ ಇರುತ್ತವೆ. ಅವು ತಿನ್ನುವುದೂ ಅಷ್ಟೇ. ಆದರೆ ಈ ಹೋರಿಗಳು ತಮ್ಮ ದೇಹದಲ್ಲಿ ಯಂತ್ರಗಳ ಶಕ್ತಿಯನ್ನೇ ಇಟ್ಟುಕೊಂಡಂತಿತ್ತು. ಸುಮಾರು ನಾನೂರು ವರ್ಷಗಳ ಚರಿತ್ರೆಯುಳ್ಳ, ಈ ದುರ್ಬಲ ರಾಜಕೀಯ, ಜನತೆಯ ನಡುವೆ ಬದುಕುತ್ತಾ ಭೀಕರ ಚೈತನ್ಯವನ್ನುಳ್ಳ ಹೋರಿಗಳು.

ನಾವು ದುರ್ಬಲರಲ್ಲ.

ಮನಸ್ಸು ಮಾಡಿದರೆ ಇಂಥ ಹೋರಿಗಳನ್ನು ರೂಪಿಸಿ ನೂರಾರು ವರ್ಷ ಅವುಗಳ ತಳಿಯನ್ನು ಬೆಳೆಸಿ ಗಟ್ಟಿಗೊಳಿಸಿರುವ ನಮ್ಮ ಜನ ದುರ್ಬಲರಿರಲಾರರು.

✱

ಪತ್ರಿಕೋದ್ಯಮದಲ್ಲಿ ಸಂಪೂರ್ಣವಾಗಿ 'ಸ್ಟೈ' ಎಂದೆನಿಸಿಕೊಳ್ಳಬೇಕಾದರೆ ಏನು ಮಾಡಬೇಕು?

ವಾದಿರಾಜ್, ಬೆಂಗಳೂರು
ಪರಮಾತ್ಮ ನಾಲ್ಕು ಜಾತಿ ಮಾಡಿದರೆ ರಾಜಕಾರಣಿಗಳು ನಾಲ್ಕು ಸಾವಿರ ಜಾತಿ ಮಾಡಿದ್ದೇಕೆ?
* ಬ್ರಾಹ್ಮಣಶಾಹಿಗಳು ಮಾಡಿದ ನಾಲ್ಕು ಜಾತಿಗಳ ಅನಾಹುತವನ್ನು ರಾಜಕಾರಣಿಗಳು ಸರಿಪಡಿಸಲು ಪ್ರಯತ್ನಿಸುತ್ತಿದ್ದಾರೆ.

ಬಸವರಾಜ್ ಬೆಸ್ತರ್, ಹರಪನಹಳ್ಳಿ
'ಹಾರಾಟ', 'ಹರಾಜು' ಒಂದೇನಾ?
* ಬೇರೆಯವರನ್ನು ಮುಳುಗಿಸಲು ಹೋಗಿ ತಾನೇ ...ಕರಿಗೆ ನಿಂತವರನ್ನು 'ಹರಾಜು' ಅಂತಾರೆ, ...ಲ್ಲೊತ್ತಾ?

...ದಿನೋಟಿ ಕೃಷ್ಣಮೂರ್ತಿ, ಬೆಂಗಳೂರು
...ಗ ಮುಖ್ಯಮಂತ್ರಿಯಾಗಿ ಗೌಡರ ಆಸೆ ...ಡೇರಿದರೂ ಅವರ ಮುಖದಲ್ಲಿ ನೆಮ್ಮದಿಯ ...ರಳು ಕಾಣುತ್ತಿಲ್ಲವಲ್ಲ!
* ರೇವಣ್ಣ, ಬಾಲಕೃಷ್ಣೇಗೌಡರ ಸರದಿ ಬರೋವರೆಗೂ ನೆಮ್ಮದಿ ಎಲ್ಲಿಂದ ಬಂದೀತು?

...ಎಸ್. ಶ್ರೀವತ್ಸ, ಬೆಂಗಳೂರು
...ರಾಗದ ಮಲ್ಲಪ್ಪ, ಕೋಣಂದೂರು ಲಿಂಗಪ್ಪ, ...ರೆಕೊಪ್ಪ ಬಂಗಾರಪ್ಪ, ಕಾಗೋಡು ತಿಮ್ಮಪ್ಪ ...ಬಂತಾದವರೆಲ್ಲಾ ಈಗ ಏನು ಮಾಡುತ್ತಿದ್ದಾರೆ....?
* ಅವರಪ್ಪನಾಣೆ ಯಾವನಿಗೂ ಗೊತ್ತಿಲ್ಲ!

ಮಂಚಾಲಿ ಗುರುರಾಜಚಾರು, ಬಳ್ಳಾರಿ
ಕುಡಿದವ ಸತ್ಯ ಹೇಳುತ್ತಾನೆ ಅಂತಾರೆ, ಮತ್ತೆ ಕೋರ್ಟಿನಲ್ಲಿ ಸಾಕ್ಷಿ ಹೇಳುವವನಿಗೆ ಕುಡಿಸಿದರೆ?
* ಕೋರ್ಟಿನಲ್ಲಿ ಸತ್ಯ ಗೆಲ್ಲುತ್ತೆ ಅಂತ ಯಾಕೆ ನಂಬಿದ್ದೀರಾ?

ಕೆ. ಶ್ರೀನಿವಾಸ್, ಮಂಡ್ಯ
ಪತ್ರಕರ್ತರುಗಳೆಲ್ಲಾ ಸೇರಿ ಪಕ್ಷ ಕಟ್ಟಿದರೆ?
* ಶುರುವಾದ ಹನ್ನೊಂದನೇ ದಿನಕ್ಕೆ 'ಪಕ್ಷ' (ತಿಥಿ) ಗ್ಯಾರಂಟಿ!



ಸ. ಮ್ಯಾಥ್ಯೂಸ್, ಶಿವಮೊಗ್ಗ
ಸಿ.ಟಿ. ರವಿ, ಸುನೀಲ್ ಕುಮಾರ್ ಹೋದ ಜನ್ಮದಲ್ಲಿ ನಕ್ಸಲೈಟ್ ಆಗಿದ್ದರಾ?
* ಮನು ಧರ್ಮದ ಪ್ರಕಾರ ಅವರಿಬ್ಬರು ಬ್ರಾಹ್ಮಣರಾಗಿ ಜನಿಸಲು ಹತ್ತು ಜನ್ಮ ಪಡೀಬೇಕು, ಆದರೆ ಮಾವೋವಾದಿಗಳ ಪ್ರಕಾರ ಅವರಿಬ್ಬರು ನಕ್ಸಲೈಟ್‌ಗಳಾಗಲು ನೂರು ಜನ್ಮ ಪಡೀಬೇಕಂತೆ!

ಇಂದಿರಾ ಶ್ರೀಧರ್, ದಾವಣಗೆರೆ
ದೇವೇಗೌಡ್ರು ಮುಂದಿನ 20 ತಿಂಗಳಲ್ಲಿ ತಾನೊಬ್ಬ ಅಪ್ಪಟ ಜಾತ್ಯತೀತನೆಂದು ಖಚಿತಪಡಿಸುತ್ತಾರಂತಲ್ಲ?
* ಮಗನಂತೆ ತಾನೂ ಚಿಟ್ಟಿ ಧರಿಸಿರುವುದು ಈಗ ಜಗತ್ತಿಗೇ ಗೊತ್ತಾಗಿರೋದ್ರಿಂದ.

ಕವಿತಾ ಮಧುಸೂದನ್, ದಾವಣಗೆರೆ
ಯಡ್ಡಿಯ ನಸೀಬದಲ್ಲಿ ಸಿ.ಎಂ. ಪಟ್ಟ ಬರೆದಿದೆಯಾ?
* ಹಿಂದೂಗಳ ಜಾತಕದಲ್ಲೇ ಇಲ್ವಂತೆ, ಇನ್ನು ಮುಸಲ್ಮಾನರ ನಸೀಬು ಎಲ್ಲಿಂದ ಬಂದೀತು?

ಟಿ.ಎಸ್. ಸ್ವಾಮಿ, ಹೊಸಪೇಟೆ
ಬಂಗಾರಪ್ಪನಿಗೆ ಡೊಳ್ಳು ಬಾರಿಸುವುದು ಇಷ್ಟ... ಕುಮಾರಸ್ವಾಮಿಗೆ....?
* ಟೊಳ್ಳು ಮಾತನಾಡೋದು....?

ಕುಮಾರಸ್ವಾಮಿ, ಬಿಳಿದಾಳೆ
ವಿಷ್ಣುವರ್ಧನ್‌ಗೆ ಹುಷಾರ್ ಇಲ್ಲವಂತೆ?
* ಉಡುಪಿಯ ಬನ್ನಂಜೆ ಗೋವಿಂದಾಚಾರ್ಯ ನೀಡಿರುವ ಫಿಲಾಸಫಿ ಎಂಬ ಜಾಪಾಳ ಮಾತ್ರೆಯ ಪ್ರಭಾವ!

ಪುಷ್ಪ, ಬೆಂಗಳೂರು
ಚಂಪಾ ಕಸಾಪ ಪುನರ್‌ರಚನೆ ಮಾಡುತ್ತಾರಂತೆ?
* ಕೆಲಸವಿಲ್ಲದ ಕುಂಬಾರನ ಬಗ್ಗೆ ಕೇಳಿದ್ದೀರಿ ತಾನೇ?

ಅನಂತಕುಮಾರ್, ಬಸವನಗುಡಿ
ಚಿಡ್ಡಿಗಳು ರಾಹುಲ್ ಮಹಾಜನನ ಕೈಬಿಟ್ಟದ್ದೇಕೆ?
* ಆತ ಸಲಿಂಗಕಾಮಿ ಅಲ್ಲ, ಅದಕ್ಕೆ!

ಹಾಲೇಹುಂಡಿ ಶಿವಕುಮಾರ್, ಮೈಸೂರು
ಪತ್ರಿಕೋದ್ಯಮದಲ್ಲಿ ಸಂಪೂರ್ಣವಾಗಿ 'ಸ್ಟೈ' ಎಂದೆನಿಸಿಕೊಳ್ಳಬೇಕಾದರೆ ಏನು ಮಾಡಬೇಕು?
* ರಂಜನೆ, ಬೋಧನೆ, ಪ್ರಚೋದನೆ ನೀಡುವವರಾಗಿರಬೇಕು.

ಬಹುಮಾನಿತ ಪ್ರಶ್ನೆ

ಥೀ ತುಂಟಿ!

"ಇಟಲಿ ಪ್ರವಾಸ ಮಾಡುತ್ತಿದ್ದ ಅಮೆರಿಕನ್ ಮೋಹಿನಿ ಮತ್ತು ಆಕೆಯ ಗಂಡ ರೋಮ್ ನಗರಕ್ಕೆ ಬಂದರು. ಆಕೆ ಬೆಚ್ಚನೆಯ ಹೆಂಗಸಾಗಿದ್ದಷ್ಟೇ ಆತ ಪೆದ್ದು ಭಾವುಕ.

ರೋಮ್‌ನ ಹೋಟೆಲ್‌ನಲ್ಲಿ ಕೂತು ಆತ ಹೇಳಿದ, "ಒಂದಾನೊಂದು ಕಾಲದಲ್ಲಿ ರೋಮ್ ಉರಿಯುತ್ತಿದ್ದರೆ ಆಗ ನೀರೋ ಪೀಟಲು ಬಾರಿಸುತ್ತಿದ್ದ!"

ಆಕೆ, "ಈಗಿನ ಕಾಲದಲ್ಲಿ ಹೆಂಡತಿ ಉರಿಯುತ್ತಿದ್ದರೆ ಗಂಡ ಪಿಟೀಲು ಬಾರಿಸುತ್ತಾನೆ!" ಅಂದಳು ವ್ಯಂಗ್ಯವಾಗಿ



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಈ ವಾರದ ಪ್ರಶ್ನೆ:

ಫುಟ್‌ಬಾಲ್ ಆಟಗಾರ ರೊನಾಲ್ಡೊ ನಮ್ಮ ಸಚಿನ್‌ಗಿಂತಾ ಗ್ರೇಟಾ?

ಕಳೆದ ವಾರದ ನಮ್ಮ ಪ್ರಶ್ನೆ: ಮೇಲುವರ್ಗದ ಬಡವರಿಗೂ ಮೀಸಲಾತಿ ಬೇಕೆಂದು ಬಿಜೆಪಿ ಹೇಳಿದೆಯಲ್ಲ?


ನಿಮ್ಮ ಉತ್ತರ: ಬಿಜೆಪಿ ಹೇಳಿರುವುದು ರೈಲಿನಲ್ಲಿ "ಅಪ್ಪರ್ ಬರ್ತ್ ರಿಸರ್ವೇಶನ್" ಬಗ್ಗೆ ಇರಬೇಕು.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಸಿ. ಕಾಲಸ್ವಾಮಿ, ಬೆಂಗಳೂರು

ಮೊಗ್ಗನ್ನು ಗುಟ್ಟಾಗಿ ಅರಳಿಸುತ್ತದೆ ರಾತ್ರಿ; ವಂದನೆಗಳು ಸಲ್ಲುತ್ತವೆ ಹಗಲಿಗೆ -ಟ್ಯಾಗೋರ್

ಲಂಕೇಶ್

ಮಾರ್ಕೆಟ್ ದೇವಿಯ ಶಿಷ್ಯ ಪೂಣೆಗೆ ಮುಹೂರ್ತ ಮಿಸ್!




ನಿಕಾಲಿಗೆ ಬಂದವನು ಕಪಾಲಿ

ಬಹುಶಃ ಇದು ಆತನ ಕೊನೆಯ ಯತ್ನವಾಗಿತ್ತೇ? ಅವರಿವರಿಗೆ ಸುಪಾರಿ ಕೊಟ್ಟು ಮಾಡಿಸುವ ಬದಲು ತಾನೇ ಪೂಣೆಯ ಮೇಲೆ ಅಟ್ಯಾಕ್ ಮಾಡಿಬಿಡಲು ಇಂಥದ್ದೊಂದು ಹತಾಶೆಗೆ ಕೈಯಿಟ್ಟನೆ? ಹೀಗೆ ಗ್ರಹಚಾರ ಕೆಟ್ಟು ಮತ್ತೆ ಜೈಲು ಪಾಲಾದನೆ? ಅಷ್ಟಕ್ಕೂ ಮಾರ್ಕೆಟ್ ದೇವಿಯ ಬಂಟ ಪೂಣೆಗೂ ಮೆಜೆಸ್ಟಿಕ್ ರೌಡಿ ಕಪಾಲಿ ಆನಂದನಿಗೂ ಯಾವತ್ತಿಗೂ ತೀರದ ಜಿದ್ದೇಕೆ?

ರೌಡಿ ಕಪಾಲಿ ಆನಂದನನ್ನು ವಿಜಯನಗರದ ಇನ್ಸ್‌ಪೆಕ್ಟರ್ ದುರ್ಗಯ್ಯ ರುಬ್ಬಿ ಜೈಲಿಗಟ್ಟಿದ ಸುದ್ದಿ ಕೇಳಿದ್ದೇ ಫಿಲ್ಮ್ ಫೈನಾನ್ಸಿಯರ್ ನಂಜುಂಡಿ ಸಣ್ಣಗೆ ಬೆವೆತರಂತೆ!

Of course ಶಾಕ್ ಆಗುವಂಥದ್ದೆ! ಬಹುಶಃ ನಟ ಕಮ್ ನಿರ್ದೇಶಕ ಧ್ವಯರಾದ ಎಸ್. ನಾರಾಯಣ್ ಮತ್ತು ಥ್ರಿಲ್ಲರ್ ಮಂಜು ಸೇರಿಕೊಂಡು ಹಾಲಿನ ಚೊಂಬನ್ನು ಷೇರ್ ಮಾಡಿಕೊಂಡಿರಲೂಬಹುದು. ಹಳೇ ರೌಡಿ ಕಪಾಲಿ ಆನಂದ ತನ್ನ ಸರಂಜಾಮು ಸಮೇತ ವಿಜಯನಗರದ ಪೋಲೀಸರಿಗೆ ಸಿಕ್ಕಬಿದ್ದಿದ್ದಾನೆ. ತಂದಿದ್ದ ಮಾರುತಿ ವ್ಯಾನು, ಲಾಂಗು-ರಾಡುಗಳೆಲ್ಲ ಪೋಲೀಸರ ವಶ ವಾಗಿವೆ. ಬಂಧನದ ಭೀತಿಗೆ ಬಿದ್ದು ಆತನ ಇಡೀ ತಂಡ ಭೂಗತವಾಗಿಬಿಟ್ಟಿದೆ.


ಪೂಣೆ

ಆತನ ಪಾಲಿಗಿದು ಎಷ್ಟನೇ ಅಟೆಂಪ್ಟೊ? 'ನೋಡ್ತಾ ಇರು ಗುರೂ; ಇಷ್ಟರಲ್ಲೇ ಪೂಣೆ ತಲೆ ತೆಗಿತೀನಿ....!' ಎಂದು ಯಾವತ್ತು ಕಪಾಲಿ ಪಡೆ ಕಟ್ಟಿಕೊಂಡು ಹೊಂಟನೋ... ಅಲ್ಲಿಗೆ ಮಾರ್ಕೆಟ್ ದೇವಿಯ ನೆಚ್ಚಿನ ಬಂಟ, ಚಾಮರಾಜಪೇಟೆಯ ಹಳೇ ಪಂಟರ್ ಪೂಣೆಯ ಆಯುಸ್ಸು ಇನ್ನಷ್ಟು ಗಟ್ಟಿಕೊಂಡಿದ್ದು ಬಿಟ್ಟರೆ ಲುಕ್ಸಾನು ಅಂತ ಆಗಿದ್ದು ಕಪಾಲಿಗೇ. ಪ್ರಾರಂಭದಲ್ಲಿ ಪೂಣೆಯ ಮೇಲೆ ರೌಡಿ ರಾಮೂಚಾರಿಯನ್ನು ಛೂಬಿಟ್ಟ. ಆನಂತರ ಗೋರಿಪಾಳ್ಯದ ಛಪ್ಪರ್‌ಗಳನ್ನು ಕಳಿಸಿದ. ಕೊನೆಗೆ ಮಹಾಲಕ್ಷ್ಮಿ ಲೇಔಟ್‌ನ ಹಂತಕ ಕಾಟ್ ರವಿಗೆ ಸುಪಾರಿ ಕೊಟ್ಟ. ತಮಿಳುನಾಡಿನ ಡಕಾಯಿತರನ್ನೂ ಬಿಟ್ಟು ನೋಡಿದ. ಅದೇನೋ; ಒಬ್ಬ ಪೂಣೆಯ ತಲೆ ತಗೆಯಲು ಆತನಿಂದ ಸಾಧ್ಯವಾಗಲೇ ಇಲ್ಲ.

ಬಹುಶಃ ಇದು ಆತನ ಕೊನೆಯ ಯತ್ನವಾಗಿತ್ತೇ? ಅವರಿವರಿಗೆ ಸುಪಾರಿ ಕೊಟ್ಟು ಮಾಡಿಸುವ ಬದಲು ತಾನೇ ಪೂಣೆಯ ಮೇಲೆ ಅಟ್ಯಾಕ್ ಮಾಡಿಬಿಡಲು ಇಂಥದ್ದೊಂದು ಹತಾಶೆಗೆ ಕೈಯಿಟ್ಟನೆ? ಹೀಗೆ ಗ್ರಹಚಾರ ಕೆಟ್ಟು ಮತ್ತೆ ಜೈಲು ಪಾಲಾದನೆ? ಅಷ್ಟಕ್ಕೂ ಮಾರ್ಕೆಟ್ ದೇವಿಯ ಬಂಟ ಪೂಣೆಗೂ ಮೆಜೆಸ್ಟಿಕ್ ರೌಡಿ ಕಪಾಲಿ ಆನಂದನಿಗೂ ಯಾವತ್ತಿಗೂ ತೀರದ ಜಿದ್ದೇಕೆ?

ಕಪಾಲಿ ಗಲ್ಲಿಯಲ್ಲಿ

ಎಲ್ಲಕ್ಕೂ ಮುನ್ನ ಈ ಕಪಾಲಿ ಯಾರೆಂದು ಕೆದಕುತ್ತಾ ಹೋದರೆ ಅದೇ ಮತ್ತೊಂದು ಕತೆಯಾಗುತ್ತದೆ. ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ಕಪಾಲಿ ಆನಂದನ ಹೆಸರಿಗೆ ಅಂಥ ಖದರಿಲ್ಲ. ಶ್ರೀರಾಂಪುರ ಕಿಟ್ಟಿಯ ಗರಡಿಯಲ್ಲಿ ಕಂಡಕಂಡ ವೇಶ್ಯಾವಾಟಿಕೆ ಅಡ್ಡೆಗಳ ಮೇಲೆ ರೇಡು ಬಿದ್ದು ಕಾಸು ಕಿತ್ತುಕೊಳ್ಳುವುದರಲ್ಲೇ ಕಪಾಲಿಯ ಅರ್ಧ ಆಯುಸ್ಸು ಕಳೆದಿದೆ. ಕರೆದು ಅನ್ನ ಕೊಟ್ಟವರನ್ನೇ ಚೆನ್ನಿಗಿರಿಯುವುದು ಆತನ ಚಾಳಿ. ಮೈ ದಂಧೆಯ ಪಾಪದ ದುಡ್ಡು ಯಾವತ್ತಿದ್ದರೂ ವಿಷ ಎಂಬುದನ್ನಾತ ಶ್ರೀರಾಂಪುರ ಕಿಟ್ಟಿಯ ಸಾವನ್ನು ಕಂಡ ನಂತರವೂ ಅರ್ಥ ಮಾಡಿಕೊಳ್ಳದೇ ಹೋದ. ಆತನ ಹುಟ್ಟು ಹೆಸರು ಸಿದ್ಧಪ್ಪಾಜಿ ಆಚಾರ್. ಪ್ರಾರಂಭದಲ್ಲಿ ಕನಕಪುರದ ಬಸ್‌ಸ್ಟ್ಯಾಂಡ್ ಎದುರು ಬಾಳೆಹಣ್ಣು ಗಾಡಿ ತಳ್ಳಿಕೊಂಡಿದ್ದ.


ಅಲ್ಲಿ ಯಾರಿಗೋ ಚುಚ್ಚಿ ಬೆಂಗಳೂರಿನ ಬಸ್ ಹತ್ತಿದವನು ಮೆಜೆಸ್ಟಿಕ್‌ನ ಕಪಾಲಿ ಗಲ್ಲಿಯಲ್ಲಿದ್ದ ಕುಖ್ಯಾತ ಕಪಾಲಿ ಬಾರ್ ಸೇರಿಕೊಂಡ. ಆ ಹೊತ್ತಿಗೆ ಮೆಜೆಸ್ಟಿಕ್‌ಗೆ ರೌಡಿಯಾಗಿದ್ದವನು ಗಾಂಧಿನಗರದ ಕಾಳ. ಕಪಾಲಿ ಗಲ್ಲಿ ಹೇಳಿಕೇಳಿ ರೌಡಿಗಳ, ಕುಡುಕರ, ವೇಶ್ಯೆಯರ ಕೊಂಪೆಯಾಗಿತ್ತು, ಅದನ್ನು ಕಪಾಲಿ ಮೋಹನ ಎಂಬುದಿ ರೌಡಿಯೊಬ್ಬ ತನ್ನ ಅಡ್ಡೆಯನ್ನಾಗಿ ಮಾಡಿಕೊಂಡಿದ್ದ. ಕಪಾಲಿ ಬಾರ್‌ನಲ್ಲಿ ತಟ್ಟೆ-ಲೋಟ ತೊಳಕೊಂಡಿದ್ದ ಸಿದ್ಧಪ್ಪಾಜಿ ತನ್ನ ಹೆಸರನ್ನು ಆನಂದ ಎಂದು ಬದಲಿಸಿಕೊಂಡು ರೌಡಿ ಕಪಾಲಿ ಮೋಹನನಿಗೆ ಡ್ರಿಂಕ್ಸ್ ತಂದು ಕೊಟ್ಟು ಮಾಡಿಕೊಂಡಿದ್ದ.

ಮುಂದೆ ಸಪ್ಲೈಯರ್ ಆಗಿ ಬಡ್ತಿ ಪಡೆದ ಆನಂದ ಕಳಪೆ ಲಿಕ್ಕರ್ ಕೊಟ್ಟೇ ದಿನಕ್ಕೆ ಎರಡು ಸಾವಿರದ ತನಕ ಖಯಾಯಿಸುತ್ತಿದ್ದ. ನೋಡುವಷ್ಟು ನೋಡಿದ ಬಾರ್ ಮಾಲಿಕ ಅದೊಂದು ದಿನ ಆನಂದನಿಗೆ ನಾಲ್ಕು ಬಿಟ್ಟು ಹೊರದಬ್ಬಿದ. ಹಾಗಂಥ ಆತನ ಗಾಡ್‌ಫಾದರ್ ಮೋಹನ ಬಿಡಬೇಕಲ್ಲ. ಆತ ಗಾಂಧಿನಗರದ ರೌಡಿ ಕಾಳನನ್ನು ಬಿಟ್ಟು ಬಾರ್ ಮಾಲೀಕನನ್ನು ಹೆದರಿಸಿ ಆನಂದನನ್ನು ಮತ್ತೆ ಕಪಾಲಿ ಬಾರಿಗೇ ಸೇರಿಸಿಬಿಟ್ಟ. ಕಳಪೆ ಲಿಕ್ಕರ್ ಕೊಟ್ಟು ಗಿರಾಕಿಯನ್ನೂ, ಮಾಲೀಕನನ್ನೂ ಒಟ್ಟೊಟ್ಟಿಗೇ ಆನಂದ ದೋಚತೊಡಗಿದ. ಪಾತಕಿ ಶ್ರೀರಾಂಪುರ ಕಿಟ್ಟಿ ಮತ್ತು ಅಗ್ರಹಾರದ ರೌಡಿ ಬಚ್ಚನ್‌ನನ್ನು ಕಪಾಲಿ ಗಲ್ಲಿಗೆ ಕರೆತಂದು ಪೋಕೊಡಲಾರಂಭಿಸಿದ. ಮೆಜೆಸ್ಟಿಕ್ ಫುಟ್‌ಪಾತ್‌ನ ಆಮ್ಲೆಟ್ ಗಾಡಿ, ಇಡ್ಲಿ ಗಾಡಿ, ಬೀಡಾ ಅಂಗಡಿ ಯಾವುದನ್ನೂ ಬಿಡದೇ ರೋಲ್‌ಕಾಲ್ ಶುರು ಹಚ್ಚಿಕೊಂಡ ಆನಂದ ಕಪಾಲಿ ಗಲ್ಲಿಗೇ ಕಂಟಕನಾಗಿದ್ದ.

ಗಾಡ್‌ಫಾದರ್ ಪೂಣೆ

ತಾನೇ ಬೆಳೆಸಿದ ಕ್ರಿಮಿ ಈಪಾಟಿ ಹೆಚ್ಚಿಕೊಂಡಿದ್ದನ್ನು ಕಂಡ ಕಪಾಲಿ ಮೋಹನ ಆನಂದನನ್ನು ಕರೆದು ವಾರ್ನ್ ಮಾಡಿದ. ಅಷ್ಟೇ; ಆನಂದ ಶ್ರೀರಾಂಪುರದ ಒಂದಷ್ಟು ಪೋರ್ಕಿಗಳನ್ನು ಛೂ ಬಿಟ್ಟು ಮಲಗಿದ್ದ ಕಪಾಲಿ ಮೋಹನನನ್ನೇ ಹೊಡೆಸಿಬಿಟ್ಟ. ಮಚ್ಚಿನೇಟು ತಿಂದೂ ಮೋಹನ ಬದುಕುಳಿದ. ಆದರೆ ಆತ ಮತ್ತೆಂದೂ ಕಪಾಲಿ ಗಲ್ಲಿಗೆ ಕಾಲಿಡಲಿಲ್ಲ. ಕ್ರಮೇಣ ಗಾಂಧಿನಗರದ ಕಾಳನೂ ಸ್ಕ್ಯಾಪ್ ಆದ.

ಅಲ್ಲಿಗೆ ಇಡೀ ಮೆಜೆಸ್ಟಿಕ್ ತನ್ನದೆಂಬಂತೆ ಆನಂದ ಮೆರೆಯತೊಡಗಿದ. ಫುಟ್‌ಪಾತ್ ಗಾಡಿಗಳವರಿಗೆ ಸಿಕ್ಕಾಪಟ್ಟೆ ಗೋಳು ಕೊಡುತ್ತಿದ್ದ. ಆಗ ಎದ್ದು ನಿಂತವನು ಬೂಟ್‌ಹೌಸ್ ಕುಮಾರ್ ಶಿಷ್ಯ ವಿಶ್ವಾ! ಮತ್ತೊಬ್ಬ ರೌಡಿ ಸ್ಟೇಷನ್ ಶೇಖರನ ಸಹಚರನಾಗಿದ್ದ ವಿಶ್ವಾ ಆನಂದನನ್ನು ನಡುರಸ್ತೆಯಲ್ಲೇ ಹಿಡಿದು ಬಡಿದ. ಇನ್ನೆಲ್ಲಿ ವಿಶ್ವಾ ತನ್ನನ್ನು ಮುಗಿಸಿಬಿಡುತ್ತಾನೋ ಎಂದು ಆನಂದ ಕಪಾಲಿ ಗಲ್ಲಿಯಲ್ಲಿ ಅಡ್ಡೆ ಹಾಕುವುದನ್ನೇ ನಿಲ್ಲಿಸಿಬಿಟ್ಟ. ಇಂಥಾ ಕಷ್ಟ ಕಾಲದಲ್ಲಿ ಆತನನ್ನು ತನ್ನ ಏರಿಯಾಕ್ಕೆ ಕರೆದೊಯ್ದು ಮನೆ ಮಾಡಿಕೊಟ್ಟು ನೆರವಾದವನು ಆಜಾದ್ ನಗರದ ಪಂಟರ್ ಪೂಣೆ ಉರ್ಫ್ ನರಸಿಂಹಮೂರ್ತಿ!


ದೇವಿ

ಯಮಗಾತ್ರದ ಸೈಂದವನಂಥ ಪೂಣೆ ಆ ಹೊತ್ತಿಗೆ ಚಾಮರಾಜಪೇಟೆಯ ಶಾಸಕನಾಗಿದ್ದ ಮಾರ್ಕೆಟ್ ದೇವಿಯ ಬಂಟ. ಅಂಡರ್‌ವರ್ಲ್ಡ್‌ನ ಲಾಭ ನಷ್ಟದ ಲೆಕ್ಕ ಹಾಕಿಯೇ ಆನಂದನನ್ನು ಕರೆತಂದು ಆಶ್ರಯ ಕೊಟ್ಟಿದ್ದ. ಕಪಾಲಿ ಮೋಹನನಿಗಾದದ್ದು ಮುಂದೊಮ್ಮೆ ತನಗೂ ಆಗುತ್ತದೆ ಎಂಬುದನ್ನು ಅರಿಯದಷ್ಟು ಹುಂಬ. ಇಬ್ಬರೂ ಸೇರಿ ಅಣ್ಣಮ್ಮನ ಹೆಸರಲ್ಲಿ ಕಲೆಕ್ಷನ್ನಿಗಿಳಿದರು. ಏನಾಗಬೇಕಿತ್ತೋ ಅದೇ ಆಯಿತು. ಮಾಡಿದ ಕಲೆಕ್ಷನ್ ಪೂರ್ತಿ ನುಂಗಿ ಹಾಕಿದ ಕಪಾಲಿ ವಿರುದ್ಧ ಪೂಣೆ ಕತ್ತಿ ಮಸೆಯುತ್ತಿದ್ದ. ಅದಕ್ಕೂ ಮುನ್ನ ಪೂಣೆಯನ್ನೇ ಮುಗಿಸಿಬಿಡಲು ಕಪಾಲಿ ಸ್ಕೆಚ್ ಹಾಕಿ ಆದಕ್ಕೊಂದು ತನ್ನದೇ ಜಾತಿಯ ಮತ್ತೊಬ್ಬ ರೌ ರಾಮೂಚಾರಿಯನ್ನು ಜೊತೆ ಹಾಕಿ ಕೊಂಡ. ರಾಮೂಚಾ ಕೂಡ ಶ್ರೀರಾಂಪುರ ಕಿಟ್ಟಿಯ ಶಿಷ್ಯನೆ. ಅದು 1996 ಜುಲೈ ತಿಂಗಳು. ಇದ್ದಕ್ಕಿದ್ದಂತೆ ಪೂಣೆಯ ಮನೆಗೆ ಬಂ ರಾಮೂಚಾರಿ ಏನೋ ಯೋಗ ಕ್ಷೇಮ ವಿಚಾರಿಸುವವನ ಪಕ್ಕದ ಪಾರ್ಕಿಗೆ ಕರೆದ. ನಂಬಿದ ಪೂಣೆ ರಾಮೂಚಾ ಯನ್ನು ಹಿಂಬಾಲಿಸಿದ. ಪಾರ್ಕ್ ಹೊಕ್ಕಿದ್ದೇ ತಡ ಕಪಾ ಆಜಾದ್ ನಗರದ ರವಿ ಆಲಿಯಾಸ್ ಡ್ಯಾ ಮೊದಲಿಯಾರ್ ಕಾಂಪೌಂಡಿನ ಕೋಳಿ ಶಿವ ಹೊಟ್ಟೆಪಾಡ್ ನಾರಾಯಣ, ದೊಡ್ಡ ಕೋಳಿ ಮ ಮೆಜೆಸ್ಟಿಕ್‌ನ ಕೆಲ ರೌಡಿಗಳು ಹಿಂದಿನಿಂದ ಪೂಣೆ ಮೇಲೆ ಬಿದ್ದರು.

ಮಾರ್ಕೆಟ್ ದೇವಿಯ ಎಂಟ್ರಿ

ಆವತ್ತು ಪೂಣೆ ಹೇಗೆ ಬಡಿದಾಡಿದನೆಂದರೆ ಆತ ತಲೆ, ಕೈ, ಹೊಟ್ಟೆ, ಎದೆ ಎಲ್ಲೆಂದರಲ್ಲಿ ಮಚ್ಚಿನೇಟುಗ ಬಿದ್ದಿದ್ದವು. ಹಾಗಿದ್ದೂ ಎದುರಿಗಿದ್ದ ರಾಮೂಚಾರಿ ಕೈಯಿಂದ ಲಾಂಗ್ ಕಿತ್ತುಕೊಂಡು ಪೂಣೆ ಸೆಣೆಸಿ ವಿಕ್ಟೋರಿಯಾ ಆಸ್ಪತ್ರೆ ಸೇರಿ ಆರು ತಿಂಗಳಲ್ಲೇ ರೆಡಿಯಾ ಚಾಮರಾಜಪೇಟೆ ಪೋಲೀಸರು ಕಪಾಲಿ, ರಾಮೂಚಾ ಕೋಳಿ ಶಿವಾ, ಹೊಟ್ಟೆಪಾಡ್ ನಾರಾಯ ಮುಂತಾದವರನ್ನೆಲ್ಲ ಹಿಡಿದು ಜೈಲಿಗೆ ಹಾಕಿದ್ದರು. ಬಹು ನ್ಯಾಯಾಲಯದಲ್ಲಿ ಪೂಣೆ ಸಾಕ್ಷಿ ಹೇಳಿದ್ದರೆ ಎಲ್ಲರಿಗ ಸಜೆಯಾಗುತ್ತಿತ್ತು, ಆದರೆ ಎಮ್ಮೆಲ್ಲೆ ಮಾರ್ಕೆಟ್ ದೇವಿಯ ಕಪಾಲಿ ಆನಂದನ ಪರ ವಹಿಸಿದ್ದ. ಇದೊಂದು ಸಾ ಬಿಟ್ಟುಬಿಡು ಎಂದು ತನ್ನ ಬಂಟ ಪೂಣೆಯ ಸುಮ್ಮನಿರಿಸಿದ್ದ!

ಹಾಗೆ ತಲೆ ದಂಡ ತಪ್ಪಿಸಿಕೊ ಆನಂದ ತನ್ನನ್ನು ಕ್ಷಮಿಸಿದ ಪೂಣೆಯ ತನ್ನ ಪಾಡಿಗೆ ತಾನಿರುವಂತೆ ಬಿ ಬಹುದಿತ್ತು. ಮುಂದೆ ರಾಮೂಚಾರಿಯ ಆತನ ಶಿಷ್ಯರೇ ಕೊಂದರು. ಕೋಳಿ ಶಿ ಡ್ಯಾನಿ, ಹೊಟ್ಟೆಪಾಡ್ ನಾರಾಯ ರೌಡಿಜಮ್ಮಿನ ಹುಚ್ಚಿಗೆ ಬಿದ್ದೇ ಬಿ ಪಾಲಾದರು. ಆದರೆ ಕಪಾಲಿ ಮಾ ತನ್ನ ಪಾತಕ ಬುದ್ಧಿ ಬಿಡಲಿಲ್ಲ, ಹೇಗಾದ ಮಾಡಿ ಪೂಣೆಯನ್ನು ಮುಗಿಸಿ ತಾ ಚಾಮರಾಜಪೇಟೆಯ ರೌಡಿ ಎನ್ನಿಸಿಕೊ ವುದು ಆತನ ಲೆಕ್ಕಾಚಾರವಾಗಿತ್ತು.

ಅದೇ ಹೊತ್ತಿಗೆ ಆತನಿಗೊಬ್ಬ ಹೊ ಗಾಡ್‌ಫಾದರ್ ಸಿಕ್ಕಿದ್ದ. ಆತ ಫಿ ಫೈನಾನ್ಸಿಯರ್ ಕೆ.ಪಿ. ನಂಜುಂಡಿ. ತನ್ನದೇ ವಿಶ್ವಕ ಜನಾಂಗದ ರೌಡಿಯೊಬ್ಬನನ್ನು ಬೆಳೆಸಲು ಇನ್ನಿಲ್ಲದ ಉತ್ಸುಕನಾಗಿದ್ದ ನಂಜುಂಡಿಗೆ ತನ್ನ ಫಿಲ್ಮ್ ಫೈನಾನ್ಸಿ ದಂಧೆಗೂ ಕಪಾಲಿಯ ಅಗತ್ಯವಿತ್ತು. ನಂಜುಂಡಿಯ ಫೈನಾನ್ಸಿಯರೇ ತನ್ನ ಬೆನ್ನಿಗಿರುವಾಗ ಯಾರೇನು ಎಂದೇ ಕಪಾಲಿ ಇನ್ನಷ್ಟು ಖದರ್ರಾಗಿ ಫೀ ಮಾಡಲಾರಂಭಿಸಿದ. ಹೇಗೂ ಪೂಣೆ ಕೈಗೆ ಸಿಗುವು ಕಷ್ಟ, ಆತನ ತಮ್ಮ ಕೃಷ್ಣಮೂರ್ತಿಯನ್ನೇ ಮುಗಿಸಿಬಿಟ್ಟ

ಯಮಧೂತ ಕಾಟ್ ರವಿಗೆ ಐದು ಲಕ್ಷದ ಸುಪಾರಿ


ಕಾಟ್ ರವಿ

ಬೇರೆಲ್ಲಾ ರೌಡಿಗಳಂತೆ ಕಪಾಲಿಗೆ ತನ್ನದೇ ಬೇಸ್ ಏರಿಯಾ ಎಂದಿಲ್ಲ, ಪ್ರಾಣಕ್ಕೆ ಪ್ರಾಣ ಕೊಡಬಲ್ಲ ಖಾಯಂ ಶಿಷ್ಯರೂ ಇಲ್ಲ, ಮರ್ಡರ್ ಮಾಡಿ ಜೈಲು ಪಾಲಾದ ಪೋರ್ಕಿಗಳನ್ನು ಆಗಾಗ ಜೈಲಿಗೆ ಹೋಗಿ ಮಾತಾಡಿಸುತ್ತಾನೆ. ಬಿರಿಯಾನಿ-ಜಾಮೀನಿನ ವ್ಯವಸ್ಥೆ ಮಾಡುತ್ತಾನೆ. ಹಾಗೇ ಕಪಾಲಿಯಿಂದ ಉಪಕಾರ ಪಡೆದ ಪಾತಕಿಗಳ ನಿಷ್ಠೆ ಕೂಡ ಚಿಲ್ಲರೆ ಮೊತ್ತದ್ದೇ ಆಗಿರುತ್ತದೆ. ಕಪಾಲಿಗಿಂತಲೂ ದೊಡ್ಡ ಮೊತ್ತದ ಕವಳ ಸಿಕ್ಕಿಬಿಟ್ಟರೆ ಅವರ ನಿಷ್ಠೆ ಕೂಡ ಬದಲಾಗುತ್ತದೆ.

ಹಾಗೇ ಕಪಾಲಿಯ ಬುಟ್ಟಿಗೆ ಬಿದ್ದವನು ಕಾಟ್ ರವಿ. ಇದೇ ಜನವರಿ ಇಪ್ಪತ್ತೇಳರಂದು ಮಹಾಲಕ್ಷ್ಮಿ ಲೇಔಟ್‌ನ ಆಂಜನೇಯ ದೇವಸ್ಥಾನದ ಎದುರು ನಿಂತಿದ್ದ ಆಟೋ ಡ್ರೈವರ್ ಪೈಜಲ್‌ನನ್ನು ಕಾಟ್ ರವಿ ಗ್ಯಾಂಗ್ ಅಟ್ಟಾಡಿಸಿ ಕೊಚ್ಚಿ ಹಾಕಿತು. ಹಾಗೇ ಪೈಜಲ್‌ನನ್ನು ಮುಗಿಸಿದ ಕಾಟ್‌ರವಿ ಆನಂತರ ಹಾಸ್‌ಮ್ಯಾಟ್ ಆಸ್ಪತ್ರೆಗೆ ನುಗ್ಗಿ ವಿವೇಕ್‌ನಗರದ ರೌಡಿ ಪಳನಿಯನ್ನು ಮುಗಿಸಿದ್ದ ಗ್ಯಾಂಗ್‌ನಲ್ಲೂ ಇದ್ದ. ಹೇಳಿಕೇಳಿ ಈತ ಕೊರಂಗು ಶಿಷ್ಯ. ಮೂಲತಃ ತಮಿಳುನಾಡಿನ ವೆಲ್ಲೂರಿನವನಾದ ಈತನ ಮೇಲೆ ಹೆಬ್ಬಾಳ, ಜ್ಞಾನಭಾರತಿ, ವಯ್ಯಾಲಿಕಾವಲ್, ಹಲಸೂರು, ಬನಶಂಕರಿ, ಸುಬ್ರಹ್ಮಣ್ಯಪುರ, ಕಾಮಾಕ್ಷಿಪಾಳ್ಯ, ಬಸವೇಶ್ವರನಗರ ಮತ್ತು ಸುಬ್ರಹ್ಮಣ್ಯನಗರಗಳಲ್ಲೆಲ್ಲ ದಜನ್ನುಗಟ್ಟಲೇ ಕೇಸುಗಳಿವೆ. ಎಲ್ಲವೂ ಕೊಲೆ ಅಥವಾ ಕೊಲೆ ಯತ್ನದ ಕೇಸುಗಳೆ.


ಹತನಾದ ಪೈಜಲ್

ಬೆಂಗಳೂರಿನಲ್ಲಿ ಯಾರನ್ನಾದರೂ ಕತ್ತರಿಸಿದನೆಂದರೆ ಆರಾರು ತಿಂಗಳು ತಮಿಳುನಾಡಿನಲ್ಲಿ ತಲೆ ಮರೆಸಿಕೊಳ್ಳುತ್ತಾನೆ. ಈತನಿಗೆ ಕಪಾಲಿ ಆನಂದನ ಪರಿಚಯ ಹೇಗಾಯಿತೋ ಏನೋ ಇತ್ತೀಚೆಗೆ ಪೈಜಲ್ ಕೊಲೆ ಮತ್ತು ಹಾಸ್‌ಮ್ಯಾಟ್ ಆಸ್ಪತ್ರೆಗೆ ನುಗ್ಗಿ ಪಳನಿ ಕೊಲೆಗೆ ಸಂಬಂಧಪಟ್ಟಂತೆ ಮಹಾಲಕ್ಷ್ಮಿ ಲೇಔಟ್ ಇನ್ಸ್‌ಪೆಕ್ಟರ್ ಕೆಂಚೇಗೌಡರು ಕಾಟ್ ರವಿಯನ್ನು ಹಿಡಿದು ರಿಪೇರಿ ಮಾಡಿದಾಗ ಆತನ ಬಾಯಿಂದ ಹೊರಬಿದ್ದ ಸತ್ಯವೆಂದರೆ ಪೂಣೆಯನ್ನು ಮುಗಿಸುವಂತೆ ಕಪಾಲಿ ಆತನಿಗೆ ಐದು ಲಕ್ಷದ ಸುಪಾರಿ ಕೊಟ್ಟಿದ್ದ!



ಸ್ಟಾರ್ ಸುನೀಲ

ಅದಕ್ಕೆಂದು ಇಪ್ಪತ್ತೈದು ಸಾವಿರ ರೂಪಾಯಿ ಅಡ್ವಾನ್ಸ್ ಕೂಡ ಕೊಟ್ಟಿದ್ದ. ಬಹುಶಃ ಸಿಕ್ಕಿಬೀಳದೇ ಹೋಗಿದ್ದರೆ ಕಾಟ್ ರವಿ ಪೂಣೆಯನ್ನು ಮುಗಿಸುತ್ತಿದ್ದನೋ ಏನೋ.. ಆತನ ಹೇಳಿಕೆಯ ಮೇರೆಗೆ ಇನ್ನೇನು ಕಪಾಲಿಯನ್ನು ಬಂಧಿಸಬೇಕೆಂದಿದ್ದ ಇನ್ಸ್‌ಪೆಕ್ಟರ್ ಕೆಂಚೇಗೌಡರಿಗೆ ಕನಕಪುರದ ಪುಡಾರಿ ಮಾಜಿ ಎಮ್ಮೆಲ್ಸಿ ಮರಿಲಿಂಗೇಗೌಡ ಹೈಲೆವೆಲ್ ಪ್ರೆಜರ್ ತಂದು ತಡೆದುಬಿಟ್ಟ. ಇದಕ್ಕೂ ಮುನ್ನ ಹೊಸೂರಿನ ಮುತ್ತ ಎಂಬ ಡಕಾಯಿತನೊಬ್ಬನನ್ನು ಸಿಸಿಬಿ ಪೋಲೀಸರು ಬಂಧಿಸಿ ತಂದಾಗಲೂ ಆತ ಪೂಣೆಯನ್ನು ಮುಗಿಸುವಂತೆ ತನಗೆ ಕಪಾಲಿ ಸುಪಾರಿ ಕೊಟ್ಟಿದ್ದನ್ನು ಬಾಯಿಬಿಟ್ಟಿದ್ದ. ಕಪಾಲಿ ಇನ್ನೆಷ್ಟು ಜನಕ್ಕೆ ಸುಪಾರಿ ಕೊಟ್ಟಿದ್ದನೊ. ಕೊನೆಕೊನೆಗೆ ಇದ್ಯಾವುದೂ ಕೈಗೂಡದೆ ಕಾಟ್ ರವಿಯ ಶಿಷ್ಯ ಹನುಮಂತನಗರದ ಸ್ಟಾರ್ ಸುನೀಲ ಮತ್ತು ತನ್ನ ಹಳೇ ಶಿಷ್ಯರ ಜೊತೆ ತಾನೇ ಪೂಣೆಯನ್ನು ಮುಗಿಸಲು ಮುಂದಾಗಿ ಹೀಗೆ ಜೈಲು ಪಾಲಾದ. ಆತನ ಹತಾಶೆಗೆ ಅದು ಸಾಕ್ಷಿಯಾಗಿತ್ತು. ಕಪಾಲಿಯ ಕೈಗೆ ಎಟುಕದಷ್ಟು ಪೂಣೆ ಬೆಳೆದು ಬಿಟ್ಟಿದ್ದ.

ಆಕೆ ಬಿಸಲಕೋಲು ಇರುಳ ಕ್ಷಣ ನಾನು -ಜಾವೇದ್ ಅಖ್ತರ್

ಎಸ್. ನಾರಾಯಣ ಬೊಬ್ಬಿಟ್ಟ - ಥ್ರಿಲ್ಲರ್ ಮಂಜನ ಮನೆಕಿತ್ತ






ಕಪಾಲಿಯ ಪಾತಕ ಬುದ್ಧಿಯನ್ನು ಮಿಕ್ಕೆಲ್ಲರಿಗಿಂತಲೂ ಚೆನ್ನಾಗಿ ಬಳಸಿಕೊಂಡಿದ್ದು ಫಿಲ್ಮ್ ಪ್ರೊಡ್ಯೂಸರ್ ಕಮ್ ಆಕ್ಟರ್ ಕಮ್ ಫೈನಾನ್ಶಿಯರ್ ಕೆ.ಪಿ. ನಂಜುಂಡಿ. ಎಮ್ಮೆಲ್ಸಿಗಿರಿಯ ಮೇಲೆ ಕಣ್ಣಿಟ್ಟು ವಿಶ್ವಕರ್ಮ ಜನಾಂಗದ ಏಕೈಕ ಅಧಿನಾಯಕನಾಗಲು ಹೊರಟಿದ್ದ ನಂಜುಂಡಾಚಾರ್ ಸಾಹೇಬರಿಗೆ ಕಪಾಲಿಯಂಥ ಪಾತಕಿಯ ಸಖ್ಯ ಜನಾಂಗದ ಹಿತಾಸಕ್ತಿಗಿಂತಲೂ ತಮ್ಮ ಬಾಕಿ ವಸೂಲಿಗೆ ಅನಿವಾರ್ಯವಾಗಿತ್ತು.

ಆ ಹೊತ್ತಿಗೆ ಎಸ್. ನಾರಾಯಣ್ ತನ್ನ ಅಂಜಲಿ ಗೀತಾಂಜಲಿ ಚಿತ್ರಕ್ಕೆಂದು ಐವತ್ತು ಲಕ್ಷ ಫೈನಾನ್ಸ್ ಹಾಕಿಸಿಕೊಂಡು ಕೈ ಎತ್ತಿದ್ದ. ಜೊತೆಗೇ ಥ್ರಿಲ್ಲರ್ ಮಂಜು ಸರಿಸುಮಾರು ಎಂಭತ್ತು ಲಕ್ಷಕ್ಕೆ ನಾಮ ಹಾಕಿದ್ದ. ಆತನ ಥ್ರಿಲ್ಲರ್ ಕಿಲ್ಲರ್ ಎಂಬ ಡಬ್ಬಾ ಸಿನಿಮಾ ನಂಜುಂಡಿಯ ದುಡ್ಡು ನುಂಗಿತ್ತು. ವಸೂಲಿಗೆಂದು ನಂಜುಂಡಿ ಕಳಿಸಿದ್ದು ಪಾತಕಿ ಕಪಾಲಿಯನ್ನು!

ಅದು ಎಂಥಾ ರಾದ್ಧಾಂತಕ್ಕೀಡಾಯಿತೆಂದರೆ; ಆವತ್ತು ಬೆಳ್ಳಂಬೆಳಿಗ್ಗೆಯೇ ಎಸ್. ನಾರಾಯಣ್ ಮನೆಗೆ ನುಗ್ಗಿದ ಕಪಾಲಿ '....ಕಾ ಮುಚ್ಕೊಂಡು ದುಡ್ಡು ಮಡಗಲೇ' ಎಂದಿದ್ದ. ನಾರಾಯಣ್ ಪತ್ನಿ ಭಾಗ್ಯವತಿ ಎದೆಬಡಕೊಂಡರೂ ಬಿಡಲಿಲ್ಲ. ಕೊನೆಗೂ ನಾರಾಯಣ್ ನೆರವಿಗೆ ಬಂದದ್ದು ಬಸವೇಶ್ವರ ನಗರದ ಇನ್ಸ್‌ಪೆಕ್ಟರ್ ಶಿವಲಿಂಗೇಗೌಡ. ನಾರಾಯಣ ಕಿಲಾಡಿ ನಂಜುಂಡಿಯನ್ನೂ ಸೇರಿಸಿ ದೂರು ಕೊಟ್ಟ.

ಹಾಗಂಥ ಕಪಾಲಿ ಥ್ರಿಲ್ಲರ್ ಮಂಜುವನ್ನು ಬಿಡಲಿಲ್ಲ. ದಿನಪೂರ್ತಿ ಟಾರ್ಚರ್ ಕೊಟ್ಟು ಆತನ ಇಡೀ ಮನೆಯನ್ನೇ ಬರೆಸಿಕೊಂಡು ನಂಜುಂಡಿಯ ಮುಂದಿಕ್ಕಿದ್ದ. ಭೀತಿಗೆ ಬಿದ್ದ ಥ್ರಿಲ್ಲರ್ ಮಂಜು ಪೋಲೀಸರಿಗೆ ದೂರು ಕೊಡಲಿಲ್ಲ. ಇದಿಷ್ಟೇ ಅಲ್ಲದೇ ಕಪಾಲಿ ಚಾಮರಾಜ ಪೇಟೆಯ ಮರಾಠಿ ಹೆಂಗಸೊಬ್ಬಳ ಜಾಕಿಟ್ ಹರಿದಿದ್ದ. ಡಬ್ಬಲ್‌ರೋಡ್‌ನಲ್ಲಿ ಬಿಟಿಎಸ್ ಬಸ್ ತಡೆದು ರಾಬರಿ ನಡೆಸಿದ್ದ. ಉಪ್ಪಾರ ಪೇಟೆ ಇನ್ಸ್‌ಪೆಕ್ಟರ್ ಕೃಷ್ಣಕುಮಾರ್ ಆತನನ್ನು ಏರೋಪ್ಲೇನೆತ್ತಿ ಜೈಲಿ ಗಟ್ಟಿದ್ದರು. ಕಪಾಲಿಗೆ ಅದು ಯಾವ ಲೆಕ್ಕ?



ಕಪಾಲಿಯ ಕರುಳು ಬಗೆದರು

ಹಾಗೇ ಲೆಕ್ಕ ಹಾಕಿದ ಕಪಾಲಿ ಪಾದರಾಯನಪುರ ಸ್ಲಮ್ಮು ಮತ್ತು ಜೆಪಿನಗರದ ಕೆಲ ಪೋರ್ಕಿಗಳನ್ನು ರೆಡಿ ಮಾಡಿ ಎರಡು ಆಟೋಗಳಲ್ಲಿ ಆಜಾದ್ ನಗರಕ್ಕೆ ಕಳಿಸಿಕೊಟ್ಟ. ಅದು 2002 ರ ಸೆಪ್ಟೆಂಬರ್ ತಿಂಗಳು. ಆ ರಾತ್ರಿ ಮೈಸೂರು ರಸ್ತೆಯ ರಂಗನಾಥ ಲಾಡ್ಜ್ ಪಕ್ಕದ 'ಮೈಸೂರ್ ರೋಡ್' ಎಂಬ ಹೆಸರಿನ ಬಾರ್‌ನಲ್ಲಿ ಪೂಣೆಯ ತಮ್ಮ ಕೃಷ್ಣಮೂರ್ತಿ ಕುಡಿಯುತ್ತ ಕೂತಿದ್ದವನು ಎದ್ದು ಆಜಾದ್ ನಗರಕ್ಕೆ ನಡೆದು ಬರುತ್ತಿದ್ದ. ಇದಕ್ಕಿದ್ದಂತೆ ಅಟ್ಯಾಕ್ ಮಾಡಿದ ಪೋರ್ಕಿಗಳು ಕೃಷ್ಣಮೂರ್ತಿಯನ್ನು ಎಲ್ಲೆಂದರಲ್ಲಿ ಕತ್ತರಿಸಿದರು. ಮಚ್ಚೇಟು ತಿಂದ ಕೃಷ್ಣಮೂರ್ತಿಯನ್ನು ನಿಮಾನ್ಸ್, ವಿಕ್ಟೋರಿಯಾ ಆಸ್ಪತ್ರೆಗಳಿಗೆ ಪೂಣೆ ಗ್ಯಾಂಗ್ ಸಾಗಿಸುತ್ತಿದ್ದರೆ, ಆವತ್ತು ಕಪಾಲಿ ತನಗೇನೂ ಗೊತ್ತೇ ಇಲ್ಲ ಎಂಬಂತೆ ಪೂಣೆಯ ಜೊತೆಗೇ ಓಡಾಡಿಕೊಂಡಿದ್ದ. ಹಾಗೆ ಪೂಣೆಯ ಜೊತೆಗಿದ್ದೇ ಆತನ ತಮ್ಮನನ್ನು ಕತ್ತರಿಸಿದ ಹುಡುಗರಿಗೆ ಮಾಹಿತಿ ಕೊಡುತ್ತಿದ್ದ. ಇದು ಗೊತ್ತಾಗಿದ್ದೇ ತಡ ಪೂಣೆ ಕಡೆಯ ಹುಡುಗರು ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲೇ ಕಪಾಲಿಯ ಹೊಟ್ಟೆ ಬಗೆದರು. ಚುಚ್ಚಿದ ಏಟಿಗೆ ಕರುಳು ಹೊರಬಿದ್ದು ತಿಂಗಳಾನುಗಟ್ಟಲೇ ಕಪಾಲಿ ಆಸ್ಪತ್ರೆಯಲ್ಲಿ ಮಲಗಿದ್ದ.

ತಮ್ಮ ಕೃಷ್ಣಮೂರ್ತಿ ರೆಡಿಯಾಗುತ್ತಿದ್ದಂತೆ ಪೂಣೆ ಆಜಾದ್‌ನಗರದಿಂದ ಕಪಾಲಿಯ ಮನೆಯನ್ನೇ ಖಾಲಿ ಮಾಡಿಸಿಬಿಟ್ಟ. ಆನಂತರ ಕಪಾಲಿ ಎಲ್ಲಿಗೆ ಹೋದ? ಎಲ್ಲಿ ಮನೆ ಮಾಡಿದ? ಎಂಬುದೇ ನಿಗೂಢ. ರೌಡಿಯೊಬ್ಬ ಹಾಗೆ ಭೂಗತನಾದನೆಂದರೆ ಸಹಜವಾಗೇ ಆತನ ಎದುರಾಳಿ ಅಲರ್ಟ್ ಆಗಿಬಿಡುತ್ತಾನೆ. ಎರಡನೇ ಬಾರಿ ಕಪಾಲಿಯ ದಾಳಿಯಿಂದ ಬಚಾವಾದ ಪೂಣೆ ಈ ಬಾರಿ ಇನ್ನಷ್ಟು ಹುಷಾರಾದ. ಸದಾ ಹತ್ತಿಪ್ಪತ್ತು ಹುಡುಗರನ್ನು ಕಟ್ಟಿಕೊಂಡೇ ಓಡಾಡುತ್ತಿದ್ದ. ದೇವಿ ಚಾಮರಾಜಪೇಟೆಗೆ ಶಾಸಕರಾದ್ದರಿಂದ ಪೂಣೆಯ ತಾಕತ್ತು ಮತ್ತು ಪಟಾಪಾಟು ಕೂಡ ವೃದ್ಧಿಸಿತ್ತು. ಮನಸ್ಸು ಮಾಡಿದ್ದರೆ ಕಪಾಲಿಯನ್ನು ಅದ್ಯಾವತ್ತೋ ಪೂಣೆ ಮುಗಿಸಿಬಿಡುತ್ತಿದ್ದ. ಆದರೆ ಮುಂದೊಮ್ಮೆ ತಾನು ಆಜಾದ್‌ನಗರದ ಕೌನ್ಸಿಲರ್ ಆಗಬೇಕೆಂದು ಪೂಣೆ ಲೆಕ್ಕ ಹಾಕಿದ್ದ. ಇದು ಕಪಾಲಿಗೆ ಅನುಕೂಲವಾಯಿತು. ಯಾರೇ ಕೇಳಿದರೂ ಯಲಹಂಕದಲ್ಲಿ ಮನೆ ಮಾಡಿದ್ದೀನಿ, ಬನಶಂಕರಿಯಲ್ಲಿದ್ದೀನಿ ಎನ್ನುತ್ತಿದ್ದ. ಸದ್ದಿಲ್ಲದೇ ಮಾಗಡಿ ರಸ್ತೆಯ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿದ್ದ ನಂಜುಂಡಿಯ ಮನೆಯಲ್ಲಿ ತಂಗಿರುತ್ತಿದ್ದ. ಬೆಂಗಳೂರಿನಲ್ಲಿ ಯಾವುದೇ ಪೋರ್ಕಿ ಗ್ಯಾಂಗ್ ಕೊಲೆ ಕೇಸಲ್ಲಿ ಜೈಲು ಪಾಲಾಯಿತೆಂದರೆ ಹೋಗಿ [illegible] ಕೊಡುತ್ತಿದ್ದ. ಪ್ರತಿನಿತ್ಯ ಜೈಲಿಗೆ ಬಿರಿಯಾನಿ ಕಳಿಸುತ್ತಿದ್ದ, ಜಾಮೀನಿನ ವ್ಯವಸ್ಥೆಯನ್ನೂ ಮಾಡುತ್ತಿದ್ದ.

ಇನ್ಸ್‌ಪೆಕ್ಟರ್ ದುರ್ಗಯ್ಯನ ರೌಂಡಪ್

ಹಾಗಂಥ ಪೂಣೆ ಕೈಕಟ್ಟಿ ಕೂರಲಿಲ್ಲ. ಕಪಾಲಿಯ ಮೇಲೊಂದು ಕಣ್ಣಿಟ್ಟೇ ಇದ್ದ. ಈ ಮಧ್ಯೆ ಒಂದೆರಡು ಕಡೆ 'ಇಷ್ಟರಲ್ಲೇ ಪೂಣೆ ತಲೆ ತೆಗಿತೀನಿ' ಎಂದು ಕಪಾಲಿ ದುಡ್ಡು ಕಿತ್ತ ಸುದ್ದಿ ಪೂಣೆಗೆ ಬಂದಿತ್ತು. ದುರಂತವೆಂದರೆ ಪೂಣೆಗೆ ಹಿಂದಿನಂತೆ ಪೋಲೀಸ್ ಬಲವಿರಲಿಲ್ಲ. ಆತನ ಧಣಿ ಮಾರ್ಕೆಟ್ ದೇವಿ ಚಾಮರಾಜಪೇಟೆ ಉಪಚುನಾವಣೆಯಲ್ಲಿ ಹೀನಾಯವಾಗಿ ಸೋತ ನಂತರ, ದೇವಿಯ ಬೆನ್ನಿಗಿದ್ದ ಬಹುಪಾಲು ರೌಡಿಗಳೆಲ್ಲ ಜೈಲು ಪಾಲಾದರು. ಸ್ವತಃ ದೇವಿಯೇ ಚಿಕ್ಕಪೇಟೆಯ ಎಸಿಪಿ ಜಯಪ್ರಕಾಶ್ ಗೌಡರ ಎದುರು ಕೈ ಕಟ್ಟಿನಿಂತು 'ನನಗೆ ರೌಡಿಗಳಿಂದ ಪ್ರಾಣಾಪಾಯವಿದೆ ದಯವಿಟ್ಟು ರಕ್ಷಣೆಗೆ ಗನ್‌ಮ್ಯಾನ್ ಕೊಡಿ' ಎಂದು ಪ್ರಾಣಭಿಕ್ಷೆ ಬೇಡುವಂತಾಗಿತ್ತು.

ಶಾಸಕ ಜಮೀರ್ ಆ ಮಟ್ಟಿಗೆ ದೇವಿಯ ಪರವಿದ್ದ ರೌಡಿಗಳನ್ನು ಮಟ್ಟ ಮಾಡಿದ್ದರು!

ಹೇಗೂ ದೇವಿಗೆ ಅಧಿಕಾರವಿಲ್ಲ. ಆತನ ಬಂಟ ಪೂಣೆಗೆ ಹಿಂದಿನಂತೆ ಪೋಲೀಸ್ ಬೆಂಬಲವಾಗಲಿ, ದುಡ್ಡು ಕಾಸಿನ ಆಮದನಿಯಾಗಲಿ ಇಲ್ಲ. ಇದೇ ಸಮಯ ಕಾದು ಮುಗಿಸಿಬಿಟ್ಟರೆ ತನ್ನ ಬಹುದಿನದ ಪ್ರಯತ್ನ ಕೊನೆಗೊಂಡಂತೆಯೇ ಎಂದು ಕಪಾಲಿ ಲೆಕ್ಕ ಹಾಕಿದ್ದಾನೆ. ಮಾರುತಿ ವ್ಯಾನ್ ಒಂದನ್ನು ರೆಡಿ ಮಾಡಿಕೊಂಡು ತನ್ನ ಬಂಟ ಮಾರ್ಕ್ ಕುಮಾರ, ಡ್ರೈವರ್ ಮೆಂಟಲ್ ನಾರಾಯಣ, ಶಿವಮೊಗ್ಗ ಸತೀಶ ಮತ್ತು ತಿಮ್ಮೇನಹಳ್ಳಿಯ ಕೆಲ ಹುಡುಗರನ್ನು ಹಾಕಿಕೊಂಡಿದ್ದೇ ವಿಜಯನಗರದ ವಾಟರ್ ಟ್ಯಾಂಕಿಗೆ ಬಂದಿದ್ದಾನೆ. ಅದು ರಾತ್ರಿ ಹತ್ತೂವರೆಯ ಹೊತ್ತು. ಅಲ್ಲಿ ಕಪಾಲಿಯ ಮತ್ತೊಬ್ಬ ಶಿಷ್ಯ ಇಡ್ಲಿ ಗಾಡಿ ಮಂಜ ಇಡ್ಲಿ ಗಾಡಿಯಿಟ್ಟಿದ್ದ. ಆತನನ್ನೂ ಕರಕೊಂಡು ದಾಳಿಗೆ ಹೊರಡುವ ಪ್ಲಾನ್ ಇತ್ತೇನೊ. ಆದರೆ ಪೂಣೆಯ ಆಯುಸ್ಸು ಗಟ್ಟಿಯಿತ್ತು.

ಮಾರುತಿ ವ್ಯಾನಿನಲ್ಲಿ ಹಂತಕರ ಗುಂಪೊಂದು ಹೊಂಚಿ ಕೂತಿದೆ ಎಂಬ ಮಾಹಿತಿಯನ್ನು ಯಾರೋ ವಿಜಯನಗರದ ಇನ್ಸ್‌ಪೆಕ್ಟರ್ ದುರ್ಗಯ್ಯನವರಿಗೆ ಮುಟ್ಟಿಸಿದ್ದಾರೆ. ಕ್ಷಣಾರ್ಧದಲ್ಲೇ ಹೊಯ್ಸಳ ಮತ್ತೊಂದು ಜೀಪು ಕಪಾಲಿಯಿದ್ದ ವ್ಯಾನನ್ನು ಸುತ್ತುವರಿದಿದೆ. ಪೋಲೀಸರನ್ನು ಕಂಡಿದ್ದೇ ಇಡೀ ಕಪಾಲಿಯ ಗ್ಯಾಂಗ್ ಚೆಲ್ಲಾಪಿಲ್ಲಿಯಾಗಿದೆ. ಸಿಕ್ಕಿಬಿದ್ದವನು ಕಪಾಲಿ ಮಾತ್ರ. ಸದ್ಯ ಇನ್ಸ್‌ಪೆಕ್ಟರ್ ದುರ್ಗಯ್ಯ ಕಪಾಲಿಯನ್ನು ಸಮಾರುಬ್ಬ ಜೈಲಿಗಟ್ಟಿದ್ದಾರೆ.

ಕೊಲ್ಲುವವನಿಗೆ ಒಂದು ದಾರಿಯಾದರೆ ಕಾಯುವವನಿಗೆ ಮತ್ತೊಂದು ದಾರಿಯಂತೆ. ಪೂಣೆಯ ಆಯುಸ್ಸು ಗಟ್ಟಿಯಿತ್ತೋ ಅಥವಾ ಕಪಾಲಿಯ ಕೊಡ ತುಂಬಿತ್ತೋ ಬಲ್ಲವರ್ಯಾರು?

-ವರದಿಗಾರ

ಬಿಟ್ bit ಹಿಟ್!

ಸುಷ್ಮಕ್ಕನ 'ಪ್ರಮೋಟ್' ಮಹಾಜನ್!



ಬಿಸಿರಕ್ತದ, ಹಸಿಬುದ್ಧಿಯ ರಾಹುಲ್ ಮಹಾಜನ್ ಡ್ರಗ್ಸ್ ಪ್ರಕರಣ ಬಿಜೆಪಿಗಳ ಹೊಟ್ಟೆಯಲ್ಲಿ ತಳಮಳ ಉಂಟು ಮಾಡುತ್ತಿದೆಯಲ್ಲವೆ?

ಪುಣ್ಯಾತ್ಮ ವೃದ್ಧ ಭೀಷ್ಮ, ಬ್ರಹ್ಮಚಾರಿ etc etc ಮಿ. ವಾಜಪೇಯಿಯವರು "ಡ್ರಗ್ಸ್, ಡ್ರಿಂಕ್ಸ್ ಇವೆಲ್ಲ ಆ ವಯಸ್ಸಲ್ಲಿ ಸಹಜ" ಎಂಬ ಅಣಿಮುತ್ತು ಉದುರಿಸಿ ಚೆಡ್ಡಿ ನಾಯಕರ ಪುತ್ರರತ್ನರ ಕುರಿತ ಅಸಲಿ ಸತ್ಯವನ್ನು ಬಯಲು ಮಾಡಿಬಿಟ್ಟಿದ್ದಾರೆ.

ಇತ್ತ ಕಡೆ ರಾಹುಲ್‌ಗಾಂಧಿ ವಿರುದ್ಧ ರಾಹುಲ್ ಮಹಾಜನ್‌ನನ್ನು 'ಪ್ರಮೋಟ್' ಮಾಡಲು ಹೊರಟಿದ್ದ ಬಿಜೆಪಿ ನಾಯಕರುಗಳೀಗ 'ಡ್ಯಾಮೇಜ್ ಕಂಟ್ರೋಲ್' ಕಾರ್ಯದಲ್ಲಿ ಮಗ್ನರಾಗಿ ಹಾಸ್ಯಾಸ್ಪದರಾಗುತ್ತಿದ್ದಾರೆ.

ವರ್ಷಕ್ಕೊಮ್ಮೆ ವರಮಹಾಲಕ್ಷ್ಮಿ ಪೂಜೆಗೆಂದು ಬಳ್ಳಾರಿಗೆ ದಾಳಿ ಇಡುವ ಸುಷ್ಮಾ ಸ್ವರಾಜ್ "ರಾಹುಲ್ ಮಹಾಜನ್ ಪ್ರಕರಣಕ್ಕೂ ಪಕ್ಷಕ್ಕೂ ಸಂಬಂಧ ಇಲ್ಲ, ಅದು ಆತನ ಫ್ಯಾಮಿಲಿ ಪ್ರಾಬ್ಲಂ" ಎಂದು ಪೊರಕೆ ಹಿಡಿದು ತಿಪ್ಪೆ ಸಾರಿಸಲು ಯತ್ನಿಸಿದ್ದಾರೆ. ಅರೆ ಸುಷ್ಮಕ್ಕ, ಇದೇ ರಾಹುಲ್‌ನನ್ನು ಬಿಜೆಪಿಯ ಯುವ ನಾಯಕನನ್ನಾಗಿ ಮಾಡಲು ಯೋಚಿಸಿದ್ದು ಬಿಜೆಪಿಯೇ ಅಲ್ಲವೆ? ಸಿಕ್ಕಾಪಟ್ಟೆ ಡ್ರಗ್ಸ್‌ನಿಂದಾಗಿ ನೆಗೆದು ಬಿದ್ದ ಮಹಾಜನ್ ಸೆಕ್ರೆಟರಿ ಬಿಬೇಕ್ ಮೊಯಿತ್ರಾ 15-20 ವರ್ಷಗಳಿಂದ ಬಿಜೆಪಿಯ ಸಕ್ರಿಯ ಸದಸ್ಯನಾಗಿದ್ದನಲ್ಲವೆ ಅಕ್ಕಯ್ಯ?

ಚಿಟಿಕೆ ಹೆರಾಯಿನ್, ಕೊಕೇನ್‌ಗಳಿಗೆ ಹೋದ ಮಾನ ಕಾಸಿನಗಲ ಕುಂಕುಮ ಹಚ್ಚಿಕೊಂಡರೂ ಮರಳಿ ಬಾರದು ಸುಷ್ಮಾಜಿಯವರೇ....

ಗೂಟದ ಕಾರು ಸಿದ್ಧಲಿಂಗಯ್ಯ ತೇರು!




ಬೆಂಗಳೂರು ವಿ.ವಿ.ಯ ಉಪಕುಲಪತಿ ಹುದ್ದೆ ತಪ್ಪಿ ಹೋಗಿ ತೀವ್ರ ನೊಂದು ಹೋಗಿದ್ದ ದಲಿತ ಕವಿ ಸಿದ್ಧಲಿಂಗಯ್ಯನವರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರಥದಲ್ಲಿ ಕೂಡ್ರಿಸಿ ಸಮಾಧಾನ ಮಾಡಲಾಗಿದೆ.

ಹಿಂದೆ ಎರಡೆರಡು ಸಾರಿ ಎಂಎಲ್‌ಸಿಯಾಗಿ ಸಿದ್ಧಲಿಂಗಯ್ಯನವರು ಮಾಡಿರುವ 'ಸಾಧನೆ'ಗಳು ಎಲ್ಲರಿಗೂ ಗೊತ್ತೇ ಇವೆ. ಹೆಗಡೆಯ ಆರಾಧನೆ ಮೂಲಕ 'ರಾಜಾಶ್ರಯ' ಪ್ರಾಪ್ತಿ ಮಾಡಿಕೊಂಡಿದ್ದ ಸಿದ್ಧಲಿಂಗಯ್ಯನವರ 'ಮೆರಿಟ್'ಗೆ ಈ ಸಾರಿಯೂ ಮೀಸಲಾತಿ ಸಿಕ್ಕು ಗೂಟದ ಕಾರು ಏರಿದ್ದಾರೆ. ಇದಿನಬ್ಬ ಹೀಗೆ ಬಂದು ಹಾಗೆ ಹೋದರು... ಸಿದ್ಧಲಿಂಗಯ್ಯನವರಿಂದ ಆಗಬೇಕಾದ ಕೆಲಸಗಳು ಸಾಕಷ್ಟಿವೆ. ಆದರೆ ಅವರ ಜಡತ್ವ, ಸೋಮಾರಿತನ ಬಲ್ಲವರ ಪ್ರಕಾರ ಸಿದ್ಧಲಿಂಗಯ್ಯ ಪ್ರಾಧಿಕಾರದ ತೇರಲ್ಲಿ ಉತ್ಸವ ಮೂರ್ತಿಯಾಗಿ ರಥೋತ್ಸವ ಮಾಡಬಲ್ಲರಷ್ಟೇ.

ಹಿಂದೆ ಬರಗೂರರು ಕ.ಅ.ಪ್ರಾ.ದ ಅಧ್ಯಕ್ಷರಾಗಿ ಕಾಂಟೆಸ್ಸಾದಲ್ಲಿ ಕಾವ್ಯಗಳನ್ನು ರಚಿಸುತ್ತಾ ಕಾಲ ಕಳೆದು ಹೆಸರು ಕೆಡಿಸಿಕೊಂಡಿದ್ದು ಸಿದ್ಧಲಿಂಗಯ್ಯರ ನೆನಪಲ್ಲಿರಲಿ.

2004 ರ ಮೆರಿಟ್ಟು 2006 ಕ್ಕೆ ಪೇಮೆಂಟು!



ಉನ್ನತ ಶಿಕ್ಷಣ ಖಾತೆ ಡಿ.ಎಚ್. ಶಂಕರಮೂರ್ತಿಯಂತಹ ಕಾಮೆಡ್ ಮಿತ್ರನಿಗೆ, ವೈದ್ಯಕೀಯ ಶಿಕ್ಷಣ ಖಾತೆ ವಿ.ಎಸ್. ಆಚಾರ್ಯ ಎಂಬ 'ಸಂಘ' ಜೀವಿಗೆ ಸಿಕ್ಕರೆ ಇನ್ನೇನಾಗುತ್ತೆ? ಇಡೀ ಸಿಇಟಿ ವ್ಯವಸ್ಥೆ ಎಕ್ಕಾ ಎದ್ದು ಹೋಗುತ್ತದೆ. ಏಕಾಏಕಿ ಕಾಮೆಡ್ ಪರ ಸಿಇಟಿ ಬಿಲ್ ಜಾರಿಗೆ ತಂದ ಶಂಕರಮೂರ್ತಿ ಎಂಬ ವಿಜನ್ ಇಲ್ಲದ ಮಂತ್ರಿ ಇಡೀ ವಿದ್ಯಾರ್ಥಿ ಕುಲಕ್ಕೆ ಕಂಟಕರಾಗಿದ್ದಾರೆ. ಕೊನೆ ಕೊನೆಗೆ ಚೆಡ್ಡಿ ಸಂಘಟನೆ ಎಬಿವಿಪಿಯೇ 'ಡಿ.ಎಚ್.ಎಸ್. ಅಪ್ರಬುದ್ಧ' ಎಂದು ಚೀರಿಬಿಟ್ಟಿದೆ.

ಇಂತಹ ಮಂತ್ರಿಗಳಿರುವಾಗ ಕಾಮೆಡ್-ಕೆ ಕೂಟ ಹಗಲು ದರೋಡೆ ಮಾಡದೇ ಇರುತ್ತದಾ? 2004-05 ರ ಸಾಲಿನಲ್ಲಿ ಮೆರಿಟ್ ಕೋಟಾದಡಿ ಮೆಡಿಕಲ್ ಸೀಟ್ ಪಡೆದಿದ್ದ ನೂರಾರು ವಿದ್ಯಾರ್ಥಿಗಳೀಗ ಬಲವಂತವಾಗಿ ಪೇಮೆಂಟು ಸೀಟುಗಳಾಗಬೇಕಾದ ಅನಿವಾರ್ಯತೆ ಬಂದು ಬಿಟ್ಟಿದೆ.

2004-05 ನೇ ಸಾಲಿನಲ್ಲಿ ಪ್ರವೇಶ ಪಡೆದಿದ್ದ ಮೆಡಿಕಲ್ ವಿದ್ಯಾರ್ಥಿಗಳೀಗ ಬೆಚ್ಚಿ ಬೀಳುವಂತಹ ಫೀಸು ಕಟ್ಟಬೇಕಾಗಿದೆ.


ಮೊದಲನೆ ವರ್ಷ 45 ಸಾವಿರ, 2 ನೇ ವರ್ಷ 39 ಸಾವಿರ ಫೀಜು ಕಟ್ಟಿದ್ದ ಈ ವಿದ್ಯಾರ್ಥಿಗಳು ಈಗ ಏಕಾಏಕಿ 2 ಲಕ್ಷ 50 ಸಾವಿರ ಫೀಜು ಕಟ್ಟಬೇಕಂತೆ!

ಗೋಳಾಡುತ್ತಿರುವ ವಿದ್ಯಾರ್ಥಿಗಳಿಗೆ ಉತ್ತರಿಸಲಾಗದೇ ಪಲಾಯನ ಮಾಡುತ್ತಿದ್ದಾರೆ ಮಂತ್ರಿವರ್ಯರು!

2004 ರಲ್ಲಿ ಮೆರಿಟ್ಟು, 2006 ಕ್ಕೆ ಪೇಮೆಂಟು!

ಗೊತ್ತು ಗುರಿಯಿಲ್ಲದ ಈ ಸರ್ಕಾರಕ್ಕೆ ನಾಚಿಕೆ ಇದ್ದರೆ ತಾನೆ...?

ಮೆರಿಟ್ ಮೂರ್ತಿ-ಕಟ್ ಆಫ್ ಮೂರ್ತಿ!



ಪ್ರಜ್ಞಾಪೂರ್ವಕವಾಗಿ ಮೀಸಲಾತಿಯನ್ನು ಹತ್ತಿಕ್ಕುವ ಮೂಲಕ ಸಂವಿಧಾನಕ್ಕೆ ದ್ರೋಹ ಬಗೆಯುತ್ತಿರುವ ಇನ್ಫೋಸಿಸ್‌ನ ನಾರಾಯಣಮೂರ್ತಿಗಳನ್ನು ಕೊಂಡಾಡುವ ನಮ್ಮ ಇಂಗ್ಲಿಷ್ ಮಾಧ್ಯಮಗಳು ನಿತ್ಯ 'ಮೂರ್ತಿ ಪೂಜೆ' ಮಾಡುತ್ತಲೇ ಇವೆ.

ಇನ್ಫೋಸಿಸ್‌ಗೆ ಸೇರಲು ಬೇಕಾದ ಕನಿಷ್ಠ ಅರ್ಹತಾ ಅಂಕ ಅಂದರೆ ಕಟ್ ಆಫ್ ಮಾರ್ಕ್ಸ್ ಈ 15 ವರ್ಷಗಳಲ್ಲಿ ಅದ್ಹೇಗೆ ಬದಲಾವಣೆಗೊಳ್ಳುತ್ತಾ ಬಂತು ಎಂಬುದನ್ನು ನೋಡಿದರೆ ಮೂರ್ತಿಗಳ ದಲಿತ ವಿರೋಧಿ ನೀತಿ ಅರ್ಥವಾಗುತ್ತದೆ.

* 90 ರ ದಶಕದ ಆರಂಭದಲ್ಲಿ ಬಿ.ಇ. ಫೈನಲ್‌ನಲ್ಲಿ ಶೇ. 70 ಅಂಕವಿದ್ದರೆ ಸಾಕಿತ್ತು. ಆದರೆ ಬಿ.ಇ. ಸೀಟನ್ನು ಮೀಸಲಾತಿಯಲ್ಲಿ ಪಡೆದ ದಲಿತರು ಕೊನೆ ವರ್ಷದಲ್ಲಿ ಶೇ. 70 ಗಳಿಸಿ ಇನ್ಫೋಸಿಸ್ ಸೇರಬಹುದಲ್ಲ ಎಂಬ ಪ್ರಶ್ನೆ ಕಾಡಿತು ಮೂರ್ತಿಗಳಿಗೆ.
* 90 ರ ದಶಕ ಅಂತ್ಯಗೊಳ್ಳುವ ಹೊತ್ತಿಗೆ ಎಲ್ಲ 8 ಸೆಮಿಸ್ಟರ್‌ಗಳಲ್ಲಿ ಶೇ. 70 ಮೆರಿಟ್ ಇರಬೇಕೆಂದು ತಾಕೀತು ಮಾಡಿದರು.

  ಇನ್ಫಿಯ ಬ್ರಾಹ್ಮಣ ಬುದ್ಧಿ ಇಷ್ಟಕ್ಕೂ ಸುಮ್ಮನಾಗಲಿಲ್ಲ. ಪಿಯು, ಎಸ್‌ಎಸ್‌ಎಲ್‌ಸಿಗಳಲ್ಲಿ ಮೀಸಲಾತಿ ಮೂಲಕ ಒಳ್ಳೆ ಕಾಲೇಜಲ್ಲಿ ಓದಿ ಮೆರಿಟ್ ಪಡೆದ ದಲಿತರನ್ನು ತಡೆಯುವುದು ಹೇಗೆ? ಎಂದು ಚಿಂತಿಸಲಾರಂಭಿಸಿದರು.
* ಈಗ ಇನ್ಫಿ ಸೇರಲು ಬಿ.ಇ.ಯ ಎಲ್ಲ ಸೆಮಿಸ್ಟರ್‌ಗಳಲ್ಲಿ ಶೇ. 70, ಪಿಯುಸಿ, ಹತ್ತನೇ ತರಗತಿಯಲ್ಲೂ ಶೇ. 70 ರ ಅಂಕ ಗಳಿಸಿರಲೇಬೇಕು.

So, ಅಲ್ಲಿಗೆ ಶಿಕ್ಷಣ ಪಡೆದ ಮೊದಲ ತಲೆಮಾರಿನ ದಲಿತರಿಗೆ ಇನ್ಫಿ shut down!

ಬರಲಿರುವ ದಿನಗಳಲ್ಲಿ "L.K.G, U.K.G ಯಲ್ಲಿ ಶೇ. 70 ಅಂಕ ಇರಲೇಬೇಕು" ಎಂಬ ನಿಯಮ ಮಾಡುತ್ತಾರಂತೆ ಇನ್ಫಿಯ "ಕಟ್-ಆಫ್" ಪ್ರವೀಣರು.

ಅಂದರೆ ಇನ್ಫಿ, ಹಂಡ್ರೆಡ್ ಪರ್ಸೆಂಟ್ ಬ್ರಾಹ್ಮಣರ ಅಗ್ರಹಾರವಾಗಲಿದೆ.

'ಮೆರಿಟ್'ಗೆ ಜೈ ಜೈ!

ಸಂವಿಧಾನಕ್ಕೆ ಜೈ ಜೈ!!

ಪಿ.ಕೆ. ಮಲ್ಲನಗೌಡರ್

ಹೆಣ್ಣು ಮತ್ತು ಸಂಗೀತಕ್ಕೆ ಅಂತ್ಯವೆಂಬುದಿಲ್ಲ -ಗೋಲ್ಡ್‌ಸ್ಮಿತ್

ಆರೋಗ್ಯ ಮಂತ್ರಿಗೆ ಭೂರೋಗ!

ದಯಾನಂದ ಪೈ-ಅಶೋಕ್ ಜಂಟಿ ಲೂಟಿ

1200 ಕೋಟಿಯ ಅರಣ್ಯ ಸ್ವಾಹಾ?

ಆರೋಗ್ಯ ಮಂತ್ರಿ ಆರ್. ಅಶೋಕ್ ತುಂಬಾ ಬಿಜಿ. ಹಾಗೂ ವಿಧಾನಸೌಧದ ತಮ್ಮ ಮಂತ್ರಿ ಚೇಂಬರಿಗೆ ಕನಿಷ್ಠ ಎರಡು ದಿನಕ್ಕೊಮ್ಮೆಯಾದರೂ ಬಂದು, ಸುಮ್ಮನೆ ಮುಖ ತೋರಿಸಿ ಹೋಗುವುದಕ್ಕೂ ಟೈಮಿಲ್ಲ. ಹಾಗಂಥ ಆರೋಗ್ಯ ಮಂತ್ರಿಗಳು ಹಳ್ಳಿಹಳ್ಳಿ ಸುತ್ತಿ ಸರ್ಕಾರಿ ದವಾಖಾನೆಗಳಲ್ಲಿ ಬಡವರ ಸೇವೆ ಮಾಡುತ್ತಿದ್ದಾರೆಂದುಕೊಂಡಿದ್ದೀರಾ? ತಪ್ಪು. ಅಶೋಕ್ ರಿಯಲ್ ಎಸ್ಟೇಟ್ ದಂಧೆಯಲ್ಲಿ ತಮ್ಮ ತನು-ಮನ-ಧನ ತೊಡಗಿಸಿಕೊಂಡಿದ್ದಾರೆ. ಆರೋಗ್ಯ ಇಲಾಖೆಯಲ್ಲೇನಿದೆ ಮಣ್ಣು. ಮಣ್ಣಲ್ಲಿರುವುದೇ ನಿಜವಾದ ಹೊನ್ನು!

ಏಕೆಂದರೆ ಆ ಕಾಲದಿಂದಲೂ ಎಲ್ಲೆಲ್ಲಿ ಗೋಮಾಳ, ಸೀಯ ಸೈಟು, ಹಡಬಿಟ್ಟಿ ಲ್ಯಾಂಡಿದೆಯೆಂದು ಕಣ್ಣಿಟ್ಟು ಸದ್ದಿಲ್ಲದೆ ನುಂಗುವುದನ್ನೇ ಕುಲಕಸುಬನ್ನಾಗಿಸಿಕೊಂಡವನು ಆರ್. ಅಶೋಕ್. ಪಟ್ಟಣಗೆರೆ ಪಿಎಂಪಿಯ ಮಾಜಿ ಅಧ್ಯಕ್ಷ ಬಾಲಕೃಷ್ಣ, ಪದ್ಮನಾಭನಗರದ ಕೌನ್ಸಿಲರ್ ಎಲ್. ಶ್ರೀನಿವಾಸ್, ಶ್ರೀನಿವಾಸನಗರದ ಕೌನ್ಸಿಲರ್ ವೆಂಕಟೇಶ್‌ಮೂರ್ತಿ, ಕಗ್ಗಲಿಪುರದ ಶಿವಕುಮಾರ, ಬಜೆಪಿ ಲೀಡರ್ ಬಸವರಾಜ್, ತಲಘಟ್ಟಪುರದ ರಾಮಸ್ವಾಮಿ; ಹೀಗೆ ಯಾರೆಲ್ಲ ಬಜೆಪಿ ಕಾರ್ಯಕರ್ತರನ್ನು ಅಶೋಕ್ ಬೆಳೆಸಿದರೋ ಅವರೆಲ್ಲರೂ ಒಂದಾನೊಂದು ಕಾಲಕ್ಕೆ ಅಶೋಕ್ ಲ್ಯಾಂಡ್ ಗ್ರ್ಯಾಬಿಂಗ್ ದಂಧೆಯಲ್ಲಿ ಬ್ರೋಕರುಗಳಾಗಿದ್ದವರೇ.



ಹೇಳಿಕೇಳಿ ಅಶೋಕ್ ಪ್ರತಿನಿಧಿಸುವ ಉತ್ತರಹಳ್ಳಿ ಇಡೀ ಬೆಂಗಳೂರು ನಗರದ ಹೊರವಲಯವನ್ನು ವ್ಯಾಪಿಸುತ್ತದೆ. ಬನಶಂಕರಿಯಿಂದ ಹಿಡಿದು ಜಾಲಹಳ್ಳಿಯ ತನಕ, ಜೆ.ಪಿ. ನಗರವನ್ನು ಸುತ್ತಿ ಬನ್ನೇರುಘಟ್ಟ ರಸ್ತೆಯವರೆಗೆ, ಮಾಗಡಿ ರಸ್ತೆಯಿಂದ ಸುಂಕದಕಟ್ಟೆಯ ತನಕ ಎಲ್ಲೆಂದರಲ್ಲಿ ಖಾಲಿ ಸೈಟು, ಗೋಮಾಳ, ಕೆರೆ ಕುಂಟೆಗಳದೇ ರಾಶಿರಾಶಿ. ಅವರೇ ಶಾಸಕರಾದ್ದರಿಂದ ಬೆಂಗಳೂರು ಉತ್ತರ ತಾಲ್ಲೂಕಿನ ಲ್ಯಾಂಡ್ ಗ್ರಾಂಟ್ ಕಮಿಟಿ ಅಂದರೆ ಭೂಮಂಜೂರಾತಿ ಸಮಿತಿಗೂ ಅವರೇ ಅಧ್ಯಕ್ಷರು.

1200 ಕೋಟಿ

ಇನ್ನು ಕೇಳಬೇಕೆ? ಭೂಕಂಟಕನೊಬ್ಬ ಶಾಸಕನಾಗಿ, ಆತನ ಪಕ್ಷವೇ ಅಧಿಕಾರಕ್ಕೆ ಬಂದು, ಆತನೇ ಮಂತ್ರಿಯಾಗಿ ಬಿಟ್ಟರಂತೂ ಮುಗಿದೇ ಹೋಯಿತು. ಅಂಥದ್ದೇ ಅಪಾಯವೊಂದು ಈಗ ಭುಗಿಲೆದ್ದಿದೆ. ಬೆಂಗಳೂರಿನ ಭವಿಷ್ಯದ ಬಗ್ಗೆ ಕಾಳಜಿಯುಳ್ಳ ಪ್ರತಿಯೊಬ್ಬ ಪ್ರಜ್ಞಾವಂತರೂ ಮಂತ್ರಿ ಅಶೋಕ್‌ನ ಈ ಒಂದು ದುರಾಚಾರದ ವಿರುದ್ಧವಾದರೂ ಬೀದಿಗಿಳಿಯಲೇಬೇಕಿದೆ.

ಅದು ಸರಿಸುಮಾರು ಸಾವಿರದ ಇನ್ನೂರು ಕೋಟಿ ಮೊತ್ತದ ಭಾರೀ ಭೂಕಬಳಿಕೆ. ಇದರ ಒಂದು ತುದಿಯಲ್ಲಿ ಬೆಂಗಳೂರಿನ ಭೂಕಂಟಕ ದಯಾನಂದ ಪೈ ದುಡ್ಡಿನ ಥೈಲಿ ಹಿಡಿದು ನಿಂತಿದ್ದರೆ ಮತ್ತೊಂದು ಬದಿಯಲ್ಲಿ ಅಶೋಕ್ ಆತನ ದುಡ್ಡಿಗಾಗಿ ಜೊಲ್ಲು ಸುರಿಸುತ್ತಿದ್ದಾರೆ. ದುರಂತವೆಂದರೆ ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಗಂಗಾಧರಯ್ಯ, ರೆವಿನ್ಯೂ ಇನ್ಸ್‌ಪೆಕ್ಟರ್ ಚಿಕ್ಕಮುನಿಯಪ್ಪ ಮತ್ತು ಬೆಂಗಳೂರು ನಗರ ಜಿಲ್ಲಾಧಿಕಾರಿ ಎಂ.ಎ. ಸಾದಿಕ್ ಸೇರಿದಂತೆ ಇಡೀ ಸರ್ಕಾರಿ ಯಂತ್ರಾಂಗವೇ ಅಶೋಕ್ ಕಾರಸ್ಥಾನಕ್ಕೆ ಕೈಜೋಡಿಸಿಬಿಟ್ಟಿದೆ.

ಅದು ಮುನ್ನೂರು ಎಕರೆಯ ಮೈನರ್ ಫಾರೆಸ್ಟ್. ಉತ್ತರಹಳ್ಳಿ ಮನವರ್ತೆ ಕಾವಲ್‌ನ ಸರ್ವೆ ನಂಬರ್ ಐದರಲ್ಲಿ ಬರೀ ನೀಲಗಿರಿ ಮರಗಳೇ ಬೆಳೆದು ನಿಂತ ವಿಶಾಲ ಭೂಭಾಗ. ಅದಕ್ಕೆ ಹೊಂದಿಕೊಂಡಂತೆ ಬನಶಂಕರಿ ಐದನೇ ಮತ್ತು ಆರನೇ ಹಂತದ ಬಿಡಿಎ ಬಡಾವಣೆಗಳಿವೆ. ಮತ್ತೊಂದು ಪಾರ್ಶ್ವದಲ್ಲಿ ಕನಕಪುರ ರಸ್ತೆಯ ತಲಘಟ್ಟಪುರದ ವಾಜರಹಳ್ಳಿ, ಹೊಸಳ್ಳಿ, ಗಾಣಿಗರ ಪಾಳ್ಯ, ಚಿಕ್ಕೇಗೌಡನ ಪಾಳ್ಯ, ನಾಗೇಗೌಡನ ಪಾಳ್ಯ ಮುಂತಾದ ಊರುಗಳಿವೆ. ಎಲ್ಲವೂ ಅಭಿವೃದ್ಧಿ ಹಂತದ ಬಡಾವಣೆಗಳೆ. ತಲಾ ಎಕರೆಗೆ ಮಾರುಕಟ್ಟೆ ದರವೇ ನಾಲ್ಕು ಕೋಟಿ ರೂಪಾಯಿಗಳಷ್ಟಿವೆ. ಅಕ್ಕಪಕ್ಕದ ಬಡಾವಣೆಗಳಲ್ಲಿ ಪ್ರತಿ ಚದರ ಅಡಿಗೆ ಕನಿಷ್ಠ ಸಾವಿರ ರೂಪಾಯಿ ರೇಟಿರುವಾಗ ಕಳ್ಳನಿಗೆ ಕೊಟ್ಟರೂ ನಾಲ್ಕು ಕೋಟಿ ಕೊಟ್ಟೇ ಕೊಡುತ್ತಾನೆ.

ಬಹುಶಃ ಅರಣ್ಯ ಇಲಾಖೆ ಅಡ್ಡಗಾಲಿಡದೇ ಹೋಗಿದ್ದರೆ ಭೂಕಂಟಕ ದಯಾನಂದ ಪೈ ಅದನ್ನು ಯಾವತ್ತೋ ನುಂಗಿರುತ್ತಿದ್ದ. ಅದನ್ನು ಕಿರು ಅರಣ್ಯವೆಂದು 1960 ಕ್ಕೂ ಮೊದಲೇ ಕೇಂದ್ರ ಸರ್ಕಾರ ನೋಟಿಫೈ ಮಾಡಿದೆಯಾದ್ದರಿಂದ ನಿನ್ನೆ ಮೊನ್ನೆಯ ತನಕ ಯಾರೂ ಅದಕ್ಕೆ ಕಣ್ಣು ಹಾಕಿರಲಿಲ್ಲ. ಆದರೆ 2001 ರ ಹೊತ್ತಿಗೆ ನೆಲವಂಚಕ ದಯಾನಂದ ಪೈ ದೃಷ್ಟಿ ಅದರ ಮೇಲೆ ಬಿತ್ತು.

ತುರಳ್ಳಿ ಕಾಡು

ಅಲ್ಲಿಯ ತನಕ ಅಕ್ಕಪಕ್ಕದ ಗ್ರಾಮಸ್ಥರ ಪಾಲಿಗದು ಕಾವಲು ಗುಟ್ಟೆ. ಅದನ್ನು ತುರಳ್ಳಿ ಮೈನರ್ ಫಾರೆಸ್ಟ್ ಎಂದೂ ಕರೆಯುತ್ತಾರೆ. ಈ ಕಾಡಿನ(?) ಮಧ್ಯೆ ಸಣ್ಣದೊಂದು ಬೆಟ್ಟವಿದೆ. ಅಲ್ಲಿ ಕಾವಲು ಗುಟ್ಟೆ ಮುನೇಶ್ವರನೆಂಬ ಗುಡಿಯೂ ಇದೆ. ಜನ ಆ ಕಾಲದಿಂದಲೂ ಮುನೇಶ್ವರನಿಗೆ ನಡೆದುಕೊಳ್ಳುತ್ತಲೇ ಬಂದಿದ್ದಾರೆ. ಯಾವುದೇ ಜನಪರ ಸರ್ಕಾರ ಅಥವಾ ಪ್ರಜ್ಞಾವಂತ ಜನನಾಯಕರಾಗಿದ್ದರೆ ಇದನ್ನು ಅರಣ್ಯವಾಗೇ ಉಳಿಸಬೇಕಿತ್ತು. ಸ್ವಾತಂತ್ರ್ಯ ಪೂರ್ವದ ಬೆಂಗಳೂರಿನ ಪ್ರಮಾಣಕ್ಕೇ ಬ್ರಿಟೀಷರು ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್‌ನಂಥ ಎರಡು ಬೃಹತ್ ಪಾರ್ಕುಗಳನ್ನು ನಿರ್ಮಿಸಿ ಕೊಟ್ಟರು. ಸ್ವಾತಂತ್ರ್ಯಾನಂತರ ಬೆಂಗಳೂರು ಅದರ ನೂರು ಪಟ್ಟು ಬೆಳೆದರೂ ಒಂದೇ ಒಂದು ಕಬ್ಬನ್‌ಪಾರ್ಕ್ ಅಥವಾ ಲಾಲ್‌ಬಾಗ್ ಬರಲಿಲ್ಲ. ಬೆಂಗಳೂರು ತನ್ನ ತಣ್ಣನೆಯ ಹವೆಯ ಮೂಲಗುಣವನ್ನೇ ಕಳಕೊಂಡು ಬೆಂಕಿ ಕುಂಡವಾಗುತ್ತಿದ್ದರೂ ಅಂಥ ಮತ್ತೊಂದೇ ಒಂದು ಸಸ್ಯರಾಶಿಯನ್ನು ಆಳಿ ಹೋದವರ್‍ಯಾರೂ ನಿರ್ಮಿಸಲಿಲ್ಲ. ಇಂಥಾ ಸ್ಥಿತಿಯಲ್ಲಿ ಒಬ್ಬ ಯುವ ಮಂತ್ರಿಯಾಗಿ ಬೆಂಗಳೂರಿನ ಭವಿಷ್ಯದ ಬಗ್ಗೆ ಕನಿಷ್ಠ ಕಾಳಜಿಯಿದ್ದಿದ್ದೇ ಆಗಿದ್ದರೆ ಅಶೋಕ್ ಇಂಥ ಮೈನರ್ ಅರಣ್ಯವನ್ನು ಮತ್ತೊಂದು ಕಬ್ಬನ್ ಪಾರ್ಕ್ ಮಾಡುವತ್ತ ಯೋಚಿಸ ಬೇಕಿತ್ತು.



ಬನಶಂಕರಿ 6ನೇ ಹಂತದ ತುರಳ್ಳಿ ಕಾಡು

ಆದರೆ ದಯಾನಂದ ಪೈ ಎಂಬ ನೆಲವಂಚಕನ ಆಮಿಷಕ್ಕೆ ಬಲಿಯಾಗಿದ್ದಾರೆ. ಅದನ್ನು ತಾವೇ ಅಧ್ಯಕ್ಷರಾಗಿರುವ ಭೂಮಂಜೂರಾತಿ ಸಮಿತಿಯ ಮೂಲಕ ಭೂರಹಿತ ಬಡವರಿಗೆ ಹಂಚಿದಂತೆ ದಾಖಲೆ ಸೃಷ್ಟಿಸಿ ಆನಂತರ ಸಾರಾಸಗಟಾಗಿ ದಯಾನಂದ ಪೈ ಹೊಟ್ಟೆಗೆ ಹಾಕುವುದು ಅಶೋಕ್ ಹುನ್ನಾರ. ಅವರದೇ ಬಿಜೆಪಿ ಅಧಿಕಾರದಲ್ಲಿದೆ. ಬಿಜೆಪಿ ನಾಯಕ ಜಗದೀಶ್ ಶೆಟ್ಟರ್‌ರೇ ಕಂದಾಯ ಮಂತ್ರಿ. ಈಗಾಗಲೇ ಹೊಸಳ್ಳಿಯ ಶ್ರೀನಿವಾಸ್ ಮತ್ತು ಗಾಣಿಗರ ಪಾಳ್ಯದ ರಾಮಸ್ವಾಮಿ ಎಂಬಿಬ್ಬರು ಅಶೋಕ್ ಬಂಟರು ಕಬಳಿಕೆಯ ತಾಲೀಮು ನಡೆಸುತ್ತಿದ್ದರೆ ಅದಕ್ಕೆ ದುಡ್ಡು ಕಾಸಿನ ಫೀಡ್ ಮಾಡುತ್ತಿರುವವನು ದಯಾನಂದ ಪೈನ ಏಜೆಂಟ್ ನಾಯಕ್ ಎಂಬಾತ. ಈ ಪೈಕಿ ಹೊಸಳ್ಳಿ ಶ್ರೀನಿವಾಸ್ ಟಾಟಾ ಇನ್ಸ್ಟಿಟ್ಯೂಟ್ ನೌಕರ. ರಾಮಸ್ವಾಮಿ ಕಳೆದ ತಾಲ್ಲೂಕು ಪಂಚಾಯ್ತಿ ಚುನಾವಣೆಯಲ್ಲಿ ತಲಘಟ್ಟಪುರಕ್ಕೆ ಬಿಜೆಪಿಯಿಂದ ನಿಂತು ಸೋತಿದ್ದ. ಇವರಿಬ್ಬರೂ ಸೇರಿ ನೆಲವಂಚಕ ದಯಾನಂದ ಪೈಗೆ ತುರಳ್ಳಿ ಕಾಡನ್ನು ತೋರಿಸಿದ್ದಾರೆ. ಪ್ರಾರಂಭದಲ್ಲಿ ಚಿಲ್ಲರೆ ಕಾಸು ಬಿಚ್ಚುತ್ತಿದ್ದ ದಯಾನಂದ ಪೈ ಇಲ್ಲಿಗೆ ತಿಂಗಳ ಹಿಂದೆ ಮಂತ್ರಿ ಅಶೋಕ್‌ರನ್ನು ಕಂಡು ನಾಲ್ಕು ಕೋಟಿ ರೂಪಾಯಿಗಳಷ್ಟು ದೊಡ್ಡ ಮೊತ್ತದ ಅಡ್ವಾನ್ಸ್ ಕೊಟ್ಟಿದ್ದಾನೆಂಬುದು ಲೇಟೆಸ್ಟ್ ಸುದ್ದಿ.



ಶಿವಕುಮಾರ್



ರಾಮಸ್ವಾಮಿ

ಹಾಗೆ ನೋಡಿದರೆ ಮುನ್ನೂರು ಎಕರೆಯ ತುರಳ್ಳಿ ಫಾರೆಸ್ಟಿಗೆ ನಾಲ್ಕು ಕೋಟಿಯ ಮುಂಗಡ ದೊಡ್ಡ ಮೊತ್ತವೇನಲ್ಲ. ಹಾಗಂಥ ಈ ಭೂಮಿಯನ್ನು ಸಲೀಸಾಗಿ ಕೊಡುವ ಅಧಿಕಾರ ಅಶೋಕ್‌ಗಿಲ್ಲ. 1956 ರಲ್ಲೇ ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅದನ್ನು ಗೋವುಗಾಡು ಎಂದು ಆದೇಶ ಹೊರಡಿಸಿದ್ದಾರೆ. 1964 ರಲ್ಲಿ ಅರಣ್ಯ ಇಲಾಖೆ ಅದನ್ನು ಕಿರುಅರಣ್ಯವೆಂದು ಗುರುತಿಸಿ ಸ್ವಾಧೀನ ಪಡಿಸಿಕೊಂಡಿದೆ. ತೀರ ಇತ್ತೀಚೆಗೆ ಬಿಡಿಎ ಅಲ್ಲಿ ರಸ್ತೆ ನಿರ್ಮಿಸಲು ಹೋದಾಗಲೂ ಅದನ್ನು ಅರಣ್ಯ ಇಲಾಖೆ ತಡೆದಿದೆ.

4 ಕೋಟಿ ಮುಂಗಡ!

ಆದರೆ ಇಲ್ಲೊಂದು ಕಳ್ಳದಾರಿಯಿದೆ. ಅದು 1978 ರಲ್ಲಿ ಹೊಸಳ್ಳಿ ಮತ್ತು ಗಾಣಿಗರಪಾಳ್ಯದ ಗ್ರಾಮಸ್ಥರು ಹೈಕೋರ್ಟಿಗೊಂದು ಅರ್ಜಿ ಹಾಕಿಕೊಂಡಿದ್ದು. ತುರಳ್ಳಿ ಕಾಡಿನ ಭೂಮಿಯನ್ನು ತಮಗೇ ಮಂಜೂರು ಮಾಡಬೇಕೆಂದು ಕೇಸು ಹಾಕಿದ್ದ ಗಾಣಿಗರಪಾಳ್ಯದ ರಾಮಸ್ವಾಮಿ, ಬೈಯಣ್ಣ, ಸಂಪಂಗಿ, ಮಾಜಿ ಚೇರ್ಮನ್ ರಾಮಯ್ಯ, ಚಂದ್ರಪ್ಪ, ಗೋಪಾಲ ಮತ್ತು ಹೊಸಳ್ಳಿಯ ಅಬ್ಬಯ್ಯ, ಶ್ರೀನಿವಾಸ, ಶೇಖರ, ದಾಸಪ್ಪ, ಚನ್ನಮ್ಮ ಮುಂತಾದವರನ್ನು 2001 ರ ಹೊತ್ತಿಗೆ ಅಶೋಕ್ ಬಿಜೆಪಿಗೆ ಸೆಳಕೊಂಡರು. ಏಕೆಂದರೆ ಹೈಕೋರ್ಟು ಈ ವಿಷಯವನ್ನು ಭೂ ಮಂಜೂರಾತಿ ಸಮಿತಿಗೆ ಸಾಗಹಾಕಿತ್ತು. ಹೈಕೋರ್ಟ್ ಕೊಟ್ಟ ಆದೇಶ ಹೇಗಿತ್ತೆಂದರೆ ಇವರ ಮನವಿಯನ್ನು ಕಾನೂನುಬದ್ಧವಾಗಿ ಪರಿಶೀಲಿಸಿ ಎಂದಿತ್ತು.

ಕಳೆದ ಹತ್ತು ವರ್ಷಗಳಿಂದ ಲ್ಯಾಂಡ್ ಗ್ರ್ಯಾಂಟ್ ಕಮಿಟಿಯ ಅಧ್ಯಕ್ಷರಾಗಿರುವ ಅಶೋಕ್‌ಗೆ ಈ… ವಿಷಯದಲ್ಲಿ ಯಾವುದೇ ಅಧಿಕಾರವಿಲ್ಲ… ಹೆಚ್ಚೆಂದರೆ ಅಶೋಕ್ ಇದು ಅರಣ್ಯ ಭೂಮಿ… ಯಾದ್ದರಿಂದ ಕೊಡಲು ಬಾರದು ಎಂತಲೋ… ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ ಹದಿನೆಂಟು ಕಿ.ಮೀ. ಆಚೆಗೆ ಇದು ಬರುವುದಿಲ್ಲ… ವಾದ್ದರಿಂದ ಭೂ ಮಂಜೂರಾತಿಗೆ ಒಳಪಡುವ… ದಿಲ್ಲ ಎಂತಲೋ ಅರ್ಜಿದಾರರಿಗೆ ಹಿಂಬರಹ… ಕೊಡಬಹುದಷ್ಟೇ.

ಇದರ ಹೊರತಾಗಿ ಅಶೋಕ್ ಬೇರೇನೂ… ಮಾಡುವಂತಿಲ್ಲ. ಏಕೆಂದರೆ ಭೂ ಮಂಜೂರಾತಿಗೊಳಪಡುವ ಜಮೀನು ಪಾಲಿಕೆಯಿಂದ ಹದಿನೆಂಟು ಕಿ.ಮೀ. ಆಚೆಗಿರಲೇಬೇಕು. ಅದು… ಕಾನೂನು. ಆದರೆ ತುರಳ್ಳಿ ಕಾಡಿರುವುದು ಪಾಲಿಕೆ… ವ್ಯಾಪ್ತಿಯಿಂದ ಹದಿಮೂರು ಕಿ.ಮೀ. ಅಂತರದಲ್ಲಿ… ಹೇಳಿಕೇಳಿ ಅರಣ್ಯಭೂಮಿ. ಆದರೆ ಈ ಹೊತ್ತಿಗಾಗಲೇ ದಯಾನಂದ ಪೈನಿಂದ ನಾಲ್ಕು ಕೋಟಿಯ… ಅಡ್ವಾನ್ಸ್ ಸಂದಾಯವಾಗಿತ್ತಲ್ಲ!

ಅಶೋಕ್ ರೆವಿನ್ಯೂ ಇನ್ಸ್‌ಪೆಕ್ಟರ್ ಚಿಕ್ಕ ಮುನಿಯಪ್ಪನನ್ನು… ಕರೆದದ್ದೇ ಸಾಗುವಳಿ ಚೀಟಿ ಕೊಡುವ… ಬಗ್ಗೆ ವರದಿ ಬರೆಸಿದ್ದಾರೆ. ಕಳೆದ… ಏಪ್ರಿಲ್ 20 ಕ್ಕೆ ಚಿಕ್ಕ ಮುನಿಯಪ್ಪ… ತಹಶೀಲ್ದಾರ್ ನಾರಾಯಣ ಸ್ವಾಮಿ… ಸೇರಿಕೊಂಡು ಸರ್ವೆ ನಡೆಸಿ ಭೂ… ಮಂಜೂರಾತಿಗೆ ಸುತ್ತೋಲೆ ಹೊರಡಿಸಿಬಿಟ್ಟರು. ಅರಣ್ಯ ಭೂಮಿಯನ್ನು ರೈತರಿಗೆ ಹಂಚುವ ಕಾನೂನು ಬಾಹಿರ ತೀರ್ಮಾನವೊಂದಕ್ಕೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಸಾದಿಕ್ ಕೂಡ ಅಂಕಿತ ಹಾಕಿದ್ದಾರೆ. ಇನ್ನೊಂದು ತಿಂಗಳೊಳಗೆ ಬೆಂಗಳೂರು ದಕ್ಷಿಣ ತಾಲ್ಲೂಕು ಭೂ ಮಂಜೂರಾತಿ ಸಮಿತಿಯ ಪುನರ್ರಚನೆಯಾಗಲಿದೆ. ಏಕೆಂದರೆ ಅಶೋಕ್ ಮಂತ್ರಿಯಾಗಿರುವುದರಿಂದ ಲ್ಯಾಂಡ್ ಗ್ರ್ಯಾಂಟ್ ಕಮಿಟಿಗೂ ಅವರೇ ಅಧ್ಯಕ್ಷರಾಗುವಂತಿಲ್ಲ. ಅಲ್ಲಿಗೆ ತಮ್ಮ ರಬ್ಬರ್ ಸ್ಟ್ಯಾಂಪ್ ಕಗ್ಗಲಿಪುರದ ಶಿವಕುಮಾರನನ್ನು ತರುವುದು ಅಶೋಕ್ ಹುನ್ನಾರ. ಈಗಾಗಲೇ ಈತನ ಪತ್ನಿಗೆಂದು ಅಶೋಕ್ ಮೂರೆಕರೆ ಜಮೀನು ಮಂಜೂರು ಮಾಡಿದ್ದಾರೆ. ಈತನ ಬಂಟ ಬಸವರಾಜನ ಪತ್ನಿ ಪದ್ಮಾವತಿಗೂ ನಾಲ್ಕೆಕರೆ ಧಾರೆ ಎರೆದಿದ್ದಾರೆ. ಇವರ್‍ಯಾರೂ ಭೂರಹಿತರಲ್ಲ, ಬಡವರೂ ಅಲ್ಲ, ಹುಟ್ಟಾ ಭೂಗಳ್ಳರು!

ಪಾರ್ಟಿ ಫಂಡ್‌ಗೆ 100 ಕೋಟಿ

ತುರಳ್ಳಿ ಕಾಡನ್ನು ಅರ್ಜಿದಾರರಿಗೆ ಕೊಟ್ಟಂತೆ ಮಾಡುವುದು, ಆನಂತರ ದಯಾನಂದ ಪೈ ಅವರಿಂದ ಖರೀದಿಸುವುದು. ಇದು ಅಶೋಕ್ ಭೂಕಬಳಿಕೆಯ ಶೈಲಿ. ಕಾಡಿರುವ ಕಾರಣಕ್ಕೇ ಬನಶಂಕರಿ, ಜೆ.ಪಿ. ನಗರದ ಹವೆ ತಣ್ಣಗಿದೆ. ಅಲ್ಲಲ್ಲಿ ಹಸಿರೂ ಕಂಗೊಳಿಸುತ್ತದೆ. ಅದನ್ನು ದಯಾನಂದ ಪೈ ಕಬಳಿಸಿದನೆಂದರೆ ಗಿಡ ಮರಗಳೆಲ್ಲ ಮಾಯವಾಗಿ ಸಿಮೆಂಟ್ ಕಾಡೊಂದೇ ವಿಜೃಂಭಿಸುತ್ತದೆ. ಜೊತೆಗೆ ಕಮ್ಮಿಯೆಂದರೂ ಮುನ್ನೂರು ಕೋಟಿ ರೂಪಾಯಿಗಳ ನಿಧಿ ಅಶೋಕ್ ಜೇಬಿಗೆ ಬೀಳುತ್ತದೆ. ಒಂದು ಮೂಲದ ಪ್ರಕಾರ ದಯಾನಂದ ಪೈ ತುರಳ್ಳಿ ಕಾಡಿಗೆ ಬದಲಾಗಿ ಬಿಜೆಪಿ ಪಾರ್ಟಿ ಫಂಡ್ ಎಂದು ನೂರು ಕೋಟಿಗೆ ಪ್ರಾಮಿಸ್ ಮಾಡಿದ್ದಾನಂತೆ.

ಬೆಂಗಳೂರಿನ ಭವಿಷ್ಯದ ಬಗ್ಗೆ ಕಾಳಜಿಯುಳ್ಳ ಪ್ರತಿಯೊಬ್ಬರೂ ಅಶೋಕ್ ದುರಾಚಾರ ಮತ್ತು ತುರಳ್ಳಿ ಕಾಡಿನ ಸಂಹಾರದ ವಿರುದ್ಧ ಧನಿಯೆತ್ತಲೇ ಬೇಕಿದೆ. ನೆಲಗಳ್ಳರ ವಿರುದ್ಧ ಗುಡುಗುವ ಮುಖ್ಯಮಂತ್ರಿ ಕುಮಾರಸ್ವಾಮಿಯಾದರೂ ಈ ಬಗ್ಗೆ ತಲೆ ಕೆಡಿಸಿಕೊಳ್ಳಲೇಬೇಕು. ಕನಿಷ್ಠ ಬೆಂಗಳೂರಿನ ಭವಿಷ್ಯಕ್ಕಾಗಿ.


-ವರದಿಗಾರ

ರವಿ ಎಂಬ ಬೇನಾಮಿ!

ಆರೋಗ್ಯ ಮಂತ್ರಿಯ ಭೂರೋಗ ಅದಿನ್ನೆಷ್ಟು ಉಲ್ಬಣಿಸಿದೆಯೆಂಬುದಕ್ಕೆ ಅಶೋಕ್ ಮಂತ್ರಿಯಾದ ನಂತರ ಖರೀದಿಸಿದ ದುಬಾರಿ ಸೈಟುಗಳೇ ಸಾಕ್ಷಿ.

ಇಲ್ಲಿಗೆ ತಿಂಗಳ ಹಿಂದೆ ಅಶೋಕ್ ಕಮ್ಮಗೊಂಡನಹಳ್ಳಿಯಲ್ಲಿ ಎಕರೆಗೆ ಅರವತ್ತು ಲಕ್ಷದಂತೆ ಹತ್ತು ಒಟ್ಟೂ ವಿಳೆಕರೆಯಷ್ಟು ಖರೀದಿಸಿದ್ದಾರೆ. ಅದು ನಾಲ್ಕು ಕೋಟಿ ಇಪ್ಪತ್ತು ಲಕ್ಷದ ಬಾಬತ್ತು. ಅದಾದ ನಂತರ ಜೆ.ಪಿ. ನಗರದಲ್ಲಿ ಮೂರೆಕರೆಯ ಲಿಟಿಗೇಷನ್ ಪ್ರಾಪರ್ಟಿಯೊಂದಕ್ಕೆ ಮೂರು ಕೋಟಿ ಮೊತ್ತದ ಅಡ್ವಾನ್ಸ್ ಕೊಟ್ಟಿದ್ದಾರೆ. ಆನಂತರ ಅಂದರೆ ಕಳೆದ ತಿಂಗಳು ಇಪ್ಪತ್ತಾರರಂದು ಕಾಂಗ್ರೆಸ್ ಪುಡಾರಿ ಶಂಕರ್ ಎಂಬಾತನನ್ನು ಬಿಟ್ಟು ಹೆಣ್ಣೂರು ಬಾಣಸವಾಡಿಯಲ್ಲಿ ಮತ್ತೆ ಐದೆಕರೆ ಪ್ಲಾಟ್‌ಗೆ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಇದು ಕಮ್ಮಿಯೆಂದರೂ ಹತ್ತು ಕೋಟಿಯ ಸ್ವತ್ತು.

ತೀರ ಇತ್ತೀಚೆಗೆ ಅಶೋಕ್ ಖರೀದಿ ಮಾಡಿದ ಸರಿಸುಮಾರು ಹತ್ತು ಕೋಟಿಯ ಆಸ್ತಿಯೆಂದರೆ ಜಾಲಹಳ್ಳಿ ಅಯ್ಯಪ್ಪ ದೇವಸ್ಥಾನದ ಪಕ್ಕದ ದ್ರಾಕ್ಷಿ ತೋಟದ ಎದುರಿನ ಒಂದೂವರೆ ಎಕರೆಯ ಪ್ಲಾಟು. ಐವತ್ತೈದು ಸಾವಿರ ಚದರ ಅಡಿಗಳ ಈ ಪ್ಲಾಟು ಮೂಲತಃ ಮಲ್ಲೇಶ್ವರದ ಸುನೀಲ್ ಮೋದಿ ಎಂಬ ಗುಜರಾತಿ ಉದ್ದಿಮೆದಾರನಿಗೆ ಸೇರಿದ್ದು. ಈತ ಜಾಲಹಳ್ಳಿಯ ಕೇರಮ್ ಇಂಡಸ್ಟ್ರಿಯ ಮಾಲೀಕ. ಎದುರಿಗೇ ಪೆಟ್ರೋಲ್ ಬಂಕಿದೆ. ತಲಾ ಚದರ ಅಡಿಗೆ ಸಾವಿರದೈನೂರರಂತೆ ಲೆಕ್ಕ ಹಾಕಿದರೂ ಅದು ಹತ್ತು ಕೋಟಿಯ ಭರ್ಜರಿ ಆಸ್ತಿ.




ರವಿ

ನಿಗೂಢವೆಂದರೆ ಅಶೋಕ್ ಈ ಯಾವುದನ್ನೂ ತಮ್ಮ ಹೆಸರಲ್ಲಾಗಲಿ, ತಮ್ಮ ಪತ್ನಿಯ ಹೆಸರಲ್ಲಾಗಲಿ ಖರೀದಿಸಿಲ್ಲ. ಅದಕ್ಕೆ ಎ. ರವಿ ಎಂಬ ಬೇನಾಮಿಯನ್ನು ಇಟ್ಟುಕೊಂಡಿದ್ದಾರೆ. ಈತ ತಾನು ಅಶೋಕ್ ತಮ್ಮನೆಂದೇ ಹೇಳಿಕೊಳ್ಳುತ್ತಾನೆ. ಹಾಗಂಥ ಈತ ಖಾಸಾ ತಮ್ಮನಲ್ಲ. ಅಶೋಕ್ ಚಿಕ್ಕಪ್ಪ ಆಂಜನಪ್ಪನ ಮಗ. ಅಶೋಕ್ ತಂದೆ ರಾಮಯ್ಯ ಮತ್ತು ಅವರ ತಮ್ಮ ಆಂಜನಪ್ಪ ಇಬ್ಬರೂ HMT ನೌಕರರಾಗಿದ್ದರು. ರಾಮಯ್ಯನವರಿಗೆ ಅಶೋಕ್ ಒಬ್ಬನೇ ಗಂಡು ಮಗನಾದ್ದರಿಂದ ಆ ಕಾಲದಿಂದಲೂ ರವಿ ತಮ್ಮನಂತೆ ಚಾಲ್ತಿಗೆ ಬಂದ. ಇಬ್ಬರೂ ಆರೆಸ್ಸೆಸ್ ಕಾರ್ಯಕರ್ತರೆ.

ಅಶೋಕ್ ಬೆಂಗಳೂರು ನಗರ ಬಿಜೆಪಿ ಅಧ್ಯಕ್ಷನಾಗುತ್ತಿದ್ದಂತೆ ರವಿ ಬಿಜೆಪಿಯ ನಾಯಕನಾದ. ಮಂತ್ರಿಯಾದ ಮೇಲಂತೂ ರವಿಯೇ ಅನಧಿಕೃತ ಉತ್ತರಹಳ್ಳಿ ಶಾಸಕ. ಅಶೋಕ್ ಕೇವಲ ಸೈಟು ನೋಡಿ ದುಡ್ಡು ಕೊಡುತ್ತಾರೆ. ಅಗ್ರಿಮೆಂಟ್, ಖರೀದಿ, ಬಕರಿ ಎಲ್ಲವನ್ನೂ ರವಿ ತನ್ನ ಹೆಸರಲ್ಲೇ ನಿಭಾಯಿಸುತ್ತಾನೆ. ಅದಕ್ಕೆ ಗೋವಿಂದರಾಜನಗರದ ಮಾಜಿ ಮಂತ್ರಿ ರೇವಣ್ಣನವರ ಮನೆಯೆದುರಿನ ಪುಡಾರಿ ಶಂಕರ್ ಎಂಬಾತ ಪಾರ್ಟ್‌ನರ್. ಇವರಿಬ್ಬರೂ ಸೇರಿ ಈತನಕ ನೂರೈವತ್ತು ಕೋಟಿಯಷ್ಟು ಲ್ಯಾಂಡ್ ವಹಿವಾಟು ನಡೆಸಿದ್ದಾರೆಂದರೆ ಅದರಲ್ಲಿ ಮಂತ್ರಿ ಅಶೋಕ್ ಪಾಲೆಷ್ಟು?



ಹೆದ್ದಾರಿ ಯುದ್ಧ ಕಳ್ಳ ಮಳ್ಳ



...ಚ್ಚುವರಿ 1215 ಎಕರೆ ಕಿತ್ತುಕೊಂಡಿರುವ ...ಸ್‌ನ ಖೇಣಿಯ ಭೂಗಳ್ಳತನವೇ ಇವತ್ತಿನ ...ಗಳಕ್ಕೆ ಮೂಲ ಕಾರಣವಾಗಿದೆ. ...ನಪಿರಲಿ ಇದು ಬೆಂಗಳೂರಿನ ...ೂರವಲಯದ ರಿಂಗ್‌ರೋಡಿನ ಜಾತಕ ...ಾತ್ರ. ಇನ್ನು ಮೈಸೂರುವರೆಗಿನ ಹೈವೆ, ... ಟೌನ್‌ಶಿಪ್‌ಗಳ ನೆಪದಲ್ಲಿ ನೈಸ್ ...ಪಟಾಯಿಸಿರುವ ಜಮೀನಿನ ಅಸಲಿ ...ನಿಖೆಯಾದಲ್ಲಿ ಇನ್ನಷ್ಟು ಕಳ್ಳತನ ...ತ್ತೆಯಾದರೂ ಆಶ್ಚರ್ಯವೇನಿಲ್ಲ.

ಬೆಂಗಳೂರು-ಮೈಸೂರು ಮಧ್ಯೆ ಹೈವೆ ಕಟ್ಟುತ್ತೀನಿ ...ದು ನಿಂತಿರುವ ನೈಸ್ ಕಂಪನಿಯ ಅಶೋಕ್ ಖೇಣಿಗೆ ...ವೇಗೌಡರು ಒಂದೇ ಸಮನೆ ಜಾಪಾಳ ಮಾತ್ರ ...ಸುತ್ತಿದ್ದಾರೆ.

ಹೈವೆ ಹೆಸರಿನಲ್ಲಿ ರೈತರ ಭೂಮಿ ಕಿತ್ತುಕೊಂಡು ...ಸ್‌ಪ್ರೆಸ್ ವೇಗದಲ್ಲಿ ಸಾವಿರಾರು ಕೋಟಿ ಲಾಭ ...ಾಡಿಕೊಳ್ಳಲು ಹೊರಟಿದ್ದ ಖೇಣಿ ಬ್ರದರ್ಸ್ ಈಗ ... ಪಾಲಾಗುವ ದುಃಸ್ಥಿತಿ ತಂದುಕೊಂಡಿದ್ದಾರೆ. ಈ ...ಸ್ ಕಂಪನಿ ಬೆಂಗಳೂರು ಹೊರವಲಯದ ರಿಂಗ್ ...ೋಡಿಗೆಂದು ರೈತರಿಂದ ಹೆಚ್ಚುವರಿಯಾಗಿ ಕಿತ್ತು ...ೊಂಡಿರುವ ಜಮೀನನ್ನು ವಾಪಸ್ ಪಡೆಯಲು ...ೋ-ಜಾ ಸರ್ಕಾರ ದೃಢ ನಿರ್ಧಾರ ಮಾಡಿಬಿಟ್ಟಿದೆ. ... ಸಂಬಂಧ ವಿಶೇಷ ಮಸೂದೆಯೊಂದು ಮಂಡನೆ ...ಾಗುವ ಮಾತೂ ಕೇಳಿಬರುತ್ತಿದೆ. ಇದು ...ವೇಗೌಡ-ಕುಮಾರಸ್ವಾಮಿಯ ರೈತ ಪರ ...ದ್ಧ ಕಾಳಜಿಯೆಂದು ಯಾರೂ ಕನ್‌ಫ್ಯೂಸ್ ...ಾಡಿಕೊಳ್ಳಬೇಕಾಗಿಲ್ಲ. ಯಾಕೆಂದರೆ ಈ ...ಸಹಾಳು ಯೋಜನೆಗೆ ಜನ್ಮ ಕೊಟ್ಟದ್ದೇ ...ವೇಗೌಡರು! ಆದರೆ ಇದೇ ಹೈವೆ ನೆಪದಲ್ಲಿ ...ಸ್‌ನ ಅಶೋಕ್ ಖೇಣಿ-ಶಿವಕುಮಾರ್ ...ೇಣಿಗಳೆಂಬ ರಿಯಲ್ ಎಸ್ಟೇಟ್ ...ಧೆ ಕೋರರು ಅಮಾಯಕ ರೈತರಿಗೆ ...ಮ ಹಾಕಲು ನಿಂತಿರುವ ಬಗ್ಗೆ ಯಾವ ...ನ್‌ಫ್ಯೂಜನ್ನೂ ಇಲ್ಲ.


ದೇವೇಗೌಡ V/s ನೈಸ್‌ನ ಹೆದ್ದಾರಿ ಯುದ್ಧದ ಕೇಂದ್ರ ಬಿಂದು ಇದೇನೆ.

ಮಜಾ ವಿಚಾರ ಏನೆಂದರೆ ಕೋ-ಜಾ ಸರ್ಕಾರದ ...ಲುದಾರ ಪಕ್ಷವಾದ ಬಿಜೆಪಿಗಳಿಗೆ Frame work ...greement, MOU, ಹೈವೆ, ರಿಂಗ್‌ರೋಡ್ ...ಂಟರ್‌ಚೇಂಜ್‌ಗಳ ತಲೆಬುಡ ಒಂದೂ ಗೊತ್ತಾಗುತ್ತಿಲ್ಲ. ... ಪಕ್ಷದಲ್ಲೂ ಆರ್. ಅಶೋಕ್, ಕಟ್ಟಾ ಸುಬ್ರಮಣ್ಯ ...ಯ್ದು ತರದ ಭೂಗಳ್ಳರಿದ್ದರೂ ಅವರೆಲ್ಲಾ ತಿಮಿಂಗಿಲ ...ೇಣಿ ಎದಿರು ಪುಡಿ ಮೀನುಗಳಿದ್ದಂತೆ. ಮತ್ತೊಂದೆಡೆ ...ೇವೇಗೌಡರು "ನೈಸ್‌ನ ಭೂಗಳ್ಳತನ ತಡೆಯಲು ... ಸರ್ಕಾರ ಬಲಿ ಕೊಡಲೂ ಸಿದ್ಧ" ಎಂದು ವಾರ್ ...ಕ್ಲೇರ್ ಮಾಡಿರುವುದು ಚೆಡ್ಡಿಗಳನ್ನು ಕಂಗಾಲಾಗಿಸಿದೆ.

ಒಟ್ಟಾರೆ ಸಾರಾಂಶದಲ್ಲಿ ದೇವೇಗೌಡರಾಗಲಿ, ಬಿಜೆಪಿಗಳಾಗಲೀ ಈ ಇಡೀ ಯೋಜನೆಗೆ ವಿರುದ್ಧವಾಗಿಲ್ಲ, ಆದರೆ ರಿಂಗ್ ರೋಡ್ ಮಾಡುವ ನೆಪದಲ್ಲಿ ನೈಸ್ ಕಂಪನಿ ನಿಯಮ ಬಾಹಿರವಾಗಿ ರೈತರಿಂದ ಕಿತ್ತುಕೊಂಡಿರುವ ಸಾವಿರಾರು ಎಕರೆ ಜಮೀನು ಮತ್ತೆ ಸರ್ಕಾರಕ್ಕೆ ವಾಪಸ್ ಪಡೆಯಬಹುದು ಎಂಬಲ್ಲಿಗೆ ಬಂದು ನಿಂತಿದೆ ಅವರ ಉದ್ದೇಶ.

ನೈಸ್‌ನ ಭೂಗಳ್ಳತನ

1995 ರಲ್ಲಿ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೆ ಯೋಜನೆಯ ಐಡಿಯಾ ಚಲಾವಣೆಯಲ್ಲಿದ್ದಾಗ ಈ ನೈಸ್ ಅಸ್ತಿತ್ವದಲ್ಲೇ ಇರಲಿಲ್ಲ. ಅಮೆರಿಕದ Vanasse, Hangen Brurtlin ಹಾಗೂ ಪೂನಾದ ಕಲ್ಯಾಣಿ ಗ್ರೂಪ್‌ಗಳೆಂಬ 3 ಕಂಪನಿಗಳ ಜಂಟಿ Consortium ನೊಂದಿಗೆ ಅವತ್ತಿನ ಗೌಡರ ಸರ್ಕಾರ



20.2.95 ರಲ್ಲಿ ಒಪ್ಪಂದ ಮಾಡಿಕೊಂಡಿತ್ತು. ನಂತರ 16.1.96 ರಲ್ಲಿ ನೈಸ್ ಹುಟ್ಟಿಕೊಂಡು ಆ ಮೂರು ಕಂಪನಿಗಳೊಂದಿಗೆ ತಾನು ರಸ್ತೆ-ಟೌನ್‌ಶಿಪ್ ನಿರ್ಮಿಸುವ ಒಪ್ಪಂದ ಮಾಡಿಕೊಂಡಿತ್ತು. ಅಲ್ಲಿಂದಾಚೆಗೆ ನೈಸ್ ಹಾಗೂ ಸರ್ಕಾರಗಳು ನೇರವಾಗಿ ವ್ಯವಹರಿಸತೊಡಗಿದವು. ಖೇಣಿ ಬ್ರದರ್ಸ್ ಈ ನೈಸ್‌ನ ಮುಖ್ಯಸ್ಥರಾಗಿದ್ದರು.

ಹೈವೆ ಹೆಸರಲ್ಲಿ ಅಸಲಿ ಭೂಗಳ್ಳತನದ ದಂಧೆ ಶುರುವಾಗಿದ್ದೇ ಆಗ.

1997 ರ ಏಪ್ರಿಲ್ 3 ರಂದು ಕರ್ನಾಟಕ ಸರ್ಕಾರ ಹಾಗೂ ನೈಸ್ ನಡುವೆ ಆದ ಮೂಲ ಒಪ್ಪಂದದಲ್ಲೇ (Framework Agreement) ತನಗೆಷ್ಟು ಜಮೀನು ಬೇಕೆಂದು ನೈಸ್ ತಿಳಿಸಿತ್ತು.

ಅದರಂತೆ ಬೆಂ-ಮೈ ನಡುವಿನ 111 ಕಿ.ಮೀ. ಹೈವೆಗೆ 4528 ಎಕರೆ, ಬೆಂಗಳೂರು ಹೊರವಲಯದ 41 ಕಿ.ಮೀ. ರಿಂಗ್ ರೋಡಿಗೆ 2193 ಎಕರೆ ಹಾಗೂ 9.5 ಲಿಂಕ್ ರಸ್ತೆಗೆ 278 ಎಕರೆ ಭೂಮಿ ಬೇಕಾಗುತ್ತದೆ ಎಂದು ಇಬ್ಬರೂ ಒಪ್ಪಿಕೊಂಡಿದ್ದರು. ಉಳಿದಂತೆ ಬೆಂಗಳೂರು-ಮೈಸೂರು ನಡುವೆ ಐದು ಟೌನ್‌ಶಿಪ್ ಕಟ್ಟಲು 13194 ಎಕರೆ ಜಮೀನು ಬೇಕಾಗುತ್ತದೆ ಎಂದೂ ತೀರ್ಮಾನವಾಗಿತ್ತು. ಈ ಟೌನ್‌ಶಿಪ್‌ಗಳದ್ದೇ ಈಗ ಬೇರೆ ಕತೆಯಾಗಿದೆ. ಮೊದಮೊದಲು ಐದು ಟೌನ್‌ಶಿಪ್ ಕಟ್ಟುತ್ತೇನೆಂದು ಬಡಾಯಿ ಕೊಚ್ಚಿಕೊಂಡಿದ್ದ ಖೇಣಿ ಈಗ ಸರ್ಕಾರಿ ಹಾಗೂ ರೈತರ ಜಮೀನು ಕಿತ್ತುಕೊಂಡು 'ಎರಡೇ ಟೌನ್‌ಶಿಪ್ ಕಟ್ಟೋದು' ಎಂದು ಹೇಳುತ್ತಿದ್ದಾನೆ. ಹಾಗಾದರೆ 5 ಟೌನ್‌ಶಿಪ್‌ಗಾಗುವಷ್ಟು ಜಮೀನು ಯಾಕೆ ವಶಪಡಿಸಿಕೊಂಡೆ ಅಂತಾ ಕೇಳುವ ತಾಕತ್ತು ಈಗ ದೇವೇಗೌಡರಿಗೂ ಇಲ್ಲ, ನೈಸ್‌ನಿಂದ ಕಾಸೀಸಿಕೊಂಡು ಅಸಂಬದ್ಧ ವರದಿ ಬರೆಯುವ ಪತ್ರಕರ್ತರಿಗೂ ಇಲ್ಲ ಬಿಡಿ.

ಆದರೆ ಈಗ ವಿವಾದ ಹುಟ್ಟಿಕೊಂಡಿರುವುದು ಟೌನ್‌ಶಿಪ್ ವಿಚಾರಕ್ಕಲ್ಲ. ಮೈಸೂರು ರಸ್ತೆಯಲ್ಲಿ ನಾಳೆ ಖೇಣಿಯಷ್ಟೇ ಬೇನಾಮಿ ಜಮೀನು ಹೊಂದಿರುವ ಕುಮಾರಸ್ವಾಮಿಗಳ ಟೌನ್‌ಶಿಪ್ ಬಂದರೂ ಬರಬಹುದು. ಅದು ಬೇರೆ ವಿಚಾರ.

ಬೆಂಗಳೂರಿನಲ್ಲಿ 41 ಕಿ.ಮೀ. ಹೊರವರ್ತುಲ ರಸ್ತೆ ಕಟ್ಟಲು 2193 ಎಕರೆ ಹಾಗೂ 9.5 ಕಿ.ಮೀ.ನ ಲಿಂಕ್ ರೋಡ್‌ಗೆ (8 ಇಂಟರ್‌ಚೇಂಜ್ ಸೇರಿ) 278 ಎಕರೆ... ಹೀಗೆ ಒಟ್ಟು 2471 ಎಕರೆ ಜಮೀನಿನ ಅಗತ್ಯವಿತ್ತು ನೈಸ್ ಕಂಪನಿಗೆ. ಹಾಗೆಂದು ಮೂಲ ಒಪ್ಪಂದದಲ್ಲೂ ದಾಖಲಿಸಲಾಗಿದೆ. ಆದರೆ ಈ ಉದ್ದೇಶಕ್ಕಾಗಿ ನಡೆದಿರುವ ನೋಟಿಫಿಕೇಷನ್ ದಂಧೆಯಲ್ಲಿ ಪವಾಡಗಳೇ ಜರುಗಿವೆ. ಈ ಏರಿಯಾದಲ್ಲಿ ಬೇಕಿದ್ದ 2471 ಎಕರೆಯಲ್ಲಿ ನೈಸ್‌ಗೆ ಸರ್ಕಾರದ ಭೂಮಿ 1117.28 ಎಕರೆ ಕೊಡಲು ಒಪ್ಪಿಕೊಳ್ಳಲಾಗಿತ್ತು. ಅಂದರೆ ನೈಸ್‌ಗೆ ಬೇಕಿದ್ದ ಖಾಸಗಿ ರೈತರ ಭೂಮಿ ಕೇವಲ 1354 ಎಕರೆಗಳು ಮಾತ್ರ. ಹಾಗಂತ KIADB ಯ ಭ್ರಷ್ಟ ಅಧಿಕಾರಿಗಳು, ರಾಜಕಾರಣಿಗಳು, ಸುಮ್ಮನಾಗಲಿಲ್ಲ. ಬದಲಾಗಿ ಒಟ್ಟು 2569 ಎಕರೆ ಖಾಸಗಿ ಜಾಗ ಗುರುತಿಸಿ ಅವೆಲ್ಲವನ್ನೂ ನೈಸ್‌ಗೆ ಕೊಡಲು ನೋಟಿಫೈ ಮಾಡಿಬಿಡಲಾಗಿದೆ. ಅಂದರೆ ಹೆಚ್ಚು ಕಡಿಮೆ 1215 ಎಕರೆ ಭೂಮಿಯನ್ನು ಅನಗತ್ಯವಾಗಿ, ಹೆಚ್ಚುವರಿಯಾಗಿ ನೈಸ್‌ನ ಖದೀಮರು ನೋಟಿಫೈ ಮಾಡಿಸಿಕೊಂಡಿದ್ದಾರೆ. ಎಕರೆಗೆ 5 ಕೋಟಿ ಲಾಭ ಎಂದಿಟ್ಟುಕೊಂಡರೂ ಆರಾಮತ್ತು ಆರು ಸಾವಿರ ಕೋಟಿ ರೂಪಾಯಿಗಳ ಡೀಲ್ ಇದು. ಕಳ್ಳತನ ಅನಿಸಿಕೊಳ್ಳದ, ದರೋಡೆ ಎಂದೂ ಕೇಸಾಗದ, ಹಗಲು ದರೋಡೆ ಇದು. ಅಷ್ಟೇ ಅಲ್ಲ ಕರ್ನಾಟಕದ ಅಭಿವೃದ್ಧಿಯ ಹರಿಕಾರನೆಂಬ ಪುಗಸಟ್ಟೆ ಬಿರುದೂ ಖೇಣಿಗೆ ಇದರಿಂದ ಸಿಗುತ್ತಿದೆ.

ಈ ಹೆಚ್ಚುವರಿ 1215 ಎಕರೆ ಕಿತ್ತುಕೊಂಡಿರುವ ನೈಸ್‌ನ ಖೇಣಿಯ ಭೂಗಳ್ಳತನವೇ ಇವತ್ತಿನ ಜಗಳಕ್ಕೆ ಮೂಲ ಕಾರಣವಾಗಿದೆ. ನೆನಪಿರಲಿ ಇದು ಬೆಂಗಳೂರಿನ ಹೊರವಲಯದ ರಿಂಗ್‌ರೋಡಿನ ಜಾತಕ ಮಾತ್ರ. ಇನ್ನು ಮೈಸೂರುವರೆಗಿನ ಹೈವೆ, 5 ಟೌನ್‌ಶಿಪ್‌ಗಳ ನೆಪದಲ್ಲಿ ನೈಸ್ ಲಪಟಾಯಿಸಿರುವ ಜಮೀನಿನ ಅಸಲಿ ತನಿಖೆಯಾದಲ್ಲಿ ಇನ್ನಷ್ಟು ಕಳ್ಳತನ ಪತ್ತೆಯಾದರೂ ಆಶ್ಚರ್ಯವೇನಿಲ್ಲ. ಆದರೆ ದೇವೇಗೌಡರಾಗಲಿ, ಕುಮಾರಸ್ವಾಮಿಯಾಗಲಿ ಯಾಕೆ ಈ ಪ್ರಸ್ತಾಪ ತೆಗೆಯುತ್ತಿಲ್ಲ ಎಂಬುದೇ ಅನುಮಾನ ಹುಟ್ಟಿಸುವಂತಿದೆ. ಖೇಣಿ ಕಳ್ಳನಾದರೆ ದೇವೇಗೌಡ ಮಳ್ಳ ಎನ್ನಬೇಕಿರುವುದು ಇದಕ್ಕಾಗೇನೆ. ಸರ್ಕಾರ ಮುಂದೆ ರಿಂಗ್‌ರೋಡಿಗೆಂದು ನೈಸ್ ವಶವಾಗಿರುವ ಹೆಚ್ಚುವರಿ ಭೂಮಿಯನ್ನು ವಾಪಸ್ ಪಡೆಯಲು ಒಂದು ಮಸೂದೆಯನ್ನೇ ತರಬಹುದು. ಆದರೆ ಈ ಹಗರಣಕ್ಕೆ ನೆರವಾಗಿರುವ ಹಿರಿಯ ಸರ್ಕಾರಿ ಅಧಿಕಾರಿಗಳ ವಿಚಾರಣೆ ನಡೆಸಿ ಶಿಕ್ಷೆ ಕೊಡದಿದ್ದರೆ ಹೇಗೆ?

ಕೈಗಾರಿಕಾ ಇಲಾಖೆ ಕಾರ್ಯದರ್ಶಿಯಾಗಿದ್ದ ಎನ್. ವಿಶ್ವನಾಥನ್, ಪಿಡಬ್ಲ್ಯುಡಿಯ ಮೇಜರ್ ರಮೇಶ್, ನಗರಾಭಿವೃದ್ಧಿ ಇಲಾಖೆಯ ಗೋಪಾಲಕೃಷ್ಣ, ಕೆಐಎಡಿಬಿ ಸ್ಪೆಷಲ್ ಡಿ.ಸಿ.ಯಾಗಿದ್ದ ಅನೀಸ್ ಸಿರಾಜ್ ಇನ್ನೂ ಮುಂತಾದ ಖದೀಮರು ಈ ವಂಚನೆಯಲ್ಲಿ ಭಾಗಿಗಳಾಗಿದ್ದಾರೆ.

ಇವರನ್ನು ಮಟ್ಟ ಹಾಕುವ ತಾಕತ್ತು ದೇವೇಗೌಡರಿಗಿದೆಯಾ?

ಕೆಂಗೇರಿ ರಸ್ತೆ ಧ್ವಂಸ



ಈ ಶನಿವಾರ ರಾತ್ರಿ ಕೆಂಗೇರಿ ಹತ್ತಿರದ ಹೆಮ್ಮಿಗೆಪುರದ ರೈತರು ನೈಸ್ ನಿರ್ಮಿಸಿದ್ದ ...ಂಗ್‌ರೋಡಿನ ಒಂದು ಭಾಗವನ್ನು ಜೆಸಿಬಿ ಮೂಲಕ ಕಿತ್ತು ಹಾಕಿದ್ದಾರೆ. ನಾಳಿದ್ದು 16 ನೇ ...ಾರೀಖು ಈ ರಸ್ತೆ ಉದ್ಘಾಟನೆಯಾಗಬೇಕಿತ್ತು.

ಈ ಜೋಗೆಗೆ ಹಾಗು ಸರ್ಕಾರಕ್ಕಿಂತಾ ದೊಡ್ಡವನೆಂಬ ಭ್ರಮೆ ಇದೆ. ಏಕೆಂದರೆ ಕೆಂಗೇರಿಯಿಂದ ...ೊಸೂರು ರಸ್ತೆಗೆ ಲಿಂಕ್ ನೀಡುವ ಈ ರಿಂಗ್ ರಸ್ತೆ ಮೂಲತಃ ಒಂದು Toll ರಸ್ತೆ ...ಂದರೆ ಶುಲ್ಕ ವಸೂಲಿ ರಸ್ತೆ, ಈ ರಸ್ತೆ ಬಾಸಗಿಂಬುದರದ್ದೇ ಆದರೂ ಶುರು ಮಾಡುವ ... ಸರ್ಕಾರದೊಂದಿಗೆ ಬಸ್ಸು, ಲಾರಿ, ಕಾರುಗಳಿಗೆ ನಿಗಧಿ ಮಾಡಬೇಕಾದ ಶುಲ್ಕದ ... ವಿಚಾರಗಳನ್ನು ಚರ್ಚಿಸಿ ... [illegible] ... ಮುತ್ತಿಗೆ ... ಕೊಡಿಸಲಾಗಿದೆ!

ಪತ್ರಕರ್ತರ ಅನಕ್ಷರತೆ

ಹೈಕೋರ್ಟಿನಲ್ಲಿ ನೈಸ್‌ಗೆ ಗೆಲುವು, ಸುಪ್ರೀಂಕೋರ್ಟಿನಲ್ಲಿ ಕಾರಿಡಾರ್ ಯೋಜನೆಗೆ ಒಪ್ಪಿಗೆ ಎಂಬಿತ್ಯಾದಿ ವರದಿಗಳನ್ನು ಕನ್ನಡ ಪತ್ರಿಕೆಗಳಲ್ಲಿ ನೀವೆಲ್ಲಾ ಓದಿರುತ್ತೀರಿ. ಅವೆಲ್ಲಾ ಭೂಸ್ವಾಧೀನ ಪ್ರಕ್ರಿಯೆ ಕುರಿತಂತೆ ಇದ್ದ ಯೋಜನೆಯ ಪ್ರಸ್ತುತತೆ ಬಗ್ಗೆ ಹಾಕಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಕೇಸ್‌ಗಳು. ನಮ್ಮ ಕೆಲವು ಪತ್ರಕರ್ತರಿಗೆ ಕೋರ್ಟ್ ಆದೇಶಗಳನ್ನು ಓದಿ ಅರ್ಥೈಸಿಕೊಳ್ಳಲು ಬರುವುದಿಲ್ಲ ಎಂದು ಕಾಣುತ್ತದೆ. ಏಕೆಂದರೆ ಬೆಂಗಳೂರು-ಮೈಸೂರು ಹೈವೆ, ರಿಂಗ್‌ರೋಡ್ ಕುರಿತಂತೆ ಸೋಮಶೇಖರ್ ರೆಡ್ಡಿ ಕೇಸ್ (ರಿಟ್ ಅರ್ಜಿ 29221/97 ಆದೇಶ 21.9.1998) ನ್ಯಾಯಮೂರ್ತಿ ಸೋಧಿಯವರ ಆದೇಶ (ದಿನಾಂಕ 3.5.2005) ಹಾಗೂ ಸುಪ್ರೀಂ ಕೋರ್ಟ್ ಆದೇಶ (20.4.2006) ಇವೆಲ್ಲದರಲ್ಲೂ ಅತ್ಯಂತ ಖಚಿತವಾಗಿ ಕೋರ್ಟ್ ಹೇಳಿರುವುದೇನೆಂದರೆ ನೈಸ್ ಹಾಗೂ ಸರ್ಕಾರಗಳು ಯೋಜನೆಯ ಅನುಷ್ಠಾನದಲ್ಲಿ ಮೂಲ ಒಪ್ಪಂದಕ್ಕೆ ಬದ್ಧವಾಗಿರಬೇಕೆಂದು!

ಆ ಅರ್ಥದಲ್ಲಿ ನೈಸ್ 5 ಟೌನ್‌ಶಿಪ್ ಕಟ್ಟಲೇಬೇಕಾಗುತ್ತದೆ ಹಾಗೂ ಅಗತ್ಯಕ್ಕಿಂತಾ ಹೆಚ್ಚು ಭೂಮಿ ಕದಿಯುವಂತಿಲ್ಲ. ಈಗ ನೈಸ್‌ನ ಖೇಣಿ ಈ ಮೂಲ ಒಪ್ಪಂದವನ್ನು ಉಲ್ಲಂಘಿಸಿ ಸಾವಿರಾರು ... [illegible] ... ICICI ಬ್ಯಾಂಕಿನ ... ಕೋಟಿ ಹಣ ಸಾಲವಾಗಿ ಪಡೆದಿದ್ದಾನೆ. ರಸ್ತೆಗೆಂದು ಭೂಮಿ ವಶಪಡಿಸಿಕೊಂಡು ಹತ್ತಾರು ಖಾಸಗಿ ಕಂಪನಿಗಳಿಗೆ ಅದೇ ಭೂಮಿ ಮಾರಿಕೊಂಡಿದ್ದಾನೆ. ಇವೆಲ್ಲಾ ಮೂಲ ಒಪ್ಪಂದದ ಉಲ್ಲಂಘನೆಗಳೇ ಆಗಿವೆ.

ವಾಸ್ತವವಾಗಿ ಈ ಖೇಣಿ ಕೋರ್ಟಿನಲ್ಲಿ ನಾಲ್ಕು ರೀತಿಯ ಪರಿಹಾರ ಕೋರಿದ್ದ.

ಕೆ.ಸಿ. ರೆಡ್ಡಿ ಕಮಿಟಿಯನ್ನು ರದ್ದು ಮಾಡಬೇಕೆಂಬ ಬೇಡಿಕೆ ಅದರಲ್ಲಿ ಒಂದಾಗಿತ್ತು. ಕೋರ್ಟ್ ಇದನ್ನು ಒಪ್ಪಿಕೊಂಡಿತ್ತು. ಅದರೆ ಒಟ್ಟಾರೆ ಯೋಜನೆ ಹೆಸರಲ್ಲಿ ತನ್ನ ಕೈ ಸೇರಿರುವ ಹೆಚ್ಚುವರಿ ಭೂಮಿ ಅಧಿಕೃತವಾಗಬೇಕು, ರಿಂಗ್ ರೋಡಿಗೆಂದು ವಶಪಡಿಸಿಕೊಂಡಿರುವ ಭೂಮಿಯಲ್ಲಿ ವಾಣಿಜ್ಯ ವಸತಿ ಚಟುವಟಿಕೆ ನಡೆಸಲು ಅವಕಾಶ ನೀಡಬೇಕು ಎಂಬಿತ್ಯಾದಿ ಮನವಿಗಳಿಗೆ ಕೋರ್ಟ್ ಕಿವಿಗೊಟ್ಟಿಲ್ಲ. ಇವೆಲ್ಲ Frame work agreement ನಿಂದಾಚೆಗಿನ ಅಂಶಗಳೆಂಬ ಕಾರಣಕ್ಕೆ. ನಮ್ಮ ಪತ್ರಕರ್ತರು ಪಾಪ, ಖೇಣಿಯಿಂದ ... [illegible] ... ವರದಿ ಬರೆಯುತ್ತಿದ್ದಾರೆ ... [illegible]

ನರ್ಸಿಂಗ್ ಶಿಕ್ಷಣದ ಮಾಫಿಯಾ

ನರ್ಸಿಂಗ್ ಶಾಲಾ-ಕಾಲೇಜುಗಳು ನಾಯಿಕೊಡೆಗಳಂತೆ ಹುಟ್ಟಿಕೊಳ್ಳಲು ನೀತಿಗೆಟ್ಟ ಸರ್ಕಾರದ ಅನೀತಿಗಳೇ ಕಾರಣವಾಗಿವೆ. ಅದರಲ್ಲೂ ಸಕ್ರಿಯ ರಾಜಕಾರಣದಲ್ಲಿ ಪ್ರಭಲವಾಗಿರುವವರೇ ಹೆಚ್ಚಾಗಿ ಇಂತಹ ಕೈಕಾಲುಗಳಿಲ್ಲದ ಹೆಳವ ಶಾಲೆಗಳನ್ನು ಸ್ಥಾಪಿಸಿ ಲೂಟಿಗಿಳಿದಿದ್ದಾರೆ. ಅನೇಕ ಕನಸುಗಳನ್ನು ಹೊತ್ತು ಈ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಭವಿಷ್ಯ ಮಾತ್ರ ಭೀಕರವಾಗಲಿದೆ. ಏಕೆಂದರೆ ಇನ್ನು ಒಂದೆರಡು ತಿಂಗಳಲ್ಲಿ ಪರೀಕ್ಷೆಗಳು ಪ್ರಾರಂಭವಾಗಲಿವೆಯಾದರೂ ಪಾಠಗಳು ಪೂರ್ಣಗೊಳ್ಳುವ ಸಾಧ್ಯತೆಗಳು ಇಲ್ಲವೇ ಇಲ್ಲ.

ದಾವಣಗೆರೆ


ನರ್ಸಿಂಗ್ ಶಾಲಾ-ಕಾಲೇಜುಗಳ ಅಸಮರ್ಥತೆಯ ಕುರಿತು ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ರಚಿತವಾಗಿದ್ದ ತನಿಖಾ ಸಮಿತಿಯ ವರದಿಯಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ತರಬೇತಿ ಲಭ್ಯವಾಗದೇ ಇರುವುದನ್ನು ಹಾಗೂ ನರ್ಸಿಂಗ್ ಕಾಲೇಜುಗಳು ಮೂಲಭೂತ ಸೌಲಭ್ಯಗಳನ್ನು ಹೊಂದಿಲ್ಲವಿರುವುದನ್ನು ಬೆಳಗೆ ತಂದು ಅಂಥ ಶಿಕ್ಷಣ ಸಂಸ್ಥೆಗಳಿಗೆ ಮುಂದಿನ ವರ್ಷದಿಂದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳದಿರುವಂತೆ ನಿರ್ಬಂಧ ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿ, ಎರಡು ವರ್ಷಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳದೇ ಇದ್ದರೆ ಅಂತಹ ಶಾಲೆಗಳ ಮಾನ್ಯತೆಯನ್ನು ರದ್ದುಗೊಳಿಸಬಹುದೆಂದೂ ಹೇಳಿದೆ. ತನಿಖಾ ಸಮಿತಿಯು ಹೀಗೆ ವರದಿ ಮಾಡಿದ್ದರೂ ಕೂಡಾ ನರ್ಸಿಂಗ್ ಶಾಲಾ-ಕಾಲೇಜುಗಳು ನಾಯಿಕೊಡೆಗಳಂತೆ ಹುಟ್ಟಿಕೊಳ್ಳಲು ನೀತಿಗೆಟ್ಟ ಸರ್ಕಾರದ ಅನೀತಿಗಳೇ ಕಾರಣವಾಗಿವೆ. ಅದರಲ್ಲೂ ಸಕ್ರಿಯ ರಾಜಕಾರಣದಲ್ಲಿ ಪ್ರಭಲವಾಗಿರುವವರೇ ಹೆಚ್ಚಾಗಿ ಇಂತಹ ಕೈಕಾಲುಗಳಿಲ್ಲದ ಹೆಳವ ಶಾಲೆಗಳನ್ನು ಸ್ಥಾಪಿಸಿ ಲೂಟಿಗಿಳಿದಿದ್ದಾರೆ.

ಈ ಜಿಲ್ಲೆಯಲ್ಲಿನ ಒಟ್ಟು ಒಂಬತ್ತು ನರ್ಸಿಂಗ್ ತರಬೇತಿ ಶಾಲೆಗಳಲ್ಲಿ ಒಂದು ಸರ್ಕಾರಿ ಶಾಲೆಯಾದರೆ ಉಳಿದ ಎಂಟು ಖಾಸಗೀ ಶಾಲೆಗಳೇ. ಅನೇಕ ಕನಸುಗಳನ್ನು ಹೊತ್ತು ಈ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಭವಿಷ್ಯ ಮಾತ್ರ ಭೀಕರವಾಗಲಿದೆ. ಏಕೆಂದರೆ ಇನ್ನು ಒಂದೆರಡು ತಿಂಗಳಲ್ಲಿ ಪರೀಕ್ಷೆಗಳು ಪ್ರಾರಂಭವಾಗಲಿವೆಯಾದರೂ ಪಾಠಗಳು ಪೂರ್ಣಗೊಳ್ಳುವ ಸಾಧ್ಯತೆಗಳು ಇಲ್ಲವೇ ಇಲ್ಲ. ಕಾರಣವೇನೆಂದರೆ ಖಾಯಂ ಟ್ಯೂಟರುಗಳನ್ನು ನೇಮಿಸಿಕೊಳ್ಳದಿರುವುದರಿಂದ ಬಹಳ ಕಡಿಮೆ ಸಂಬಳದಿಂದ ಬದುಕಲು ಸಾಧ್ಯವಾಗದೇ ಟೆಂಪರರಿ ಟ್ಯೂಟರುಗಳು ಶಾಲೆಬಿಟ್ಟು ಹೊರನಡೆದಿರುವಾಗ ಇನ್ನೆಲ್ಲಿಂದ ಪಾಠಗಳು ಪೂರ್ಣಗೊಳ್ಳುತ್ತವೆ? ವಿದ್ಯಾರ್ಥಿಗಳಿಂದ ಹೇರಳವಾಗಿ ಡೊನೇಶನ್ ಪಡೆದುಕೊಳ್ಳುವುದಲ್ಲದೆ, ಕ್ಲಿನಿಕಲ್, ಕಮ್ಯೂನಿಟಿ, ವಿಸಿಟಿಂಗ್, ಬಸ್ ಬಾಡಿಗೆ ಮತ್ತಿತರ ಹೆಸರುಗಳಲ್ಲಿ ಫೀಜುಗಳನ್ನು ವಸೂಲಿ ಮಾಡಲಾಗುತ್ತಿದೆಯಾದರೂ ಬಿಕ್ಷೆ ಕೊಟ್ಟಂತೆ ಕೆಲವು ನೂರು ರೂ.ಗಳನ್ನು ಕೊಟ್ಟು ತಾತ್ಕಾಲಿಕವಾಗಿ ಟ್ಯೂಟರುಗಳನ್ನು ನೇಮಿಸಿಕೊಳ್ಳುವುದರಿಂದ ಯಾವ ಟ್ಯೂಟರು ಕೂಡಾ ವರ್ಷ ಪೂರ್ತಿ ಪಾಠ ಮಾಡುವ ಮನಸ್ಥಿತಿಯನ್ನು ಉಳಿಸಿಕೊಳ್ಳಲಾರದಂತಾಗಿ ಹೇಳದೇ ಕೇಳದೇ ಬಿಟ್ಟು ಹೋಗುತ್ತಿರುವುದು ಪಾಠಗಳು ಪೂರ್ಣಗೊಳ್ಳದಿರುವುದಕ್ಕೆ ಪ್ರಧಾನ ಕಾರಣವಾಗಿದೆ.

ಈ ಸಂಬಂಧ ಇಲ್ಲಿನ ಮೂರು ನರ್ಸಿಂಗ್ ಶಾಲೆಗಳ ಉದಾಹರಣೆಗಳನ್ನು ಮಾತ್ರ ನೀಡಿ ವಿಶ್ಲೇಷಿಸಿದರೆ ಇಡೀ ಎಂಟು ಖಾಸಗಿ ನರ್ಸಿಂಗ್ ಶಾಲೆಗಳ ವಾಸ್ತವ ಪರಿಸ್ಥಿತಿ ಅರ್ಥವಾಗಬಹುದೆನ್ನಿಸುತ್ತದೆ.







ಬಾಪೂಜಿ ನರ್ಸಿಂಗ್ ಶಾಲೆ ಮತ್ತು ಎಸ್.ಎಸ್. ನರ್ಸಿಂಗ್ ಶಾಲೆ


ದಾವಣಗೆರೆ ಕ್ಷೇತ್ರದ ಹಾಲಿಶಾಸಕ ಶಾಮನೂರು ಶಿವಶಂಕರಪ್ಪನೇ ಇಲ್ಲಿನ ಖಾಸಗೀ ಶಿಕ್ಷಣ ಕ್ಷೇತ್ರದ ದೊರೆ. ಪ್ರೈಮರಿ ಶಾಲೆಯಿಂದ ವೈದ್ಯಕೀಯ-ಇಂಜಿನಿಯರಿಂಗ್ ಕಾಲೇಜುಗಳವರೆಗೆ, ಡಿ.ಎಡ್(TCH)ನಿಂದ ನರ್ಸಿಂಗ್ ಕಾಲೇಜುಗಳವರೆಗೆ ವೃತ್ತಿ ಶಿಕ್ಷಣದ ಗುತ್ತಿಗೆ ಹಿಡಿದ ಈತನವೇ ಬಾಪೂಜಿ ನರ್ಸಿಂಗ್ ಸ್ಕೂಲ್ ಮತ್ತು ಎಸ್.ಎಸ್. ನರ್ಸಿಂಗ್ ಸ್ಕೂಲುಗಳೆಂಬ ಎರಡು ನರ್ಸಿಂಗ್ ಶಾಲೆಗಳಿವೆ. ಪ್ರತಿಷ್ಠಿತ ಬಾಪೂಜಿ ವಿದ್ಯಾಸಂಸ್ಥೆಯೆಂಬ ಕೌದಿಯಲ್ಲಿನ ತೇಪೆಗಳಾಗಿ ಇವುಗಳಿರುವುದರಿಂದ ಸಹಜವಾಗಿ ಇಲ್ಲಿ ಸೇರಲು ವಿದ್ಯಾರ್ಥಿಗಳು ಮುಗಿಬೀಳುತ್ತಾರೆ. ಕರ್ನಾಟಕದವರಿಗೆ 20 ಸಾವಿರ ರೂ. ಡೊನೇಶನ್ನು, 19 ಸಾವಿರ ರೂ. ಶುಲ್ಕ, ಕೇರಳದವರಾಗಿದ್ದರೆ 50 ಸಾವಿರ ರೂ.ಗಳವರೆಗೆ ಡೊನೇಶನನ್ನು ವಸೂಲಿ ಮಾಡಲಾಗುತ್ತದೆ. BSc ನರ್ಸಿಂಗ್‌ಗೆ 1 ಲಕ್ಷದವರೆಗೆ ಡೊನೇಶನ್, 40 ಸಾವಿರ ಶುಲ್ಕವನ್ನು ವಸೂಲಿ ಮಾಡಲಾಗುತ್ತದೆ. ಮೂಲಭೂತ ಸೌಲಭ್ಯಗಳಿಗೆ ಇಲ್ಲಿ ಕೊರತೆ ಇರದಿದ್ದರೂ ಇಲ್ಲಿನ ಮುಖ್ಯ ಸಮಸ್ಯೆಯೆಂದರೆ ಒಂದು ವರ್ಷದ ಅವಧಿಗೆ ಬಾಂಡನ್ನು ಬರೆಸಿಕೊಂಡು ಟ್ಯೂಟರುಗಳನ್ನು ನೇಮಕ ಮಾಡಿಕೊಳ್ಳುವುದರಿಂದ ಪ್ರತಿವರ್ಷ ಟ್ಯೂಟರುಗಳ ಬದಲಿ ಸಾಮಾನ್ಯವಾಗಿರುತ್ತದೆ. ಪ್ರತಿಷ್ಠಿತ ಸಂಸ್ಥೆಯಲ್ಲಿ ಕೆಲಸ ಮಾಡಿದ ಪ್ರಮಾಣಪತ್ರವನ್ನು ಪಡೆದುಕೊಳ್ಳುವುದಕ್ಕಾಗಿ ಕಡಿಮೆ ಸಂಬಳಕ್ಕೆ ಟ್ಯೂಟರುಗಳು ಬಲಿಯಾದರೆ, ಅನನುಭವಿ ಟ್ಯೂಟರುಗಳಿಂದಾಗಿ ವಿದ್ಯಾರ್ಥಿಗಳ ಭವಿಷ್ಯವೇ ಬಲಿಯಾಗುತ್ತಿದೆ. ನರ್ಸಿಂಗ್ ತರಬೇತಿ ಮುಗಿದ ಮೇಲೆ ಒಂದು ವರ್ಷ ಇವರ ಆಸ್ಪತ್ರೆಗಳಲ್ಲಿ ಕೆಲಸ ಮಾಡಲೇಬೇಕೆಂಬ ಕರಾರು ಪತ್ರಕ್ಕೆ ವಿದ್ಯಾರ್ಥಿಗಳಿಂದ ಸಹಿ ತೆಗೆದುಕೊಳ್ಳುವುದರಿಂದ ವಿದ್ಯಾರ್ಥಿಗಳು ಕೇವಲ 1500/- ರೂ.ಗಳಿಗೆ ಕತ್ತೆ ಚಾಕರಿ ಮಾಡಬೇಕಾಗುತ್ತದೆ.

ಮೊದಲ ವರ್ಷದಿಂದ ಮೂರನೇ ವರ್ಷದವರೆಗೆ ನರ್ಸಿಂಗ್ ತರಬೇತಿ ಶಾಲೆಗಳಲ್ಲಿ 500 ನರ್ಸಿಂಗ್ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ಶೇ.70ರಷ್ಟು ಕೇರಳದ ವಿದ್ಯಾರ್ಥಿಗಳೇ ಇದ್ದಾರೆ. ಶಂಕರಪ್ಪನ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕೂಡ ಹೊರ ರಾಜ್ಯದ ವಿದ್ಯಾರ್ಥಿಗಳೇ ಅಧಿಕ ಸಂಖ್ಯೆಯಲ್ಲಿದ್ದು ಇವರೇ ಡೊನೇಶನ್ ಮೂಲದ ಒರತೆಗಳಾಗಿದ್ದಾರೆ. ಶಿಕ್ಷಣವೆಂಬುದು ಜ್ಞಾನಾರ್ಜನೆಗಾಗಿ ಅಥವಾ ಜನಸಾಮಾನ್ಯರ ಉದ್ಧಾರಕ್ಕಾಗಿ ಅಲ್ಲ-ವ್ಯಾಪಾರಕ್ಕೋಸ್ಕರವಾಗಿ, ವ್ಯಾಪಾರವನ್ನೇ ಮಾಡಬೇಕೆಂಬ ಅಘೋಷಿತ ನೀತಿಪಾಠವು ಮಾತ್ರ ಶಂಕರಪ್ಪನ ವೃತ್ತಿಶಿಕ್ಷಣ ಸಂಸ್ಥೆಗಳಿಂದ ದಂಡಿಯಾಗಿ ಸಿಗುತ್ತದೆ.

ಶಿಲ್ಪ ಸ್ಕೂಲ್ ಆಫ್ ನರ್ಸಿಂಗ್ ಹಾಗೂ ಶಿಲ್ಪ ನರ್ಸಿಂಗ್ ಕಾಲೇಜು

ಜೆ.ಸಿ. ಬಸವರಾಜು ಶಾಮನೂರು ಶಿವಶಂಕರಪ್ಪನ ಬಾಪೂಜಿ ಆಸ್ಪತ್ರೆಯಲ್ಲಿ ಕುಖ್ಯಾತ ಕೀಲು-ಮೂಳೆ ವೈದ್ಯ. ಸಾಲದ್ದಕ್ಕೆ ರಾಜೀವ್ ಗಾಂಧಿ ಮೆಡಿಕಲ್ ಕಾಲೇಜ್‌ನ ಕೌನ್ಸಿಲಿಂಗ್ ಬಾಡಿ ಮೆಂಬರ್. ಈತನೇ ಈ ಸಂಸ್ಥೆಗಳ ಮಾಲೀಕ. ಗ್ರಂಥಾಲಯ, ಪ್ರಯೋಗಶಾಲೆ ಹಾಗೂ ಟ್ಯೂಟರುಗಳೇ ಇಲ್ಲದ ನರ್ಸಿಂಗ್ ಶಾಲಾ-ಕಾಲೇಜುಗಳನ್ನು ಈತ ನಡೆಸುತ್ತಿದ್ದಾನೆ. ಈ ಹಿಂದೆ ಚಿಗಟೇರಿ ಜನರಲ್ ಆಸ್ಪತ್ರೆಯಲ್ಲಿದ್ದ ಗಂಜಿಗಟ್ಟಿ ಎಂಬಾತ ಈ ನರ್ಸಿಂಗ್ ಶಾಲೆಯ ಆಡಳಿತಾಧಿಕಾರಿಯಾಗಿದ್ದುಕೊಂಡು ಇಲ್ಲಿನ ವಿದ್ಯಾರ್ಥಿಗಳ ಜೀವ ಹಿಂಡುವುದನ್ನು ಬಿಟ್ಟರೆ ಬೇರೇನೂ ಮಾಡುತ್ತಿಲ್ಲ, ಶಿಲ್ಪ ನರ್ಸಿಂಗ್ ಶಾಲೆಯಲ್ಲಿ ಒಂದೇ ವರ್ಷದೊಳಗೆ ಮೂರು ಮಂದಿ ಪ್ರಾಂಶುಪಾಲರುಗಳು ಬದಲಿಯಾಗಿ ಈಗ ಒಂದು ವಾರದ ಹಿಂದೆ ಹೊಸ ಪ್ರಾಂಶುಪಾಲರು ನೇಮಕಗೊಂಡಿದ್ದಾರೆ. ಆಗಸ್ಟ್ ತಿಂಗಳಲ್ಲಿ ಶಾಲೆ ಪ್ರಾರಂಭವಾಗಿದ್ದರೂ, ಇಲ್ಲಿಯವರೆಗೂ ಪಾಠಗಳು ಪೂರ್ಣಗೊಂಡಿಲ್ಲ, ಆದರೆ ಜುಲೈ ತಿಂಗಳಲ್ಲೇ ಎದುರಾಗುತ್ತಿರುವ ಪರೀಕ್ಷೆಗಳು ವಿದ್ಯಾರ್ಥಿಗಳ ಎದೆಯಲ್ಲಿ ನಡುಕವನ್ನು ಹುಟ್ಟಿಸುತ್ತಿವೆ.

ಇಲ್ಲಿನ ಫೀ ಸ್ಟ್ರಕ್ಚರಂತೂ ಯಾವುದೇ ಮುನ್ಸೂಚನೆ ಇಲ್ಲದೆ ವರ್ಷಕ್ಕೊಮ್ಮೆ ಆಕಾಶಕ್ಕೆ ಎಗರುತ್ತಿದೆ. 2004ರಲ್ಲಿ 14 ಸಾವಿರ ಇದ್ದ ಶುಲ್ಕ ಈಗ 28 ಸಾವಿರಕ್ಕೆ ಏರಿನಿಂತಿದೆ. ಈ ರೀತಿಯ ಶುಲ್ಕದ ಏರಿಕೆಯಿಂದಾಗಿ ಹಲವಾರು ವಿದ್ಯಾರ್ಥಿಗಳು ತಮ್ಮ ಓದನ್ನು ಅರ್ಧಕ್ಕೆ ಬಿಟ್ಟಿದ್ದಾರೆ. ನರ್ಸಿಂಗ್ ಓದುವ ಹುಡುಗಿಯರಿಗಾಗಿ ಇರುವ ಹಾಸ್ಟೆಲ್‌ನಲ್ಲಿ ಮನುಷ್ಯರು ತಿನ್ನಲಾಗದಂತಹ ಆಹಾರವನ್ನು ಕೊಡುತ್ತಿದ್ದರೂ ಕೂಡಾ ಮೆಸ್‌ಬಿಲ್ ತಿಂಗಳಿಗೆ ರೂ. 1600 ರಿಂದ 2000ಗಳ ವರೆಗೆ ಬರುತ್ತದೆ. ಕೇರಳ-ಕರ್ನಾಟಕದ ಹುಡುಗಿಯರ ಮಧ್ಯೆ ವಿಪರೀತ ತಾರತಮ್ಯಗಳನ್ನು ಮಾಡುತ್ತಾರಲ್ಲದೇ ಕೇರಳದ ಆಹಾರಪದ್ಧತಿಗೆ ಕರ್ನಾಟಕದ ಹುಡುಗಿಯರು ಅನಿವಾರ್ಯವಾಗಿ ಒಗ್ಗಿಕೊಳ್ಳಬೇಕಾಗುತ್ತದೆ. ಆದರೆ ನಾಲ್ಕು ಮಂದಿ ಇರಬಹುದಾದ ರೂಮಿನಲ್ಲಿ ಎಂಟು ಮಂದಿಯನ್ನು ಇಡಲಾಗಿದೆ. ವಿದ್ಯಾರ್ಥಿನಿಯರ ಮೇಲೆ ಹೇರುವ ಬಿಲ್ಲುಗಳಲ್ಲಿ ಕರೆಂಟು ಬಿಲ್ಲು ಕೂಡಾ ಒಂದು. ಕರೆಂಟು ಬಿಲ್ಲನ್ನು ತೋರಿಸದೆ ಇಂತಿಷ್ಟು ಕೊಡಬೇಕೆಂದು ವಸೂಲಿ ಮಾಡುತ್ತಾರೆ. ಈ ವಿಷಯದಲ್ಲಿ ಪಾರದರ್ಶಕತೆಯನ್ನು ಪ್ರದರ್ಶಿಸದೆ ನರ್ಸಿಂಗ್ ಹೋಂ ಬಿಲ್ಲನ್ನೂ ವಿದ್ಯಾರ್ಥಿಗಳ ಮೇಲೆ ಹೇರಲಾಗುತ್ತಿದೆ ಎಂದು ವಿದ್ಯಾರ್ಥಿನಿಯರು ಗೋಳಿಡುತ್ತಾರೆ. ಪಠ್ಯಪುಸ್ತಕಗಳನ್ನು ತಾವೇ ಸರಬರಾಜು ಮಾಡುತ್ತೇವೆಂದು ಆರಂಭದಲ್ಲಿಯೇ ಸಾವಿರ ಸಾವಿರ ಹಣವನ್ನು ಮ್ಯಾನೇಜ್‌ಮೆಂಟಿನವರು ವಸೂಲಿ ಮಾಡಿ ಹೊಸ ಪಠ್ಯಕ್ರಮಕ್ಕೆ ಹೊಂದಿಕೊಳ್ಳದ ಮೂರ್‍ನಾಲ್ಕು ವರ್ಷಗಳಷ್ಟು ಹಳೆಯ ಪಠ್ಯ ಪುಸ್ತಕಗಳನ್ನು ಕೊಡುತ್ತಾರೆ. ಮೊದಲನೆ ಮತ್ತು ಎರಡನೇ ವರ್ಷದ ನರ್ಸಿಂಗ್ ತರಬೇತಿಯಲ್ಲಿ ಸುಮಾರು 90 ಮಂದಿ ವಿದ್ಯಾರ್ಥಿಗಳಿದ್ದು, ಒಬ್ಬ ವಿದ್ಯಾರ್ಥಿಗೆ ಕನಿಷ್ಠ ಮೂರು ರೋಗಿಗಳ ಬೆಡ್ ಬೇಕೆಂಬ ನಿಯಮದಂತೆ 270 ಬೆಡ್ ಇರುವ ಸ್ವಂತ ಆಸ್ಪತ್ರೆ ಬೇಕಾಗುತ್ತದೆ. ಈ ನಿಯಮವನ್ನು ಸರಿತೂಗಿಸಲು ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯೆಂಬ ದನಗಳ ದೊಡ್ಡಿಯಂತಿರುವ ದೊಡ್ಡ ಆಸ್ಪತ್ರೆಯೊಂದಿಗೆ ಅಟ್ಯಾಚ್‌ಮೆಂಟ್ ಮಾಡಿಕೊಂಡು ನರ್ಸಿಂಗ್ ತರಬೇತಿ ಶಾಲೆಯನ್ನು ಲೀಗಲೈಸ್ ಮಾಡಿಕೊಳ್ಳಲಾಗಿದೆ.



ಶಾಮನೂರು ಶಿವಶಂಕರಪ್ಪ

ಹೊಯ್ಸಳ ವಿದ್ಯಾಸಂಸ್ಥೆ

ಶ್ರೀ ಕನ್ನಿಕಾ ಪರಮೇಶ್ವರಿ ಡೈಮಂಡ್ ಜುಬಿಲಿ ಸ್ಕೂಲ್ ಆಫ್ ನರ್ಸಿಂಗ್ ಎಂಬ ನರ್ಸಿಂಗ್ ಶಾಲೆಯನ್ನು ಹೊಯ್ಸಳ ವಿದ್ಯಾಸಂಸ್ಥೆಯ ಸ್ಥಾಪಕ ಡಾ.ವೈ.ರಾಮಪ್ಪ ಮೂರು ವರ್ಷಗಳ ಕೆಳಗೆ ಸ್ಥಾಪಿಸಿದ್ದಾನೆ. ವೈ. ರಾಮಪ್ಪ ಜಿಲ್ಲಾ ಪಂಚಾಯ್ತಿಯ ಸದಸ್ಯ ಮತ್ತು ಜಿಲ್ಲಾ ಪಂಚಾಯ್ತಿಯ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷ. ತನ್ನ ಶಾಲಾ-ಕಾಲೇಜಿನ ಮಾಸ್ತರುಗಳನ್ನೇ ಪ್ರಚಾರಕ್ಕಿಳಿಸಿ ಬಿ.ಎಂ. ಹನುಮಂತಪ್ಪನ ವಿರುದ್ಧ ಆನಗೋಡು ಕ್ಷೇತ್ರದಿಂದ ಗೆದ್ದು ಬಂದಿದ್ದಾನೆ. ಈ ಹಿಂದೆ ಶಿವಶಂಕರಪ್ಪನ ಎ.ವಿ.ಕೆ. ಮಹಿಳಾ ಕಾಲೇಜಿನಲ್ಲಿ ಇತಿಹಾಸ ವಿಷಯದ ಉಪನ್ಯಾಸಕನಾಗಿದ್ದವನು ತನ್ನ ಹುದ್ದೆಗೆ ರಾಜೀನಾಮೆ ನೀಡಿ ವೃತ್ತಿಪರ ರಾಜಕಾರಣಿಯಾಗಿ ಬದಲಾಗಿದ್ದಾನೆ.

ಈಗ ಮಾಯಕೊಂಡ ವಿಧಾನಸಭಾ ಕ್ಷೇತ್ರವು ಮೀಸಲು ಕ್ಷೇತ್ರವಾಗಿ ವಿಂಗಡಣೆಯಾಗಿದೆ. ಹಾಗಾಗಿ ರಾಮಪ್ಪ ಈ ಕ್ಷೇತ್ರದ ಶಾಸಕನಾಗಬೇಕೆಂಬ ದೂರಾಲೋಚನೆಯಿಂದಲೇ ಈ ವಿಧಾನಸಭಾ ಕ್ಷೇತ್ರದ ಮೇಲೆ ಹದ್ದಿನ ಕಣ್ಣಿಟ್ಟು ಪತ್ರಿಕೆಗಳಲ್ಲಿ ದಿನನಿತ್ಯ ಪ್ರಚಾರವನ್ನು ಗಿಟ್ಟಿಸುವ ಫೋಜುಗಳನ್ನು ನೀಡುತ್ತಿದ್ದಾನೆ. ಇದರ ಅಂಗವಾಗಿಯೇ ಜಿಲ್ಲೆಯ ಒಂದಿಲ್ಲೊಂದು ಆಸ್ಪತ್ರೆ ಹಾಗೂ ಶಾಲೆಗಳಿಗೆ ಭೇಟಿಕೊಟ್ಟು ಅಲ್ಲಿನ ಅವ್ಯವಸ್ಥೆಯ ಬಗ್ಗೆ ಪುಟಗಟ್ಟಲೆ ಭಾಷಣ ಬಿಗಿದು ಸಣ್ಣ ಪುಟ್ಟ ನೌಕರರ ಮೇಲೆ ಕ್ರಮ ಜರುಗಿಸುವ ಈತ ಇತರರ ಮೊಡವೆಗಳನ್ನು ಹೆಕ್ಕಿ ತನ್ನದೇ ವಿದ್ಯಾಸಂಸ್ಥೆಯ ರಣಗಾಯಗಳನ್ನು ಮುಚ್ಚಿಟ್ಟುಕೊಳ್ಳುತ್ತಿದ್ದಾನೆ.


ನಗರದ DCM ಟೌನ್‌ಶಿಫ್‌ನಲ್ಲಿರುವ ಹೊಯ್ಸಳ ವಿದ್ಯಾಸಂಸ್ಥೆಯ ಒಂದೇ ಕಟ್ಟಡದಲ್ಲಿ ಡಿ.ಎಡ್., ಬಿ.ಎಡ್ ಹಾಗೂ ನರ್ಸಿಂಗ್ ಶಾಲೆಗಳ ಟೆಂಪರರಿ ಬೋರ್ಡ್‌ಗಳಿರುವ ಶಾಲೆಗಳನ್ನು ರಾಮಪ್ಪ ನಡೆಸುತ್ತಿದ್ದಾನೆ. ಉದಾಹರಣೆಗೆ ಬಿ.ಎಡ್ ಕಾಲೇಜಿಗೆ ತನಿಖಾ ತಂಡ ಬಂದರೆ ಬಿ.ಎಡ್ ಕಾಲೇಜಿನ ಬೋರ್ಡು ರಾರಾಜಿಸುತ್ತದೆ. ಇನ್ನುಳಿದ ಬೋರ್ಡುಗಳು ಬಕ್ಕ ಬೋರಲು ಮಲಗಿರುತ್ತವೆ! ಅಂದರೆ ಶಾಲಾ-ಕಾಲೇಜುಗಳ ಈ ಮೂರರ ಪೈಕಿ ಯಾವುದಾದರೊಂದರ ತನಿಖೆಗಾಗಿ ತನಿಖಾ ತಂಡವು ಬಂದಾಗ ಸಂಬಂಧಿಸಿದ ಬೋರ್ಡನ್ನು ಮಾತ್ರ ತಗುಲಿಸಿ ಉಳಿದ ಬೋರ್ಡುಗಳನ್ನು ತೆಗಿಸಿಹಾಕಲಾಗುತ್ತದೆ. ಹಾಗೆಯೇ ತನಿಖೆಗೆ ಬಂದ ಶಾಲೆಯನ್ನು ಹೊರತುಪಡಿಸಿ ಉಳಿದವುಗಳಿಗೆ ರಜೆಯನ್ನು ಘೋಷಿಸಲಾಗುತ್ತದೆ. ಇನ್ನೂ ಘೋರವೆಂದರೆ ತನಿಖಾ ತಂಡದವರ ಮುಂದೆ ಸೀನಿಯರ್ ವಿದ್ಯಾರ್ಥಿಗಳನ್ನೇ ಟ್ಯೂಟರುಗಳೆಂದು ಹಾಜರು ಪಡಿಸಲಾಗುತ್ತದೆ. ಈ ಕಟ್ಟಡದ ಪಕ್ಕದಲ್ಲೇ ಶೌಚಾಲಯದಂತ ಚಿಕ್ಕ ಚಿಕ್ಕ ರೂಮುಗಳಲ್ಲಿ ಒಂದನೇ ತರಗತಿಯಿಂದ 7ನೇ ತರಗತಿಯವರೆಗೆ ಪ್ರಾಥಮಿಕ ಶಾಲೆಯನ್ನು ರಾಮಪ್ಪ ನಡೆಸುತ್ತಾನೆ.

ಪ್ರತ್ಯೇಕವಾಗಿ ರಾಮಪ್ಪನ ನರ್ಸಿಂಗ್ ಶಾಲೆಯ ಬಗ್ಗೆಯೇ ಹೇಳಬೇಕೆಂದರೆ ಈ ನರ್ಸಿಂಗ್ ಶಾಲೆಯಲ್ಲಿ 1 ರಿಂದ 3ನೇ ವರ್ಷದವರೆಗೆ ಸುಮಾರು 100 ಮಂದಿ ವಿದ್ಯಾರ್ಥಿಗಳಿದ್ದು ಇವರಲ್ಲಿ 70 ಮಂದಿ ಕೇರಳದ ವಿದ್ಯಾರ್ಥಿಗಳೇ ತುಂಬಿಹೋಗಿದ್ದಾರೆ. ಖಾಯಂ ಬೋರ್ಡುಗಳೇ ಇಲ್ಲವೆಂದಮೇಲೆ ಖಾಯಂ ಟ್ಯೂಟರುಗಳಿರಲು ಹೇಗೆ ಸಾಧ್ಯ? ಚಿಗಟೇರಿ ಜನರಲ್ ಆಸ್ಪತ್ರೆಯಿಂದ ಕೆಲವು ವಾರ್ಡ್ ನರ್ಸುಗಳು ಬಂದು ಕೆಲವೊಮ್ಮೆ ಪಾಠ ಮಾಡಿದರೆ, ಬಾಪೂಜಿ ನರ್ಸಿಂಗ್ ಶಾಲೆಯಿಂದ ಮಹಿಳೆಯೊಬ್ಬರು ಇಷ್ಟ ಬಂದಾಗ ಬಂದು ಪಾಠ ಮಾಡುತ್ತಾರೆ. ಮೂರು ತಿಂಗಳ ಕೆಳಗೆ ಪ್ರಿನ್ಸಿಪಾಲರಾಗಿ ಬಂದ ಮಾಸ್ ಸ್ಟ್ಯಾನ್ಲಿ ಎಂಬ ಹುಡುಗ ನರ್ಸಿಂಗ್ ಶಾಲೆಯ ಆಡಳಿತಾಧಿಕಾರಿಯಂತೆ ವರ್ತಿಸುವ ರಾಮಪ್ಪನ ಬಲಗೈ ವಿಜಯಲಕ್ಷ್ಮಿ ಎಂಬಾಕೆಯೊಂದಿಗೆ ಏಗಲಾರದೆ ಇತ್ತೀಚೆಗೆ ರಾಜೀನಾಮೆ ಪತ್ರವನ್ನು ಬರೆದಿಟ್ಟು ರಾತ್ರೋ ರಾತ್ರಿ ಓಡಿಹೋಗಿದ್ದಾನೆ. ಹೀಗಾಗಿ ಪಾಠಗಳು ಪೂರ್ಣಗೊಳ್ಳದೇ ವಿದ್ಯಾರ್ಥಿಗಳಿಗೆ ದಿಕ್ಕು ತೋಚದಂತಾಗಿದೆ.

ಪೇಮೆಂಟ್ ಸೀಟುಗಳ ವಿದ್ಯಾರ್ಥಿಗಳಿಂದ ವಿಪರೀತ ಹಣ ಸುಲಿಯುವ ರಾಮಪ್ಪ ಸಮಾಜ ಕಲ್ಯಾಣ ಇಲಾಖೆಯಿಂದ ಆಯ್ಕೆ ಆಗಿ ಬಂದ ಪರಿಶಿಷ್ಟ ಜಾತಿ/ ಪಂಗಡಗಳ ವಿದ್ಯಾರ್ಥಿಗಳಿಂದಲೂ ನಿರ್ದಯವಾಗಿ ಹಣ ಸುಲಿಯುತ್ತಾನೆ. ಭೋದನಾ ಶುಲ್ಕ, ಸಮವಸ್ತ್ರ, ಊಟ-ವಸತಿ ಎಂದೆಲ್ಲಾ ಸೇರಿ ಸಮಾಜ ಕಲ್ಯಾಣ ಇಲಾಖೆಯಿಂದ 36500/- ರೂ. ಹಣ ಪ್ರತಿ ವಿದ್ಯಾರ್ಥಿಗಳಿಗೆ ಬರುತ್ತಿದ್ದರೂ ಈತ ಪುಸ್ತಕಗಳನ್ನು ಕೊಡುತ್ತೇನೆಂದು ಈ ವಿದ್ಯಾರ್ಥಿಗಳಿಂದ 5000ರೂ. ವಸೂಲಿ ಮಾಡಿದ್ದಾನೆ. ಈ ಹಣವನ್ನು ವಾಪಸ್ಸು ಮಾಡುತ್ತೇನೆಂದು ಮೊದಲು ಹೇಳಿದ್ದು ನಂತರದಲ್ಲಿ ನೀವೇ ಇನ್ನೂ ಎರಡೂ ಸಾವಿರ ಕೊಡಬೇಕೆಂದು ವಿದ್ಯಾರ್ಥಿಗಳನ್ನು ದಬಾಯಿಸುತ್ತಾನೆ. ಈ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಬರುವ 1500 ರೂ. ಸ್ಕಾಲರ್‌ಶಿಪ್ ಹಣವನ್ನು ಈತನೇ ನುಂಗುತ್ತಿರುವುದಲ್ಲದೇ 7 ತಿಂಗಳ ಊಟ ನೀಡಿ 11 ತಿಂಗಳ ಸ್ಕಾಲರ್ ಶಿಪ್ ಫಾರಂಗಳಿಗೆ ಸಹಿ ಹಾಕಿಸಿಕೊಂಡಿದ್ದಾನೆ. Lamp light Ceremony (ಪ್ರತಿಜ್ಞಾವಿಧಿ)ಗಾಗಿ ಪ್ರತಿ ವಿದ್ಯಾರ್ಥಿಯಿಂದ 400 ರೂ. ವಸೂಲಿ ಮಾಡಿರುವುದಲ್ಲದೇ ಟೆಸ್ಟ್ ಬರೆಯುವ ಪೇಪರ್‌ಗಳಿಗಾಗಿ 10 ರೂ.ಗಳನ್ನೂ ಬಿಡದೆ ವಸೂಲಿ ಮಾಡಿದ್ದಾನೆ. ದಲಿತ ವಿದ್ಯಾರ್ಥಿಗಳು ಇಲ್ಲಿನ ಅವ್ಯವಸ್ಥೆ

ಇವಳೆದೆಗೆ ಬೇರಿಳಿದ ಕಾಲು ನನ್ನದು -ಗೋಪಾಲಕೃಷ್ಣ ಅಡಿಗ





ಅನಾನುಕೂಲದ ಬಗ್ಗೆ ರಾಮಪ್ಪನಿಗೆ ಕೇಳಿದರೆ ಹೊಲಸು ಬೈಗುಳಗಳಿಂದ ದಬಾಯಿಸುತ್ತಾನೆ. ಸ್ವಲ್ಪ ನೇರವಾಗಿ ಮಾತನಾಡಿದ ವಿದ್ಯಾರ್ಥಿಗಳನ್ನು ಹೊಡೆಸಿ ರೈಲು ಕೆಳಗೆ ಹಾಕಿಸುತ್ತೇನೆಂದು ಹೆದರಿಸುತ್ತಾನೆ.

ನರ್ಸಿಂಗ್ ಶಾಲೆಯಲ್ಲಿ ದಾಖಲಾಗಿರುವುದಕ್ಕೆ ರಸೀದಿ, ಬ್ಯಾಡ್ಜ್ ಮುಂತಾದ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲವಾದ್ದರಿಂದ ಯಾವುದೇ ಕ್ಷಣದಲ್ಲಿ ನಮ್ಮನ್ನು ಹೊರಹಾಕಬಹುದೆಂದು ವಿದ್ಯಾರ್ಥಿಗಳು ಹೆದರುತ್ತಿದ್ದಾರೆ. ರೈಲ್ವೆ ಹಳಿಗಳ ಪಕ್ಕದಲ್ಲಿ ಶಾಲೆ ಇರುವುದರಿಂದ ಪ್ರತಿ ರೈಲು ಬಂದು ಹೋಗುವಾಗ ಮೈಮೇಲೇ ಬಂದಂತಾಗಿ ವಿದ್ಯಾರ್ಥಿಗಳು ಬೆಚ್ಚಿ ಬೀಳುವ ಪ್ರಸಂಗಗಳು ಮಾಮೂಲಿಯಾಗಿ ಹೋಗಿವೆ.

ಈ ನರ್ಸಿಂಗ್ ಶಾಲೆಯ ವಿದ್ಯಾರ್ಥಿ ನಿಲಯವು ಅವ್ಯವಸ್ಥೆಯ ಆಗರವಾಗಿದೆ. ಮೂರು ಮಂದಿ ಇರಬಹುದಾದ ರೂಮಿನಲ್ಲಿ ಏಳು ಮಂದಿ ವಿದ್ಯಾರ್ಥಿಗಳಿದ್ದಾರೆ. ನಿರುಪಯುಕ್ತ ವಸ್ತುಗಳನ್ನಿಟ್ಟಿರುವ ರೂಮಿಗೆ ಒಂದು ಬಕೆಟ್‌ನಲ್ಲಿ ಅನ್ನ, ಇನ್ನೊಂದು ಬಕೇಟಿನಲ್ಲಿ ಸಾರನ್ನು ತಂದಿಟ್ಟರೆ ವಿದ್ಯಾರ್ಥಿಗಳೇ ಬಡಿಸಿಕೊಂಡು ಉಣ್ಣುತ್ತಾರೆ.

ದಲಿತ ಕೋಟಾದಿಂದಲೇ ಬೆಳೆದು ಬಲಿತಿರುವ ರಾಮಪ್ಪನ ಬಗ್ಗೆ ದಲಿತ ವಿದ್ಯಾರ್ಥಿಗಳೇ ಹೇಳುವ ದೂರುಗಳನ್ನು ಜಿಲ್ಲಾಧಿಕಾರಿಗಳು ಮುಕ್ತವಾಗಿ ಪರಿಗಣಿಸಿ ಪಟ್ಟಿ ಮಾಡಿದರೆ ದೂರುಗಳ ದೊಡ್ಡ ಕಡತಗಳೇ ಸೃಷ್ಟಿಯಾಗಬಹುದು. ಆದರೆ ತಾಲ್ಲೂಕು ಕಲ್ಯಾಣಾಧಿಕಾರಿಗಳ ಎದುರಿಗೆ ವಿದ್ಯಾರ್ಥಿಗಳನ್ನು ಬೈದು ಹೆದರಿಸುವ ಈತನನ್ನು ಹದ್ದುಬಸ್ತಿನಲ್ಲಿಡುವ ಕೆಲಸವನ್ನು ಸಂಬಂಧಪಟ್ಟವರು ಮಾಡದೇ ಇದ್ದರೆ ಈತನ ಠೇಂಕಾರ ಮತ್ತು ಈತನಿಗಿರುವ ರಾಜಕೀಯ ಬೆಂಬಲದಿಂದಾಗಿ ದಲಿತ ವಿದ್ಯಾರ್ಥಿಗಳೇ ಬಲಿಪಶುಗಳಾಗುತ್ತಾರೆಂಬುದರಲ್ಲಿ ಅನುಮಾನವಿಲ್ಲ.

ಹೆಚ್ಚು ಕಡಿಮೆ ಇದೇ ಪದ್ಧತಿ ಮತ್ತು ಪರಿಸ್ಥಿತಿಗಳಲ್ಲಿ ಇನ್ನುಳಿದ ಇಲ್ಲಿನ ಐದು ಖಾಸಗಿ ನರ್ಸಿಂಗ್ ಶಾಲೆಗಳು ನಡೆಯುತ್ತಿವೆ. ಆದರೆ ಮೂಲಭೂತ ಸೌಲಭ್ಯಗಳ ವಿಷಯದಲ್ಲಿ ಮಾತ್ರ ಎಲ್ಲ ಖಾಸಗಿ ನರ್ಸಿಂಗ್ ಶಾಲೆಗಳೂ ಒಂದೇ ಸಾಲಿನಲ್ಲಿ ನಿಲ್ಲುತ್ತವೆ. ಇಲ್ಲಿ ಗಮನಿಸಬೇಕಾದುದೇನೆಂದರೆ ಈ ಹಿಂದೆ ಸರ್ಕಾರಿ ನರ್ಸಿಂಗ್ ಶಾಲೆಗಳು ಇದ್ದಾಗ ಒಂದಿಷ್ಟು ಗುಣಮಟ್ಟದ ತರಬೇತಿ ವಿದ್ಯಾರ್ಥಿಗಳಿಗೆ ಸಿಗುತ್ತಿತ್ತು. ಉದ್ಯೋಗಾವಕಾಶಗಳೂ ತಕ್ಕಮಟ್ಟಿಗೆ ಇರುತ್ತಿದ್ದವು. ಆದರೆ ಸರ್ಕಾರವು ಖಾಸಗಿ ನರ್ಸಿಂಗ್ ಶಾಲಾ-ಕಾಲೇಜುಗಳಿಗೆ ಪರವಾನಗಿ ನೀಡಲು ಪ್ರಾರಂಭಿಸಿದಂದಿನಿಂದ ಪ್ರತಿ ಜಿಲ್ಲೆಯಲ್ಲೂ ನಾಯಿಕೊಡೆಗಳಂತೆ ನರ್ಸಿಂಗ್ ಶಾಲೆಗಳೆದ್ದಿವೆ.

ಸರ್ಕಾರಿ ನರ್ಸಿಂಗ್ ಶಾಲೆಗಳಲ್ಲಿ ಕೂಡಾ ಎಲ್ಲವೂ ಸರಿಯಾಗಿಲ್ಲ, ಎಲ್ಲಾ ಸೌಕರ್ಯಗಳಿದ್ದರೂ ಕೂಡಾ ವಿದ್ಯಾರ್ಥಿಗಳಿಗೆ ಟ್ಯೂಟರುಗಳು ಹಾಗೂ ವಾರ್ಡ್ ನರ್ಸ್‌ಗಳು ಕೊಡುವ ಮಾನಸಿಕ ಹಿಂಸೆಗಳು ಮಿತಿ ಮೀರಿಹೋಗಿವೆ. ಸೀನಿಯರ್ ನರ್ಸ್‌ಗಳು ವಿದ್ಯಾರ್ಥಿಗಳನ್ನು ಗುಲಾಮರಂತೆ ಕಾಣುತ್ತಾರೆ. ಮುಂಜಾಗರೂಕತೆಯ ಕ್ರಮವಾಗಿ ಗ್ಲೌಸು, ರೋಗನಿರೋಧಕಗಳನ್ನು ಕೊಡದೆ ಅಪಾಯಕಾರಿ ಅಂಟು ರೋಗಗಳಿರುವ ಕಡೆ ವಿದ್ಯಾರ್ಥಿಗಳನ್ನು ಡ್ಯೂಟಿಗೆ ಹಾಕುತ್ತಾರೆ. ಹೀಗಾಗಿ ವಿದ್ಯಾರ್ಥಿಗಳು ಅರಿವಿಲ್ಲದೆ ತಮ್ಮ ಬದುಕನ್ನೇ ಪಣಕ್ಕಿಟ್ಟು ಈ ಅನಾಹುತಗಳು ಕೂಡ ಸಂಭವಿಸುತ್ತವೆ.

–ಚಂದ್ರಶೇಖರ ತೋರಣಘಟ್ಟ


ಮಂಡ್ಯ ನಗರಸಭೆ ದುಬೈ ದುಡ್ಡಿಗೆ ಹರಾಜು



ಮಂಡ್ಯದ ಮಾನಗೇಡಿ ನಗರ ಸಭೆಯನ್ನು ಫೈನಲ್ಲಾಗಿ ದುಬೈ ದುಡ್ಡಿಗೆ ಹರಾಜು ಹಾಕಲು ಸ್ವತಃ ಮುಖ್ಯಮಂತ್ರಿ ಕುಮಾರಸ್ವಾಮಿಯೆ ನಿರ್ಧರಿಸಿದರೆ ತಡೆಯಲು ಯಾರಿಗೆ ಸಾಧ್ಯ? ಇರುವ ನಗರಸಭಾ ಸದಸ್ಯರಲ್ಲಿ ಅರ್ಧದಷ್ಟು ಮಂದಿ ದುಬೈ ದುಡ್ಡಿನ ಜಫ್ರುಲ್ಲಾ ಖಾನ್‌ಗೆ ತಮ್ಮನ್ನು ಅಡವಿಟ್ಟು ಕೊಂಡಿದ್ದಾರೆ. ಹೀಗೆ ಮಂಡ್ಯ ನಗರಸಭೆಯನ್ನು ಜಫ್ರುಲ್ಲಾನ ಪಾದಕ್ಕೆ ಸಮರ್ಪಿಸುವ ಹೊಣೆ ಹೊತ್ತಿರುವವಳು ಅಧಿನಾಯಕಿ, ನಗರಸಭಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್. ಇದೆಲ್ಲದರ ಒಟ್ಟು ರಿಸಲ್ಟ್ ದಕ್ಷ ಆಯುಕ್ತ ಕೃಷ್ಣಮೂರ್ತಿಯ ಎತ್ತಂಗಡಿಗೆ ಕೈ ಹಾಕಿ ಅಂಡು ಸುಟ್ಟ ಬೆಕ್ಕಿನಂತಾಗಿದ್ದಾರೆ ಮಂಡ್ಯದ ಕೌನ್ಸಿಲರ್‌ಗಳು.

6 ತಿಂಗಳು, 13 ಆಯುಕ್ತರು!

ಮಂಡ್ಯ ನಗರಸಭೆಯ ಇತಿಹಾಸವೇ ಅಂಥದ್ದು. ಕಳೆದ ಆರು ವರ್ಷಗಳಲ್ಲಿ ಆರು-ತಿಂಗಳಿಗೊಬ್ಬರಂತೆ ಹದಿಮೂರು ಆಯುಕ್ತರು ಬಂದು ಹೋಗಿದ್ದಾರೆ. ಯಾರೊಬ್ಬರಿಗೂ ಇಲ್ಲಿನ ಅಧ್ವಾನಗಳನ್ನು, ಬ್ಲೇಡ್ ಖಾತೆಗಳನ್ನು, ಕಮಿಷನ್



ಗಿರಾಕಿ ಕೌನ್ಸಿಲರ್‌ಗಳನ್ನು ಸರಿ ಮಾಡಲು ಸಾಧ್ಯವಾಗಿಲ್ಲ. ಇಲ್ಲಿನ ಸದಸ್ಯರ ತೆವಲು ಯಾವ ಮಟ್ಟದ್ದೆಂದರೆ, ಇವರು ಹೇಳಿದರೆಂದರೆ ನಗರಸಭೆಯ ಕಟ್ಟಡವನ್ನೇ ಹರಾಜಿಗಿಡಬೇಕು, ಇಲ್ಲದಿದ್ದರೆ ಅವತ್ತೇ ಶುರುವಾಗುತ್ತದೆ ಆಯುಕ್ತ ಹಠಾವೋ ಚಳವಳಿ. ರಾಮಪ್ಪ ಅಂತಾ ಮಂಡ್ಯ ನಗರ ಸಭೆಗೊಬ್ಬ ಆಯುಕ್ತನಿದ್ದ. ಈತ ಕೌನ್ಸಿಲರ್‌ಗಳ ಕಿರಿಕ್ ನೋಡಿ ನಗರಸಭೆಯ ಕೌನ್ಸಿಲ್ ಮೀಟಿಂಗ್‌ನಿಂದಲೇ ಓಡಿ ಹೋದವನು ತಿರುಗಿ ಮಂಡ್ಯ ನಗರಸಭೆಗೆ ಕಾಲಿಕ್ಕಲಿಲ್ಲ.

ಇಷ್ಟರ ನಡುವೆ ಎಂಟು ತಿಂಗಳ ಕೆಳಗೆ ಆಯುಕ್ತರಾಗಿ ಬಂದ ವಿ.ಎಚ್. ಕೃಷ್ಣಮೂರ್ತಿ, ಹೆಂಡತಿಯರ ಹೆಸರಿನಲ್ಲಿ ಅಧಿಕಾರ ಚಲಾಯಿಸಲು ಬಂದವರನ್ನು ನಗರಸಭೆಯಿಂದ ಹೊರಗಿಟ್ಟರು, ಅಧಿಕಾರಿಗಳ ಅಡ್ಡ ಕಸುಬಿಗೆ ಅಡ್ಡಿಯಾದರು, ಕೌನ್ಸಿಲರ್‌ಗಳ ಡೀಲಿಂಗಿಗೆ ಅಡ್ಡವಾಗತೊಡಗಿದರು. ಆಗಲೇ ಶುರುವಾಯ್ತು ಆಯುಕ್ತರ ವಿರುದ್ಧ ಕೌನ್ಸಿಲರ್‌ಗಳ ಭುಸುಭುಸು. ಯಾವಾಗ ಆಯುಕ್ತ ಕೃಷ್ಣಮೂರ್ತಿ ಕೌನ್ಸಿಲರ್‌ಗಳ ಮಗ್ಗಲಿಗೆ ಮುಳ್ಳಾದರೋ ಆಯುಕ್ತರ ಎತ್ತಂಗಡಿಗೆ ಹೆಚ್ಚುಕಡಿಮೆ ಎಲ್ಲಾ ಕೌನ್ಸಿಲರ್‌ಗಳು ಕೈ ಜೋಡಿಸಿ ನಿಂತರು. ಅದೇ ಸಂದರ್ಭಕ್ಕೆ ಮಂಡ್ಯ ಹಳೇ ನಗರದ ಸ್ಮಶಾನದ ವಿಚಾರ ಕೈಗೆತ್ತಿಕೊಂಡು ಕೌನ್ಸಿಲರ್ ಕಿಟ್ಟಿ ಕೌನ್ಸಿಲ್ ಮೀಟಿಂಗ್‌ನಲ್ಲಿ ಆಯುಕ್ತರ ವಿರುದ್ಧ ದುಸುಮುಸು ಆಡಿದ. ಅದೇನನಿಸಿತೊ ಆಯುಕ್ತ ಕೃಷ್ಣಮೂರ್ತಿಗೆ? ಕೌನ್ಸಿಲ್ ಸಭೆಯನ್ನೇ ಅರ್ಧಕ್ಕೆ ಬಿಟ್ಟು ಹೊರಬಂದರು. ಅವತ್ತೇ ನಿರ್ಣಯವಾಯಿತು ಆಯುಕ್ತ ಕೃಷ್ಣಮೂರ್ತಿಯನ್ನು ಎತ್ತಂಗಡಿ ಮಾಡಿ ಅಂತಾ! ಅದರ ಬೆನ್ನಲ್ಲೇ ಕೃಷ್ಣಮೂರ್ತಿ ವರ್ಗಾದ ಆದೇಶ ಹೊರಬಿತ್ತು. ತರಾತುರಿಯಲ್ಲಿ ಕೃಷ್ಣಮೂರ್ತಿಯನ್ನು ಆಯುಕ್ತರ ಹುದ್ದೆಯಿಂದ ರಿಲೀವ್ ಮಾಡಲಾಯಿತು. ಮಂಡ್ಯದ ಜನ ಕೂಡಾ ಸುಮ್ಮನಿದ್ದರು. ಆಯುಕ್ತರ ವರ್ಗಾದ ಹಿಂದೆ ನಡೆದಿರುವ ಅಸಲೀ ರಾಜಕೀಯವೇ ಬೇರೆ.

ದುಬೈ ಟ್ರೀಟ್‌ಮೆಂಟ್

ಆಯುಕ್ತ ಕೃಷ್ಣಮೂರ್ತಿಯ ವರ್ಗದ ಹಿಂದೆ ಇದ್ದ ಕೈಗಳೇ ಬೇರೆ, ಅಸಲಿ ಉದ್ದೇಶವೇ ಬೇರೆ. ಇಲ್ಲಿನ ಮಹಾವೀರ ಸರ್ಕಲ್‌ನ ಮುನ್ಸಿಪಲ್ ಅಂಗಡಿ ಮಳಿಗೆಗಳಲ್ಲಿ 12 ಮಳಿಗೆಗಳನ್ನು ದುಬೈ ದುಡ್ಡಿನ ಧಣಿ ಜಫ್ರುಲ್ಲಾ ಖಾನ್ ತನ್ನ ಬೆಂಬಲಿಗರಿಗೆ ನೀಡುವಂತೆ ಆದೇಶಿಸಿದ್ದ. ಸ್ವತಃ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಶಾಸಕ ಶ್ರೀನಿವಾಸ್‌ರನ್ನು ದುಬೈಗೆ ಎಳೆದೊಯ್ದು ಜಫ್ರುಲ್ಲಾ ಅಲ್ಲಿ ಅವರಿಗೆ ನೀಡಿದ ಟ್ರೀಟ್‌ಮೆಂಟ್ ವರ್ಕ್‌ಔಟ್ ಆಗಿ ಸ್ವತಃ ಚಲುವರಾಯಸ್ವಾಮಿ ಕೂಡಾ ಜಫ್ರುಲ್ಲಾಖಾನರ ಬೆಂಬಲಿಗರಿಗೆ ಮಳಿಗೆಗಳನ್ನು ನೀಡುವಂತೆ ಆದೇಶಿಸಿದರು. ಕಡೆ ಕಡೆಗೇ ದುಬೈ ಟ್ರೀಟ್‌ಮೆಂಟಿಗೆ ಸರೆಂಡರ್ ಆದ ಮುಖ್ಯಮಂತ್ರಿ ಕುಮಾರಸ್ವಾಮಿ ಅಂಥದ್ದೇ ಆದೇಶ ಮಾಡಿಟ್ಟರು.


ಆದರೆ ಕಾನೂನು ಮರೆತು ಅಂಗಡಿ ಮಳಿಗೆಗಳನ್ನು ನೀಡುವುದಿಲ್ಲವೆಂದು ಹಠ ಹಿಡಿದು ಕುಂತರು ಆಯುಕ್ತರು.



ನಗರಸಭಾಧ್ಯಕ್ಷೆ ವಿಜಯಲಕ್ಷ್ಮಿ



ಕೌನ್ಸಿಲರ್ ಟಿ.ರಾಜಣ್ಣ



ಆಯುಕ್ತ ಕೃಷ್ಣಮೂರ್ತಿ

ಕನಲಿ ಹೋದ ಜಫ್ರುಲ್ಲಾಖಾನ್ ಆಯುಕ್ತರ ವರ್ಗಾವಣೆಗೆ ಕೈಯಿಟ್ಟ. ಅಷ್ಟೊತ್ತಿಗೆ ಮಂಡ್ಯದ ಶನಿ ರಾಹು ಕೇತುಗಳಂತಿರುವ ಮಾಜಿ ನಗರಸಭಾಧ್ಯಕ್ಷೆ ಅಂಬುಜಮ್ಮ, ಹೊಸಳ್ಳಿ ವೆಂಕಟೇಶಯ್ಯ, ಕೆಲವು ಅತೃಪ್ತ ಡೀಲಿಂಗ್ ಕೌನ್ಸಿಲರ್‌ಗಳು ಜಫ್ರುಲ್ಲಾ ಜತೆ ಹಾಥ್ ಮಿಲಾಯಿಸಿದರು. ನಗರಸಭೆಯ ಜಾಗದಲ್ಲಿ ಅತಿಕ್ರಮವಾಗಿ ಕಟ್ಟಿದ ಅಂಬುಜಮ್ಮನ ಕಾಂಪೌಂಡನ್ನು ಆಯುಕ್ತ ಕೃಷ್ಣಮೂರ್ತಿ ನಿರ್ದಾಕ್ಷಿಣ್ಯವಾಗಿ ಕೆಡವಿದ್ದರು. ಸ್ವ ಭೂಮಿ ಯಲ್ಲಿ ಕಾಲೇಜ್ ಕಟ್ಟಿದ್ದ ಶಿವಲಿಂಗಯ್ಯನ ಖಾತೆ ರದ್ದು ಮಾಡಿ ಕೌನ್ಸಿಲರ್ ರಾಜಣ್ಣನ ವಿರೋಧ ಮಾಡಿಕೊಂಡಿದ್ದರು.


ಈ ನಗರಸಭೆಗೆ ಬರುವ ಯಾವನೇ ಆಯುಕ್ತನನ್ನು ಹೆದರಿಸಿಟ್ಟುಕೊಂಡು ದುಡ್ಡು ಮಾಡುತ್ತಿದ್ದವರು ಮಂಡ್ಯ ನಗರಸಭೆಗೆ ಕಾಲಿಕ್ಕುವುದನ್ನು ಮರೆತು ಬಿಡಬೇಕಾಗಿತ್ತು, ಅವರಿಗೆಲ್ಲ ಆಯುಕ್ತರ ಮೇಲೆ ಸಿಟ್ಟಿತ್ತು, ಓಡಿ ಹೋಗಿದ್ದ ಮಾರ್ವಾಡಿ ಚಂಪಾಲಾಲ್ ಎಂಬುವನ ಹೆಸರಿನಲ್ಲಿದ್ದ ಪೇಟೆಬೀದಿಯ ನಗರಸಭೆ ಅಂಗಡಿ ಮಳಿಗೆಯನ್ನು ಬೇನಾಮಿ ಹೆಸರಿನಲ್ಲಿ ತಾನೇ ಮುಂದುವರೆಸಿದ್ದ ಕೌನ್ಸಿಲರ್ ಕಿಟ್ಟಿ, ನಗರಸಭೆ ಸ್ಥಳದಲ್ಲಿ ಬೇನಾಮಿ ಹೆಸರಲ್ಲಿ STD, ಸಾರಾಯಿ ಅಂಗಡಿ ಮಡಗಿದ್ದ. ಇವೆಲ್ಲದರ ಮೇಲೆ ಆಯುಕ್ತ ಕೃಷ್ಣಮೂರ್ತಿ ಮುರಕೊಂಡು ಬೀಳುತ್ತಿದ್ದಂತೆ ನಗರಸಭೆ ಕೌನ್ಸಿಲ್‌ನಲ್ಲೇ ಕಿಟ್ಟಿ ಗಲಾಟೆ ಎಬ್ಬಿಸಿದ.


ನಾಲಾಯಕ್ ಅಧ್ಯಕ್ಷೆ

ಇಲ್ಲಿನ ನಗರಸಭಾಧ್ಯಕ್ಷೆ ವಿಜಯಲಕ್ಷ್ಮಿಗೆ ಮೆದುಳೆಂಬುದು ಸರಿಯಾಗಿ ಕಾರ್ಯ ನಿರ್ವಹಿಸುತ್ತಿರುವಂತೆ ಕಾಣುತ್ತಿಲ್ಲ. ಮಸಣವೊಂದರ ಕುರಿತು ತಾನೇ ಅಧ್ಯಕ್ಷೆಯಾಗಿರುವ ನಗರಸಭೆಯ ವಿರುದ್ಧ ಕೇಸು ಜಡಿಯುತ್ತಾಳೆ, ನಾಯಿ ಹಿಡಿಯೋರಿಗೆ ಅಂತಾ 70 ಸಾವಿರ ದುಡ್ಡು ಕಂಡೋರ ಪಾಲು ಮಾಡುತ್ತಾಳೆ. ಹೊಸಳ್ಳಿ ಸರ್ಕಲ್‌ನಲ್ಲಿ STD ಮಡಗಿಕೊಂಡು, ನೆಲ ಬಾಡಿಗೆ ಕಟ್ಟದೆ ಈಕೆಯ STD ಡಬ್ಬಾವನ್ನೇ ಮಂಡ್ಯ ನಗರ ಸಭೆಯ ಅಂಗಳದಲ್ಲಿ ಬೀಸಾಡಲಾಗಿದೆ. ಎಂಟು ನೂರು ರೂಪಾಯಿಯ ಟೋನರ್ ಇಂಕ್‌ಗೆ ಐದೂವರೆ ಸಾವಿರ ಬಿಲ್ ಎತ್ತಿದ್ದಾಳೆ. ಟೆಂಡರ್ ಡಾಕ್ಯುಮೆಂಟ್‌ಗೆಂದು ಎಂಭತ್ತು ನಾಲ್ಕು ಸಾವಿರ ಬಿಲ್‌ಗೆ ಕೌನ್ಸಿಲ್ ಒಪ್ಪಿಗೆಯಿಲ್ಲದೆ ಬಿಲ್ ಎತ್ತಿದ್ದಾಳೆ. ಅಂಬೇಡ್ಕರ್ ರಸ್ತೆಗೆ ರಾಜ್‌ಕುಮಾರ್ ರಸ್ತೆ ಅಂತಾ ಹೆಸರಿಡಿ ಅಂತಾ ಹಠಕ್ಕೆ ನಿಲ್ಲುತ್ತಾಳೆ. 20 ವರ್ಷ ತಾನೇ ಅಂಬೇಡ್ಕರ್ ರಸ್ತೆಯಲ್ಲೇ ವಾಸವಿದ್ದರೂ ಮಂಡ್ಯದಲ್ಲಿ ಅಂಬೇಡ್ಕರ್ ರಸ್ತೆಯೇ ಇಲ್ಲಾ ಅಂತಾ ವಾದಕ್ಕೆ ಬೀಳುತ್ತಾಳೆ ಈ ದಲಿತ ನಗರಸಭಾಧ್ಯಕ್ಷೆ.

ಆಯುಕ್ತ ಕೃಷ್ಣಮೂರ್ತಿಯ ವರ್ಗಾವಣೆಗೆ ಕೆಎಟಿ ತಡೆಯಾಜ್ಞೆ ನೀಡಿರುವ ಹಿನ್ನೆಲೆಯಲ್ಲಿ ಹೊಸಳ್ಳಿ ವೆಂಕಟೇಶಯ್ಯ ನೇತೃತ್ವದಲ್ಲಿ ಕಮಿಷನರ್ ವರ್ಗಾವಣೆ ಕಾರ್ಯಾಚರಣೆ ಶುರುವಾಗಿದೆ. ಮಂಡ್ಯ ಶಾಸಕರು ದುಬೈ ಟ್ರೀಟ್‌ಮೆಂಟ್‌ಗೆ ನೆಲ ಕಚ್ಚಿಬಿಟ್ಟಿದ್ದಾರೆ. ದುಬೈ ಬಿಸ್ಕೆಟ್, ಕೌನ್ಸಿಲರ್‌ಗಳ ಬಾಯಿಗೆ ನಿಯಮಿತವಾಗಿ ಬೀಳುತ್ತಿವೆ. ಸ್ವತಃ ದಲಿತ ಅಧ್ಯಕ್ಷೆಯಾಗಿ ನಗರದ ಅಭಿವೃದ್ಧಿಗೆ ಗಮನ ನೀಡದೆ, ಇನ್ನೊಬ್ಬ ದಲಿತ ಅಧಿಕಾರಿಯ ಮೇಲೆ ಗುದ್ದಾಟ ಕೈಗೊಂಡಿರುವ ವಿಜಯಲಕ್ಷ್ಮಿಗೆ ಬುದ್ಧಿ ಹೇಳುವರಾರು? ಇನ್ನೈದು ತಿಂಗಳು ಮಂಡ್ಯದ ಜನ ವಿಧಿಯಿಲ್ಲದೆ ಈ ಮಾನಗೇಡಿಗಳನ್ನು ಸಹಿಸಿಕೊಳ್ಳಬೇಕಿದೆ. ಕೊನೆಗೂ ಮಂಡ್ಯ ನಗರಸಭೆ ದುಬೈ ಪಾಲಾದಂತಾಯ್ತು ಬಿಡಿ.

–ವರದಿಗಾರ






ಮಂಜುಳಾದೇವಿ V/s BJP

ಈಶ್ವರಪ್ಪ ಮತ್ತು ಡಿ.ಹೆಚ್. ಶಂಕರಮೂರ್ತಿ ಸರಕಾರದ ಬಲಾಢ್ಯ ಸಚಿವರು. ಇವರಿಬ್ಬರೂ ತಮ್ಮ ಸಾಮಾಜಿಕ ಜವಾಬ್ದಾರಿಗೆ ತಿಲಾಂಜಲಿಯಿಟ್ಟು ಸಣ್ಣತನ ಮೆರೆಯುತ್ತಿದ್ದರೆ, ಜಾತ್ಯತೀತ ಜನತಾದಳದ ವಕೀಲೆ ಎಸ್. ಮಂಜುಳಾದೇವಿ ಸರ್ಕಾರಕ್ಕೆ ಸತ್ಯಾಂಶ ಮತ್ತು ವಾಸ್ತವಾಂಶಗಳನ್ನು ಅರ್ಥಮಾಡಿಸಿ ಕಾಲುಶತಮಾನದ ಡಿ.ವಿ.ಎಸ್. ಆಡಳಿತ ಮಂಡಳಿಯ ಲೂಟಿಗೆ ಬೀಗ ಹಾಕಿಸಿದ್ದಾರೆ.

ಈ ಹಿಂದೆಯೇ ಕಾಲೇಜಿನ ಆವರಣದಲ್ಲೇ ಯುವ ಕಾಂಗ್ರೆಸ್‌ನ ನಾಯಕ ಕೆ. ರಂಗನಾಥ್ ನೇತೃತ್ವದಲ್ಲಿ ವಿದ್ಯಾರ್ಥಿಗಳು ಡಿ.ಹೆಚ್. ಶಂಕರಮೂರ್ತಿಗೆ ಘೇರಾವ್ ಮಾಡಿ ಎಚ್ಚರಿಕೆ ನೀಡಿ ಹೋರಾಟ ಮುಂದುವರೆಸಿದ್ದರು.



ರಂಗನಾಥ್

ಒಟ್ಟಿನಲ್ಲಿ ಸಂಸ್ಥೆಯ ಶಿಕ್ಷಕರುಗಳ ನಿರಂತರ ಪ್ರಯತ್ನ, ವಕೀಲೆ ಮಂಜುಳಾ ದೇವಿ ಅವರ ಹೋರಾಟ, ಕೆ. ರಂಗನಾಥ್ ಅವರ ಪ್ರತಿಭಟನೆಗಳಿಂದಾಗಿ ಸರ್ಕಾರ ಎಚ್ಚೆತ್ತುಕೊಂಡಿದ್ದು ಆರೋಗ್ಯಕರವಾಗಿದೆ. ಹಾಗೆಯೇ ಮೂತಿ ಮುರಿಸಿಕೊಂಡಿರುವ ಬಿಜೆಪಿಗಳು ಇನ್ನಾದರೂ ಪಾಠ ಕಲಿತು ಆರೋಗ್ಯಕರವಾಗಿ ವರ್ತಿಸುತ್ತಾರೇನೋ ಕಾದು ನೋಡಬೇಕು.

ಡಿವಿಎಸ್ : ಚೆಡ್ಡಿಗಳಿಗೆ ಕಪಾಳಮೋಕ್ಷ

ಅಧಿಕಾರಕ್ಕೆ ಬಂದರೂ ಶಿವಮೊಗ್ಗ ಬಿಜೆಪಿಗಳ ಬೆನ್ನತ್ತಿದ್ದ ಶನಿಕಾಟ ಇನ್ನೂ ತಪ್ಪಿಲ್ಲ. ಕೆ.ಎಸ್. ಈಶ್ವರಪ್ಪ, ಡಿ.ಹೆಚ್. ಶಂಕರಮೂರ್ತಿಗಳು ಸರ್ಕಾರದಲ್ಲಿ ಘಟಾನುಘಟಿ ಮಂತ್ರಿಗಳೇ. ಆದರೆ ಶಿವಮೊಗ್ಗದಲ್ಲಿ ಶಿಕ್ಷಣ ಸಂಸ್ಥೆಯೊಂದನ್ನು ಸಂಘಪರಿವಾರದ ಜೋಳಿಗೆಗೆ ತುಂಬಲು ಹೋಗಿ ಕಪಾಳ ಮೋಕ್ಷ ಮಾಡಿಸಿಕೊಂಡಿದ್ದಾರೆ.



ಈಶ್ವರಪ್ಪ ಮತ್ತು ಶಂಕರಮೂರ್ತಿ ಎದುರು ವಿದ್ಯಾರ್ಥಿಗಳು ಪ್ರತಿಭಟಿಸುತ್ತಿರುವುದು

ಅವರದೇ ಕೈ ಬೆರಳುಗಳಿಂದ ಅವರದೇ ಕಣ್ಣಿಗೆ ಚುಚ್ಚಿದಂತೆ ತಮ್ಮ ಸರ್ಕಾರದಿಂದಲೇ ಸಚಿವದ್ವಯರು ತಲೆ ಮೇಲೆ ತಟ್ಟಿಸಿಕೊಂಡಿದ್ದಾರೆ. ದೇಶೀಯ ವಿದ್ಯಾ ಸಂಸ್ಥೆಯ (ಡಿ.ವಿ.ಎಸ್) ಹಗರಣಗಳೆಲ್ಲಾ ಬೀದಿಗೆ ಬಿದ್ದು ರಾದ್ಧಾಂತವಾಗಿದ್ದನ್ನೇ ನೆಪ ಮಾಡಿಕೊಂಡು ಈಶ್ವರಪ್ಪ, ಶಂಕರಮೂರ್ತಿಗಳು ಸಂಸ್ಥೆಯನ್ನು ಕಬಳಿಸಲು ಹೊಂಚಾಕಿದ್ದರು. ಇದಕ್ಕಾಗಿಯೇ ಬಿಜೆಪಿ ಉಪಾಧ್ಯಕ್ಷ ಕೆ.ಜಿ. ಕುಮಾರಸ್ವಾಮಿಯನ್ನು ಡಿ.ವಿ.ಎಸ್.ನ ಆಡಳಿತಾಧಿಕಾರಿಯಾಗಿ ಪ್ರತಿಷ್ಠಾಪಿಸಿದ್ದರು.

ಆದರೆ ಕಾಲು ಶತಮಾನದಿಂದ ಸಂಸ್ಥೆ ಸರ್ವ ಸದಸ್ಯರ ಸಭೆ ನಡೆಸದೆ ಅಶ್ವಥನಾರಾಯಣ ಶೆಟ್ಟಿ ನೇತೃತ್ವದಲ್ಲಿ ಸಂಸ್ಥೆಯನ್ನು ಫಲವತ್ತಾದ ಹುಲ್ಲುಗಾವಲು ಮಾಡಿಕೊಂಡಿದ್ದರು. ಕಾಲಾನುಕಾಲಕ್ಕೆ ಸರ್ಕಾರಕ್ಕೇ ಯಾಮಾರಿಸುತ್ತಾ ಆಡಳಿತ ಮಂಡಳಿ ವಂಚನೆಯ ಸರಮಾಲೆಯನ್ನೇ ಮುಂದುವರಿಸಿತ್ತು.

1987ರಲ್ಲಿ ರಾಮಕೃಷ್ಣ ಹೆಗಡೆ ಸರ್ಕಾರ ಸಂಸ್ಥೆಯ ಆಡಳಿತ ಮಂಡಳಿಯನ್ನೇ ಸೀಜ್ ಮಾಡಿ ಖಾಲಿದ್ ಎಂಬ ಆಡಳಿತಾಧಿಕಾರಿಯನ್ನು ನೇಮಿಸಿತ್ತು. ಆಡಳಿತ ಮಂಡಳಿ ಖಾಲಿದ್‌ಗೂ ಬಿರಿಯಾನಿ ತಿನ್ನಿಸಿ ಈತ ಅಧಿಕಾರ ವಹಿಸಿಕೊಳ್ಳದಂತೆ ತಡೆದು ಅಂತಿಮವಾಗಿ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿತ್ತು.

ಶಿಕ್ಷಕರ ಕಾಳಜಿಯ ಗರ್ಭದಲ್ಲೇ ಜನಿಸಿದ ಸಂಸ್ಥೆಯನ್ನು ಶಿಕ್ಷಕರಿಗೇ ಉಳಿಸಬೇಕೆಂಬ ಹೋರಾಟವೂ ನ್ಯಾಯಾಲಯದಲ್ಲಿ ನಡೆಯುತ್ತಿದ್ದು ಅಂತಿಮವಾಗಿ ಸಂಸ್ಥೆ ಸಂಘಪರಿವಾರದ ಜೋಳಿಗೆಗೆ ಬೀಳದಂತೆ ತಡೆಯಲಾಗಿದೆ. ಇದರಲ್ಲಿ ಶಿಕ್ಷಕರ ಹೋರಾಟದ ಜೊತೆಗೆ ಜಾತ್ಯತೀತ ಜನತಾದಳದ ನಾಯಕಿ ವಕೀಲೆ ಮಂಜುಳಾದೇವಿಯವರ ಹೋರಾಟವೂ ಅಡಗಿದೆ.

ಶಿವಮೊಗ್ಗ

ಅಂತೂ ಕಳೆದ ಇಪ್ಪತ್ತು ವರ್ಷಗಳಿಂದ ಅಧಿಕಾರಕ್ಕೆ ಬಂದ ಎಲ್ಲ ಸರ್ಕಾರಗಳನ್ನು ವಂಚಿಸುತ್ತಿದ್ದ ಆಡಳಿತ ಮಂಡಳಿಯ ಜಾಗಕ್ಕೆ ಸರ್ಕಾರ ಆಡಳಿತಾಧಿಕಾರಿ ನೇಮಿಸಿ ಆದೇಶ ಹೊರಡಿಸಿದ ತಕ್ಷಣ ಬಿಜೆಪಿಗಳು ಬಾಲ ಸುಟ್ಟ ಬೆಕ್ಕಿನಂತಾಗಿದ್ದಾರೆ.

ದಕ್ಷ ಅಧಿಕಾರಿ ಎಸ್.ಎಚ್. ವಿಜಯಕುಮಾರ್ ಆಡಳಿತಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಲು ಕಾಲೇಜಿಗೆ ಬಂದರೆ ಕಾರ್ಯದರ್ಶಿ ಅಶ್ವಥನಾರಾಯಣ ಶೆಟ್ಟಿ ಕಾಲೇಜಿಗೇ ಬರದೆ ತಪ್ಪಿಸಿಕೊಂಡಿದ್ದಾರೆ. ಅಷ್ಟರೊಳಗೆ ಆಡಳಿತ ಮಂಡಳಿಯ ಗುಮಾಸ್ತ ಲಕ್ಷ್ಮೀ ನಾರಾಯಣನ ಮೂಲಕ ಕಾಲೇಜಿನ ಲೆಕ್ಕ ಪತ್ರಗಳನ್ನೆಲ್ಲ ಹೊರಕ್ಕೆ ಸಾಗಿಸಿಬಿಟ್ಟಿದ್ದಾರೆ. ಇದು ಗೊತ್ತಾಗಿದ್ದೇ ಉಪ ವಿಭಾಗಾಧಿಕಾರಿ ವಿಜಯಕುಮಾರ್ ಆಡಳಿತ ಮಂಡಳಿ ಕಚೇರಿಯನ್ನು ಸೀಜ್ ಮಾಡಿದ್ದಾರೆ.

ಇಷ್ಟಾದರೂ ಹೊಟ್ಟೆಬಾಕತನ ನಿಲ್ಲಿಸದ ಶೆಟ್ಟಿ ಗ್ಯಾಂಗು ತಕ್ಷಣ ಬ್ಯಾಂಕಿನಲ್ಲಿ ಸಂಸ್ಥೆಯ ಖಾತೆಯಲ್ಲಿದ್ದ ಮೂವತ್ತು ಲಕ್ಷ ರೂಪಾಯಿಯನ್ನು ಕಾನೂನು ಬಾಹಿರವಾಗಿ ಡ್ರಾ ಮಾಡಿಕೊಂಡು ಹೈ ಕೋರ್ಟ್‌ನಲ್ಲಿ ತಡೆಯಾಜ್ಞೆ ತರಲು ರಾಜಧಾನಿಯಲ್ಲಿ ಗೂಟಾ ಬಡಿದುಕೊಂಡು ಕೂತಿದ್ದಾರೆ.

ಒಟ್ಟಿನಲ್ಲಿ ತಮ್ಮದೇ ನೆಲದಲ್ಲಿ, ತಮ್ಮದೇ ಸರ್ಕಾರದಿಂದಲೇ ಬಿಜೆಪಿಗಳು ಮಂಗಳಾರತಿ ಎತ್ತಿಸಿಕೊಂಡಿದ್ದು ಈಶ್ವರಪ್ಪ, ಡಿ.ಎಚ್. ಶಂಕರಮೂರ್ತಿಗಳ ನಿಜವಾದ ಬಣ್ಣ ಬಯಲಾಗಿದೆ. ಈ ಬಿಜೆಪಿಗಳು ಮೊದಲಿನಿಂದಲೂ ತಾವು ಶಿಕ್ಷಣದ ಪರವಾಗಿರುವವರು ಎಂದು ಪೋಜು ಕೊಡುವುದರಲ್ಲಿ ನಿಸ್ಸೀಮರು. ಶಿಕ್ಷಕರ ಮತಗಳಿಂದಲೇ ಆರಿಸಿಬರುವ ಶಂಕರಮೂರ್ತಿ ಶಿಕ್ಷಣ ಸಚಿವರಾಗಿರುವಾಗಲೇ ಡಿ.ವಿ.ಎಸ್. ಶಿಕ್ಷಣ ಸಂಸ್ಥೆ ತಕ್ಕ ಶಾಸ್ತಿ ಮಾಡಿದೆ.

ದೆವ್ವಗಳ ತಾಣ!

ಡಿ.ವಿ.ಎಸ್. ಎಂದರೆ 'ದೆವ್ವಗಳು ವಾಸಿಸುವ ಸ್ಥಳ' ಎಂದು ವಿದ್ಯಾರ್ಥಿಗಳು ಹೇಳುತ್ತಲೇ ಬಂದಿದ್ದು ಈಗ ಸತ್ಯವಾಗಿದೆ. ಡಿ.ವಿ.ಎಸ್. ಆಡಳಿತ ಮಂಡಳಿಗೆ ಬೀಗ ಬಿದ್ದಿದೆ. ಊರಿಗೊಬ್ಬಳೇ ಪದ್ಮಾವತಿ ಎಂಬಂತೆ ಒಂದು ಕಾಲದಲ್ಲಿ ಪ್ರತಿಷ್ಠಿತ ಕಾಲೇಜೆನಿಸಿದ್ದ ಡಿ.ವಿ.ಎಸ್‌ನ ಆಡಳಿತ ಮಂಡಳಿಯ ಮಾನಗೇಡಿ ಕೆಲಸಗಳು ಮತ್ತೊಮ್ಮೆ ಸುದ್ದಿಯಾಗಿ, ಸರ್ಕಾರವೇ ಆಡಳಿತ ಮಂಡಳಿಯನ್ನು ಕಿತ್ತೊಗೆದು ಬೀದಿಗೆ ಹಾಕಿದೆ.

ನುಂಗಣ್ಣ ಯಡ್ಡಿಯ ಎಡವಟ್ಟು ಪುತ್ರರು



ರಾಘವೇಂದ್ರ



ವಿಜಯಕುಮಾರ್

ಅಲ್ಲಿ ಕಟ್ಟಾ ಸುಬ್ರಮಣ್ಯ ನಾಯ್ಡು, ಆರ್. ಅಶೋಕ್ ಎಂಬ ಸಚಿವದ್ವಯರು ಭೂಸ್ವಾಹದಲ್ಲಿ ಮುಳುಗಿದ್ದರೆ, ಚೆಲುವರಾಯಸ್ವಾಮಿ ಎಂಬ ಗಡವ ಸಾರಿಗೆಯನ್ನು ಸಾರು ಕುಡಿದಂತೆ ಕುಡಿಯುತ್ತಿದ್ದಾನೆ.

ಇಲ್ಲಿ ಚೆಡ್ಡಿ ಯಡಿಯೂರಪ್ಪ ತಾನೂ ತಿನ್ನುವುದಷ್ಟೇ ಅಲ್ಲದೇ ತನ್ನ ಪುತ್ರರತ್ನರಿಬ್ಬರನ್ನು ಮೇಯಲು ಬಿಟ್ಟಿದ್ದಾನೆ. ವಿರೋಧ ಪಕ್ಷದ ನಾಯಕನಾಗಿದ್ದಾಗಲೇ ಒಂದು ಮಂಗಲಭವನ, ಪದವಿ ಕಾಲೇಜು, ಶಿಕಾರಿಪುರದ ಹೊರವಲಯದಲ್ಲಿ ಕಂಡಕಂಡ ಕಡೆ ಅಪಾರ ಆಸ್ತಿ ಗಳಿಸಿರುವ ಯಡಿಯೂರಪ್ಪನಿಗೆ ಉಪಮುಖ್ಯಮಂತ್ರಿ ಪದವಿ ಸಿಕ್ಕರೆ ನುಂಗುವ ಚಟ ದ್ವಿಗುಣಗೊಳ್ಳದೇ ಇರುತ್ತಾ? ಯಡ್ಡಿಯ ಪುತ್ರರಿಬ್ಬರೂ ಈ ಕಾಯಕದಲ್ಲಿ ಸಹಕರಿಸುತ್ತಿರುವುದರಿಂದ ಯಡ್ಡಿಗೆ ಆನೆಬಲ ಬರದೇ ಇರುತ್ತಾ? ಈ ಆರು ಕೈಗಳು, ಮೂರು ಬಾಯಿಗಳು ಇಡೀ ಶಿವಮೊಗ್ಗವನ್ನೇ ಹುರಿದು ಮುಕ್ಕುತ್ತಿವೆ.


ಯಡ್ಡಿ ಡಿಸಿಎಂ ಚೇರಲ್ಲಿ ಕೂಡುತ್ತಿದ್ದಂತೆ ಇತ್ತ ಶಿವಮೊಗ್ಗದ ಹುಲ್ಲುಗಾವಲಿಗೆ ಮುತ್ತಿಗೆ ಹಾಕಿಬಿಟ್ಟ ಈ ಎರಡು ಬಿಡಾಡಿ ದನಗಳ ಹೆಸರು ವಿಜಿ ಯಾನೆ ವಿಜಯಕುಮಾರ್, ರಘು ಅಲಿಯಾಸ್ ರಾಘವೇಂದ್ರ.

ಸದ್ಯಕ್ಕೆ ಶಿವಮೊಗ್ಗದಲ್ಲಿ ತಮ್ಮ ದಿವಂಗತ ಪ. ಮೈತ್ರಾದೇವಿಯವರ ಹೆಸರಿನಲ್ಲಿ ಕಾಲೇಜು ಮತ್ತು ಆಸ್ಪತ್ರೆ ನಡೆಸುವ ಯಡ್ಡಿ ಕುಟುಂಬ ತಾವರೆಕೊಪ್ಪದ ಬಳಿಯ 100 ಎಕರೆ ಜಮೀನು ಖರೀದಿಸಿ ಕುಳಿತಿದೆ. ಇನ್ನೊಂದೆಡೆ 'ಜನ ಶಿಕ್ಷಣ ಸಂಸ್ಥೆ'ಯೆಂಬ ಎನ್.ಜಿ.ಓ ತರಹದ ಸಂಸ್ಥೆ ಮಾಡಿ ಕೇಂದ್ರ, ರಾಜ್ಯ ಸರ್ಕಾರಗಳಿಂದ ಕೋಟ್ಯಂತರ ಹಣವನ್ನು ಹೊಡೆಯಲಾಗುತ್ತಿದೆ. ಈ ಜನಕಂಟಕ ಸಂಸ್ಥೆಗೆ ಯಡ್ಡಿಯ ಹಿರಿಮಗಳು ಅರುಣಾಳ ಗಂಡ ಲಕ್ಷ್ಮಿನಾರಾಯಣ ಕಾಶಿಯೇ ನಿರ್ದೇಶಕ! ಯಡ್ಡಿಯೇ ಇದಕ್ಕೆ ಗೌರವಾಧ್ಯಕ್ಷ!

ಯುವಕ ಯುವತಿಯರಿಗೆ ವಿವಿಧ ಬಗೆಯ ತರಬೇತಿ ನೀಡುವ ಈ ಸಂಸ್ಥೆ ಸರ್ಕಾರಗಳಿಂದ ಫಂಡು ನುಂಗುವುದಲ್ಲದೇ, ತರಬೇತಿಗೆ ಬಂದವರಿಂದಲೂ ದೊಡ್ಡ ಮೊತ್ತದ ಫೀಸನ್ನೂ ಎತ್ತುತ್ತದೆ. ಯಡ್ಡಿ ಡಿಸಿಎಂ ಆದ ಮೇಲೆ ರಾಜ್ಯದ ತುಂಬಾ ಈ ಜನಕಂಟಕ ಸಂಸ್ಥೆ ತಲೆ ಎತ್ತಿ ಹಣ ದೋಚುತ್ತಿದೆ. ಇದೆ ಲಕ್ಷ್ಮಿನಾರಾಯಣ ಕಾಶಿಗೆ ಲೆಕ್ಕಗಿಕ್ಕ, ಬುಕ್ಕು ಗಿಕ್ಕು ಒಂದೂ ಅವಶ್ಯವೇ ಇಲ್ಲ, ದೋಚುವವನಿಗೆ ಪೆನ್ನು, ಪುಸ್ತಕವಾದರೂ ಯಾಕೆ ಬೇಕು?

ರಾಘ್ಯಾನ ರಂಪಾಟ!

ಶಿಕಾರಿಪುರಕ್ಕೊಬ್ಬ ಯುವ 'ಚಕ್ರವರ್ತಿ' ಉದಯಿಸಿದ್ದಾನೆ. ಅವನು ಯಡ್ಡಿಯ ಎರಡನೇ ಪುತ್ರ ರಾಘವೇಂದ್ರ. ಅಲ್ಲಿ ಕುಮಾರಣ್ಣ 'ಜನತಾದರ್ಶನ' ಮಾಡುವುದನ್ನು ನೋಡಿ 'ಪ್ರಭಾವಿತ'ನಾದ ಈ ರಾಘು ತಾನೂ ಶಿಕಾರಿಪುರದಲ್ಲಿ ಮಿನಿ ಜನತಾ ದರ್ಶನ ಎಂಬ ಡ್ರಾಮಾ ಶುರು ಮಾಡಿದ್ದಾನೆ. ಆದರೆ ಈ ದರ್ಶನದಲ್ಲಿ ಜನತೆ ಎಂದರೆ ಬಡಬಗ್ಗರಲ್ಲ, ದುಡ್ಡಿರುವ ದೋ ನಂಬರ್ ಕುಳಗಳಷ್ಟೇ!



ಯಡಿಯೂರಪ್ಪನ ಶಿಕಾರಿಪುರದ ಮನೆಗೆ ನಿತ್ಯ ಬರುವ ನೂರಾರು ಮಂದಿ ತಮ್ಮ ಅಹವಾಲು ಸಲ್ಲಿಸುವುದು ಈ ರಾಘುನ ಮುಂದೆಯೇ. ಸಣ್ಣಪುಟ್ಟ ಸರ್ಕಾರಿ ಕೆಲಸಕ್ಕೂ 20 ರಿಂದ 30 ಸಾವಿರ ಪ್ರಸಾದ ಕೊಟ್ಟರಷ್ಟೇ ಈ ರಾಘವೇಂದ್ರ ಸ್ವಾಮಿಗೆ ಆಶೀರ್ವಾದ ದೊರೆಯುವುದು.

ಇತ್ತೀಚೆಗೆ ಬೆಂಗಳೂರು ಮತ್ತು ಗುಲ್ಬರ್ಗಾ ಡಿವಿಜನ್ ಕೆಎಸ್‌ಆರ್‌ಟಿಸಿಯಲ್ಲಿ ಡ್ರೈವರ್ ಪೋಸ್ಟ್‌ಗೆ ಅರ್ಜಿ ಕರೆದಾಗ ಶಿವಮೊಗ್ಗದ ಸಾವಿರಾರು ನಿರುದ್ಯೋಗಿ ಯುವಕರು ಯಡ್ಡಿ ಮನೆಯತ್ತ ಬಂದರೆ ಅಲ್ಲಿ ಡಿಸಿಎಂರ ಕೊಳಕು ಪುತ್ರ ರಾಘು ಪ್ಲೇಟು ಇಟ್ಟುಕೊಂಡು ಕುಳಿತುಬಿಟ್ಟಿದ್ದ. ಇವನಿಗೆ spoon ಬಳಸುವುದು ಗೊತ್ತೇ ಇಲ್ಲ; ಎರಡೆರಡು ಕೈಗಳಿಂದಲೂ ಗೆಬರಿ ಗೆಬರಿ ತಿನ್ನಬಲ್ಲಷ್ಟು ಹಣಬಾಕನಿವನು!

ದುಡ್ಡಿಲ್ಲದವರನ್ನು ಬೇಗ ಸಾಗಿ ಹಾಕುವ ರಾಘು, ಜೇಬು ಗಟ್ಟಿಯಿದ್ದವರನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಕೊಟ್ಟ ದುಡ್ಡಿನ ಮೊತ್ತಕ್ಕೆ ತಕ್ಕಂತೆ A,B,C,D ಎಂದು ವಿಂಗಡಣೆ ಮಾಡುತ್ತಾನೆ. ನಂತರ ಅಧಿಕಾರಿಗಳನ್ನು ಬೆದರಿಸಿ ತನ್ನ ಕೆಲಸ ಸಾಧಿಸುತ್ತಾನೆ. ಅಧಿಕಾರಿಗಳು ಮಾತು ಕೇಳದಿದ್ದರೆ ಬೋ-ಮಗ, ಸೂ-ಮಗ ಎಂಬ ಸಂಸ್ಕೃತ ಮಂತ್ರ ಜಪಿಸೇ ಬಿಡುತ್ತಾನೆ ಈ ರಾಘವೇಂದ್ರ!

ಇಂತಹ ತಿನ್ನಬಾಕ ರಾಘನಿಗೊಬ್ಬ ದೋಸ್ತ್ ಇದ್ದಾನೆ. ಬಿಜೆಪಿಯ ಘಟಿಂಗರಿಗೆಲ್ಲ ತಾನೇ 'ಗುರು' ಎಂಬಂತೆ ವರ್ತಿಸುವ ಈ ಅಡ್ನಾಡಿಯ ಹೆಸರು ಗುರುಮೂರ್ತಿ..... ಸಗಣಿ ತಿನ್ನುವುದೇ ಇವನಿಗೆ ಕೀರ್ತಿ! ಒಮ್ಮೊಮ್ಮೆ ರಾಘುವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ ಈ ಗುರು ಮೂರ್ತಿ! ಅಷ್ಟೊಂದು ಹಸಿವಿದೆ ಈತನಿಗೆ. ಹಲವಾರು ಸಲ ರಾಘು, ಗುರುಮೂರ್ತಿಗಳ ನಡುವೆ ಜಗಳಗಳಾಗುತ್ತವೆ, ಮತ್ತೆ ತಣ್ಣಗಾಗುತ್ತವೆ. ಕಬಳಿಕೆಯ ಕಳ್ಳರು ಆಪ್ತ ಮಿತ್ರರೇ ಅಲ್ಲವೇ?

ಮನೆಯಲ್ಲಿ ಕುಳಿತೇ ಡೀಲಿಂಗ್ ನಡೆಸುವ ರಾಘು 8-10 ಘಟಿಂಗರನ್ನು ಕಟ್ಟಿಕೊಂಡು ತಿರುಗುವುದರಲ್ಲಿ ಶೂರ. ಹಿಂದೊಮ್ಮೆ ಈ ಗ್ಯಾಂಗ್‌ಗೆ ಜನರೇ ಹಿಡಿದು ತದುಕಿ ಕಳಿಸಿದ್ದರು. ಮಗನ ಉಪಟಳ ಜಾಸ್ತಿಯಾಯ್ತು ಎಂದು ಯಡಿಯೂರಪ್ಪ ಗುರುಮೂರ್ತಿ ಎಂಬ ಬಕಾಸುರನಿಗೆ ಮನೆಯ ವ್ಯವಹಾರ ನೋಡಿಕೊಳ್ಳಲು ಕೊಟ್ಟರು. ಡಿಸಿಎಂ ಪಟ್ಟ ಸಿಕ್ಕ ಮೇಲೆ ರಾಘವೇಂದ್ರನಿಗೇ ಶಿಕಾರಿಪುರದ ಸಕಲ ಜವಾಬ್ದಾರಿ ನೀಡಿಬಿಟ್ಟರು ಯಡ್ಡಿ. ಏಕೆಂದರೆ ಹರಿಹರದ ಮಾಜಿ ಸಚಿವ ವೈ. ನಾಗಪ್ಪನ ಪುತ್ರ ಕಿರಣ್ ತರಹ ರಾಘು ಸಾವಿಗೆ ಶರಣಾಗುತ್ತಾನೆ ಎಂಬ ಭಯ ಕಾಡುತ್ತಿತ್ತು ಯಡ್ಡಿಗೆ. ಈಗ 'ಬೆಳೆದು' ಬಿಟ್ಟಿರುವ ರಾಘು ಟ್ರಾನ್ಸ್‌ಫರ್ ದಂಧೆ, ನೌಕರಿ ಕೊಡಿಸುವ ದಂಧೆಗಳ ಫೈಲ್‌ಗಳನ್ನು ಯಡ್ಡಿಯ ಪಿ.ಎ. ಚಂದ್ರಶೇಖರ್ ಎಂಬ ವಂಚಕನಿಗೆ ಕಳುಹಿಸುವುದಷ್ಟೇ ತಡ, ಎಲ್ಲ ಫೈಲ್‌ಗಳಿಗೂ ಗ್ರೀನ್ ಸಿಗ್ನಲ್ ಸಿಕ್ಕೇಬಿಡುತ್ತದೆ.

ವಿಜಿ-ಈಗ ಫುಲ್ ಬಿಜಿ!

ತಮ್ಮ ರಾಘುವೇ ಕೋಟಿ ಕೋಟಿ ಕಬಳಿಸುತ್ತಿರುವಾಗ ಅಣ್ಣ ವಿಜಿ ಅಲಿಯಾಸ್ ವಿಜಯಕುಮಾರನಾದರೂ ಹೇಗೆ ಸುಮ್ಮನಿದ್ದಾನು? ಆತ ಶಿವಮೊಗ್ಗದ ವಿನೋಬಾನಗರದ ಬೃಹತ್ ಬಂಗಲೆಯಲ್ಲಿ ಕುಳಿತು ಸ್ಟೇಟ್-ಲೆವೆಲ್ ರಾಬರಿ ಮಾಡುತ್ತಲೇ ಇದ್ದಾನೆ. ಯಡ್ಡಿ



ಅಶ್ವಥನಾರಾಯಣ

...ಹಣ ಎತ್ತುವುದರಲ್ಲೇ ಕಾಲ ಕಳೆದ ಆಡಳಿತ ಮಂಡಳಿಯು ಆರ್.ಎಸ್. ಅಶ್ವಥ್ ನಾರಾಯಣರಾಗಲಿ, ವೆಂಕಟೇಶ್ ಮೊದಲಿಯಾರ್‌ರಾಗಲಿ ಲೆಕ್ಕ ಪತ್ರಗಳನ್ನು ಮೇಂಟೇನ್ ಮಾಡಲೇ ಇಲ್ಲ.

1953-54 ರಲ್ಲಿ ಆರಂಭವಾದ ಈ ಸಂಸ್ಥೆ ಬಹುದೊಡ್ಡ ಸಂಸ್ಥೆಯಾಗಿ ಬೆಳೆದಿತ್ತು. ಆದರೆ ಕಳೆದ 30-35 ವರ್ಷಗಳಿಂದ ಯಾವುದೇ ಲೆಕ್ಕಪತ್ರಗಳು ಸರ್ಕಾರದ ಇಲಾಖೆಯ ಬಾಗಿಲಿಗೆ ಬರಲೇ ಇಲ್ಲ. ಎಂಟನೇ ತರಗತಿಯಿಂದ ಹಿಡಿದು ಪದವಿವರೆಗೆ 15ರಿಂದ 20 ಸಾವಿರದವರೆಗೆ ಡೊನೇಷನ್ ಕೀಕುತ್ತಲೇ ಬರಲಾಗಿದೆ. ಡೊನೇಷನ್ ಪಡೆಯುವುದರಲ್ಲಿ ಸ್ವತಂತ್ರ ಪಿ.ಯು. ಕಾಲೇಜ್, ಸಂಯುಕ್ತ ಪದವಿಪೂರ್ವ ಕಾಲೇಜ್, ಡಿ.ವಿ.ಎಸ್. ಸೀನಿಯರ್, ಕಾಂಪೋಜಿಟ್ ಕಾಲೇಜ್‌ಗಳ ಮಧ್ಯೆ ಬಿರುಸಿನ ಸ್ಪರ್ಧೆ ಇದ್ದೇ ಇರುತ್ತದೆ.


ಕಳೆದ ಒಂದೂವರೆ ವರ್ಷಗಳಿಂದ ಈ ಆಡಳಿತ ಮಂಡಳಿಗೆ ಆಯ್ಕೆಗೊಳ್ಳುವ ವಿಚಾರದಲ್ಲಿ ತಗಾದೆಗಳು ಇವೆ. ಯಾವುದೇ ಲೆಕ್ಕಪತ್ರಗಳನ್ನು ನೋಂದಣಾಧಿಕಾರಿಗೆ ಸಲ್ಲಿಸಿಲ್ಲ. ಸರ್ವಸದಸ್ಯರ ಸಭೆ ಕರೆದು ಆಡಳಿತ ಮಂಡಳಿಯ ಕಾರ್ಯವೈಖರಿ ಬಗ್ಗೆ ಚರ್ಚೆ ನಡೆಸಿಲ್ಲ. ಸಿಕ್ಕಿದ್ದನ್ನು ಬಕಾಸುರರಂತೆ ಬಾಚುತ್ತಲೇ ಬಂದರು. ನೋಂದಣಾಧಿಕಾರಿಗಳು ಹಲವಾರು ಬಾರಿ ಡಿ.ವಿ.ಎಸ್.ಗೆ ನೋಟೀಸ್ ಹಚ್ಚಿ ಸುಸ್ತಾಗಿದ್ದಷ್ಟೇ ಬಂತು. "ಆಡಳಿತಕ್ಕೆ ಸಂಬಂಧಿಸಿದ ವ್ಯಾಜ್ಯ ನ್ಯಾಯಾಲಯ ದಲ್ಲಿರುವುದರಿಂದ ಚುನಾವಣೆ ನಡೆಸಿಲ್ಲ. ಲೆಕ್ಕಪತ್ರ ಕೊಟ್ಟಿಲ್ಲ, ಸಭೆ ಕರೆದಿಲ್ಲ" ಎಂದು ಡಿ.ವಿ.ಎಸ್. ತಿಪ್ಪೆ ಸಾರಿಸಲು ನೋಡಿತು.

90 ಪರ್ಸೆಂಟ್ ಪಡೆದವರನ್ನು ಸೇರಿಸಿಕೊಂಡು ರ‍್ಯಾಂಕ್ ತರುವ ಕಾಲೇಜೊಂದಕ್ಕೆ 'ಶ್ರೇಷ್ಠ' ಎಂಬ ಹಣೆಪಟ್ಟಿ ನೀಡಲಾಗುತ್ತದೆಯೇ?

-ವರದಿಗಾರ

ಕೆ.ಎ. ಚಂದ್ರಶೇಖರ ವಿಜಯ ಜೇಬಲ್ಲೇ ಇದ್ದಾನೆ. ಯಡ್ಡಿ ಡಿಸಿಎಂ ಆದ ತಕ್ಷಣ ಕಚೇರಿಯಲ್ಲಿನ ಅಂಬೇಡ್ಕರ್ ಭಾವಚಿತ್ರ ತೆಗೆದು ಒಗೆದಿದ್ದ ಮುಠ್ಠಾಳ ಈ ಚಂದ್ರಶೇಖರನೇ.

ಶಿವಮೊಗ್ಗದ ರಸ್ತೆಗಳು ಹಾಳುಬಿದ್ದು ಹೋಗಿವೆ. ಈಗ ಮಳೆಗಾಲದ ವೇಳೆಯಲ್ಲಿ ಯಡ್ಡಿ ಕಾಮಗಾರಿ ಆರಂಭಿಸುತ್ತಾರಂತೆ.



ಬಿಜೆ, ರಾಘು, ಗುರುಮೂರ್ತಿ, ಕಾಶಿಗಳಿಗೆ ಹಣ ಮಾಡಲಷ್ಟೇ ಈ ಕಾಮಗಾರಿಗಳು ಉಪಯುಕ್ತವಾಗಿವೆ. ಹಿಂದೆ ರೈತರ ಪರವಾಗಿ ಹೋರಾಡಿದಂತೆ ನಟಿಸಿದ್ದ ಯಡ್ಡಿ ಈಗ ಆ ಡ್ರಾಮಾವನ್ನೂ ಮರೆತುಬಿಟ್ಟಿದ್ದಾರೆ. ರಸ್ತೆ ರಿಪೇರಿ ಮಾಡಿಸೋ ಅಂದರೆ ಶಿವಮೊಗ್ಗಕ್ಕೆ ವಿಮಾನ ನಿಲ್ದಾಣ ಮಾಡ್ತೀನಿ ಎಂದ ಈ ಜಿಲ್ಲಾ ಉಸ್ತುವಾರಿ ಡಿಸಿಎಂ ಸಾಹೇಬರು ಸೋಗಾನೆ ಮತ್ತು ಸುತ್ತಮುತ್ತಲ ಹಳ್ಳಿಗಳ ರೈತರನ್ನೆಲ್ಲ ಒಕ್ಕಲೆಬ್ಬಿಸಿ, ವಿಮಾನ ನಿಲ್ದಾಣ ಕಾಮಗಾರಿಯಲ್ಲಿ ಹಡಬೆ ಹಣ ಎತ್ತಲು ಸ್ಕೆಚ್ ಹಾಕಿ ರೆಡಿಯಾಗೇ ಬಿಟ್ಟಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲೀಗ ಚೆಡ್ಡಿಗಳದೇ ಕಾರುಬಾರು. ಕಾಲು ಕೆರೆದು ಜಗಳಕ್ಕೆ ಬೀಳುತ್ತಿರುವ ಚೆಡ್ಡಿಗಳನ್ನು ಕಂಡು ಸಾಮಾನ್ಯ ಜನ ಭಯಗೊಂಡಿದ್ದಾರೆ.

ದಶಕಗಳ ಕಾಲ ಅಧಿಕಾರದ ಹಸಿವಿನಿಂದ ಬಳಲಿದ ಯಡ್ಡಿ ಬೊಬ್ಬೆಗೆ ಹಣಕಾಸು ಖಾತೆ, ಡಿಸಿಎಂ ಪಟ್ಟ ಕೊಟ್ಟರೆ ಸುಮ್ಮನಾಗುತ್ತೆ? ಜೊತೆಗೆ ಶಿವಮೊಗ್ಗದ ಉಸ್ತುವಾರಿಯೂ ... ಸಿಕ್ಕರೆ ಆತನ ಮಕ್ಕಳು, ಅಳಿಯಂದಿರು ... ಸುಮ್ಮನಿರುತ್ತಾರೆಯೇ?

ಶಿವಮೊಗ್ಗ ಸೊರಗುತ್ತಿದೆ.

ಯಡ್ಡಿ ಫ್ಯಾಮಿಲಿ ಕೊಬ್ಬುತ್ತಿದೆ... ಬಲಿಯುತ್ತಿದೆ.

-ರಮೇಶ್


ಕೊಪ್ಪಳ: 'ಚೌರ ಭಾರತಿ'ಯ ಗೊಂಡಬಾಳ ಮಂಜ್ಯಾ!

ವರ್ಷ-ಎರಡು ವರ್ಷಕ್ಕೊಮ್ಮೆ ಕೊಪ್ಪಳದ ಹೆಸರು ಕೆಡಿಸಿ, ತನ್ನ ಹೆಸರು ಹಾಳು ಮಾಡಿಕೊಂಡು ನಂಬಿ ಬಂದವರನ್ನು ಅಯ್ಯೋ ದೇವರೇ ಅನ್ನಿಸದಿದ್ದರೆ ಈ ಮಂಜುನಾಥ ಗೊಂಡಬಾಳ ಎಂಬ ಅವಿವೇಕಿ ಆಸಾಮಿಗೆ ನೆಮ್ಮದಿ ಇಲ್ಲವೇನೋ?

ಇವತ್ತು ಕೊಪ್ಪಳದಲ್ಲಿ ಗೊಂಡಬಾಳ ಮಂಜ್ಯಾ ಎಂಬ ಹೆಸರು ಕೇಳಿದರೆ ರಾಜಕಾರಣಿಗಳು, ಅಧಿಕಾರಿಗಳು, ಸಂಘ ಸಂಸ್ಥೆಯವರು ಬೆಚ್ಚಿ ಬೀಳುತ್ತಾರೆ. ಹುಟ್ಟುತ್ತಲೇ ಹೀನ ಸುಳಿ ಹೊಂದಿರುವ ಮಂಜ್ಯಾ ಮಾಡೋದೆಲ್ಲ ಬರೀ ಚಾರ್ ಸೌ ಬೀಸ್ ಕೆಲಸ. ಇಂತಹ ಅವಿವೇಕಿ ಮಂಜ್ಯಾ ಮೊನ್ನೆ ಜೂನ್ 3,4 ರಂದು ಗುಲ್ಬರ್ಗಾ ವಿಭಾಗ ಮಟ್ಟದ ಯುವಜನ ಮೇಳ ಮಾಡಲು ಹೋಗಿ, ತನ್ನ ಸ್ಟೇಜ್ ತೆವಲು ತೀರಿಸಿಕೊಂಡ. ಮೇಳಕ್ಕೆ ಬಂದವರಿಗೆಲ್ಲ ನಾಷ್ಟಾದಲ್ಲಿ ಹುಳು, ಕೂದಲು, ಗಾಜಿನ ಚೂರು, ಸತ್ತ ಇರುವೆ ಕೊಟ್ಟ. ನೀರು ಊಟ, ವಸತಿ ಇಲ್ಲದೆ ಪರದಾಡಿದವರು ಒದೆಯಲು ಹೋದಾಗ ತಪ್ಪಿಸಿಕೊಳ್ಳಲು ಸಾಹಿತ್ಯ ಭವನದಿಂದ ಪಾರಾಗಿ ಸನ್ಮಾನ ಹೋಟೆಲ್‌ನಲ್ಲಿ ಇದ್ದಿ ತಿಂದು ಬಚಾವಾಗಿದ್ದಾನೆ. ಅಲ್ಲಿಂದಲೇ ಕೆಲವರಿಗೆ ಫೋನ್ ಮಾಡಿ ಜಗಳ ತಣ್ಣಗಾಯಿತಾ? ಈಗ ನಾನು ಬರಬಹುದಾ? ಎಂದು ಕೇಳಿದ ವೀರ ಯುವಕನೀತ. ಕೊನೆಗೆ ಗುಲ್ಬರ್ಗದ ಯುವಜನ ಮತ್ತು ಕ್ರೀಡಾ ಇಲಾಖೆಯ ಜಂಟಿ ನಿರ್ದೇಶಕ ಪಾಟೀಲ್ ಕ್ಷಮೆ ಕೇಳಿ ಎಲ್ಲವನ್ನೂ ತಣ್ಣಗೆ ಮಾಡಿದ್ದಾನೆ.

ಕಾಲೇಜ್ ಓದುವಾಗಲೇ ಕಾರ್ಯಕ್ರಮಗಳ ನಿರೂಪಣೆಗೆ ನಿಂತ ಈ ಮಂಜ್ಯಾ ಕಾರ್ಯಕ್ರಮದ ಅಧ್ಯಕ್ಷರ ಭಾಷಣವನ್ನೇ ಕುಟ್ಟಿ ಬಿಡುತ್ತಿದ್ದ, ಆ ಪರಿ ಸ್ಟೇಜು, ಮೈಕಿನ ತೆವಲು ಹತ್ತಿತ್ತು ಇವನಿಗೆ. ಕಾಲೇಜ್ ಮುಗಿದ ಮೇಲೆ ಬ್ಲೂಸ್ಟಾರ್ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ ಮಾಡಿ ಎಂತೆಂಥವೋ ಕಾರ್ಯಕ್ರಮ ಮಾಡಿದ. ತನಗೆ ನೆಟ್ಟಗೆ ನೂರು ಮೀಟರ್ ಓಡಲಾಗದಿದ್ದರೂ, ಸಾಹಸ ಶಿಬಿರಗಳನ್ನು ಏರ್ಪಡಿಸಿ ದಾರಿಯಲ್ಲಿ ಹೋಗೋ ದಾಸಯ್ಯರನ್ನೆಲ್ಲ ಕರೆದು ಸೊಂಟಕ್ಕೆ ಹಗ್ಗ ಕಟ್ಟಿ ಬಂಡೆಗಳ ಮೇಲೆ ನಿಲ್ಲಿಸಿ ಫೋಟೋ ತೆಗೆಸಿ ಪ್ರೋಗ್ರಾಂ ಸಕ್ಸಸ್ ಎಂದ.

ಪ್ರಚಾರದ ತೀಟೆ ಹತ್ತಿದ ಕ್ಷಣ ಕೊಪ್ಪಳದಲ್ಲಿ ಕಂಡದ್ದಕ್ಕೆಲ್ಲ ಸ್ವಾಗತ, ಖಂಡನಾ ಹೇಳಿಕೆ ಕೊಡತೊಡಗಿದ. ಯಾರ‍್ಯಾರನ್ನೋ ಗೆಸ್ಸು ಮಾಡಿ ಅವರಿಂದ ಪೆಚ್ಚ ಅಂತ ಸುಲಿಯುತ್ತ ದುಂಡಗಾದ. ತಾಲೂಕಿನ ಯುವ ಸಂಘಗಳ ಮೇಲೆ ಹಿಡಿತ ಸಾಧಿಸಲು ತಾನು ಯುವಜನ ಕ್ರೀಡಾಧಿಕಾರಿ ಎಂದು ಹೇಳಿಕೊಂಡ. ಈಗ ಆಕಾಶವಾಣಿ ರಿಪೋರ್ಟರ್ ಎನ್ನುತ್ತಾನೆ. ಪೇಪರ್ ಕಟ್ಟಿಂಗ್ಸ್‌ಗಳನ್ನೆಲ್ಲ ಸೇರಿಸಿ ರಾಜ್ಯ ಯುವ ಪ್ರಶಸ್ತಿಗೆ ಅರ್ಜಿ ಕೊಟ್ಟ. ಅದನ್ನು ಯುವಜನ ಕ್ರೀಡಾಧಿಕಾರಿ ಮೂಸಿಯೇ ನೋಡದೆ ಮೂಲೆಗೆ ಒಗೆದಾಗ ಒಂದಿನ ರಾತ್ರಿ ಆ ಅಧಿಕಾರಿ ಕಚೇರಿ ಬಾಗಿಲು ಮುರಿದು ಕಾಗದ ಪತ್ರ ಹೊಡೆದು, ಸುಳ್ಳು ಹೇಳಿ ಡಿ.ಸಿ. ಸಹಿ ಮಾಡಿಸಿಕೊಂಡು ತಾನೇ ಬೆಂಗಳೂರಿಗೆ ಒಯ್ದು ರಾಜ್ಯ ಯುವ ಪ್ರಶಸ್ತಿ ಹೊಡಕೊಂಡು ಬಂದ. ಆಮೇಲೆ ಜಿಲ್ಲಾ ಯುವ ಕಾಂಗ್ರೆಸ್ ಪದಾಧಿಕಾರಿ ಎಂದು ಹೇಳುತ್ತಲೇ ಕರೆಯದಿದ್ದರೂ ವಿಜಯ ಮಲ್ಯನ ಜನತಾ ಪಾರ್ಟಿ ಸೇರಿದ. ... ಪರವಾಗಿ ತಾಲ್ಲೂಕು ಮಟ್ಟದ ಸ್ಲೋ ಸೈಕ್ಲಿಂಗ್ ಸ್ಪರ್ಧೆ ಏರ್ಪಡಿಸಿದ.



ಮಂಜುನಾಥ

ಮೂರು ವರ್ಷಗಳ ಹಿಂದೆ 'ಯುವ ಕೊಪ್ಪಳ' ಪತ್ರಿಕೆ ಆರಂಭಿಸುತ್ತೇನೆಂದು ಚಂದಾ ಎತ್ತಿ ಪತ್ರಿಕೆ ಕಳಿಸದೇ ಚಂದಾದಾರರಿಂದ ಕೊಪ್ಪಳದ ನಡುಬೀದಿಯಲ್ಲಿ ಉಗಿಸಿಕೊಂಡ. ಕೊನೆಗೆ 2004 ರಲ್ಲಿ ಚೆಡ್ಡಿ ತೊಟ್ಟ ಮಂಜ್ಯಾ ಬಿಜೆಪಿಯನ್ನು ಅಟ್ಟಕ್ಕೇರಿಸಿ 'ಕೊಪ್ಪಳ ಉದಯ' ಎಂಬ ವಾರ ಪತ್ರಿಕೆ ತಂದ. ಆಗ ಬಿಜೆಪಿ ಕೊಪ್ಪಳದಲ್ಲಿ ಬಕ್ಕಬಾರಲು ಬಿತ್ತು, ಜೊತೆಗೆ ಈತನ ಪತ್ರಿಕೆ ಕೂಡ. ಅಂದಿನಿಂದ ಕೆಲ ಕಚೇರಿಗಳಲ್ಲಿ ತಾನು ಪತ್ರಕರ್ತ ಅಂತ ಹೇಳಿಕೊಂಡು, ಅಧಿಕಾರಿಗಳಿಗೆ ಏನೇನೋ ಮಾಹಿತಿ ಕೇಳಿ ಕಂಪ್ಲೆಂಟ್ ಮಾಡ್ತೀನಿ ಅನ್ನತೊಡಗಿದ. ಜೊತೆಗೆ ಇಲಾಖೆಯ ಪ್ರಿಂಟಿಂಗ್‌ಗಳನ್ನು ತನ್ನ ಐಶ್ವರ್ಯ ಪ್ರಿಂಟರ್ಸ್‌ಗೆ ನೀಡಬೇಕೆಂದು ಅಗ್ರಿಮೆಂಟ್ ಮಾಡಿಕೊಂಡ. ಇತ್ತೀಚೆಗೆ ಯಾರೇ ಎದುರಾಗಲಿ ಡೈಲಿ ಪೇಪರ್ ಮಾಡ್ತೀನಿ ಅಂತ 27 ರೀಲಿನ ಸಿನಿಮಾ ... ಇತ್ತೀಚೆಗೆ ...

ಇತ್ತೀಚೆಗೆ ಸ್ವರಭಾರತಿ ಅಲಿಯಾಸ್ ಚೌರ ಭಾರತಿ ಸಂಸ್ಥೆಯ ಈ ಮಂಜುನಾಥ ಗೊಂಡಬಾಳ ಮೊನ್ನೆ ಜೂನ್ 3,4 ರಂದು ಕೊಪ್ಪಳದಲ್ಲಿ ಗುಲ್ಬರ್ಗಾ ಮಟ್ಟದ ಯುವಜನ ಮೇಳ ಆಯೋಜಿಸಿದ. ಇದೇ ನೆಪದಲ್ಲಿ ತನ್ನದೇ ತಗಡು ಪ್ರಿಂಟಿಂಗ್ ಪ್ರೆಸ್‌ನಲ್ಲಿ ಸಂಪಾದಕರೇ ಇಲ್ಲದ 'ಯುವ ಚೇತನ' ಎಂಬ ಸ್ಮರಣ ಸಂಚಿಕೆ ಮಾಡಿದ್ದಾನೆ. ಅದರಲ್ಲಿ ಡಿ.ಸಿ. ನವೀನ್ ರಾಜ್‌ಸಿಂಗ್, ಸಚಿವರುಗಳಾದ ಹನುಮಂತಪ್ಪ ಅಲ್ಕೋಡ್, ಇಕ್ಬಾಲ್ ಅನ್ಸಾರಿ, ಸಂಸದ ವಿರುಪಾಕ್ಷಪ್ಪ, ಜಿ.ಪಂ. ಅಧ್ಯಕ್ಷ-ಉಪಾಧ್ಯಕ್ಷರ ಜೊತೆಗೆ ತನ್ನದೂ ಒಂದು ಸಂದೇಶ ಹಾಕಿಕೊಂಡಿದ್ದಾನೆ ಈ ಕತ್ತೆ ಬಡವ. ಒಟ್ಟು 34 ಪುಟಗಳ ಸಂಚಿಕೆಯಲ್ಲಿ ಎಲ್ಲಿಯೂ ಕ್ರೀಡೆ, ಯುವ ಜನರ ಬಗ್ಗೆ ಲೇಖನಗಳಿಲ್ಲದೇ, ಬರೀ ಗುಡಿಗುಂಡಾರಗಳ ಲೇಖನ ಹಾಕಿದ್ದಾನೆ.

ಈ ಮೇಳಕ್ಕೆ ಸರ್ಕಾರ 75 ಸಾವಿರ ಕೊಟ್ಟರೂ ನಯಾಪೈಸೆ ಖರ್ಚು ಮಾಡದೇ, ಮೇಳದ ಹಿಂದಿನ ರಾತ್ರಿ ಬೀದರ್‌ನ ಬಮಕೇಡ್‌ನಿಂದ ಬಂದವರಿಗೆ ವಸತಿ ವ್ಯವಸ್ಥೆ ಮಾಡದೇ ಬೆಳಿಗ್ಗೆ ಬನ್ನಿ ಎಂದು ಸಾಗ ಹಾಕಿದ್ದಾನೆ. ಯುವಕರಿಗೆ ಬೇಡ, ಯುವತಿಯರಿಗೂ ವಸತಿ ವ್ಯವಸ್ಥೆ ಇಲ್ಲ. ಇನ್ನು ಸ್ನಾನದ ಮಾತಿರಲಿ, ಕುಡಿಯೋಕೂ ನೀರಿಲ್ಲದಂತೆ ಮಾಡಿ ಕಚಡಾ ಉಪಹಾರ, ಊಟ ನೀಡಿ ಸ್ಪರ್ಧಾಳುಗಳಿಂದ ಒದೆ ತಿನ್ನುವ ಸಮಯದಲ್ಲಿ ಪರಾರಿಯಾಗಿಬಿಟ್ಟಿದ್ದಾನೆ. ಇವನ ಕಚಡಾ ಉಪಹಾರ ಚೆಲ್ಲಿದರೆ ಹಂದಿ-ನಾಯಿಗಳೂ ಕೂಡ ತಿಂದಿಲ್ಲ. ಇಂತಹವನ ಪರವಾಗಿ ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷ ಯಂಕಣ್ಣ ಎಂಬ ಯಬ್ಬಂಕ ಕ್ಷಮೆ ಕೇಳಿದ್ದಾನೆ. ಜಾರಕಿಹೊಳಿಯಿಂದ 30 ಸಾವಿರ ಪಡೆದಿರುವ ಬಗ್ಗೆ ವರದಿಯಿದ್ದು ಆತನ ಹೆಸರಲ್ಲಿ ಕಚಡಾ ನೆನಪಿನ ಕಾಣಿಕೆ ನೀಡಿದ್ದಾನೆ. ನಿರ್ಮಿತಿ ಚಂದ್ರಶೇಖರ್‌ನಿಂದ ಪಡೆದ ಹಣ ಎಷ್ಟೋ?

ಯುವಜನ ಮೇಳದಲ್ಲಿ ಸಕತ್ ದುಡ್ಡು ಮಾಡಿಕೊಂಡು, ಜೀವಮಾನ ನೆನಪಿಡಬೇಕಾದ ಒದೆಗಳಿಂದ ಪಾರಾದ ಚೌರ ಭಾರತಿಯ ಈ ಮಂಜುನಾಥ ಗೊಂಡಬಾಳ ಬಗ್ಗೆ ಕೊಪ್ಪಳ ಜಿಲ್ಲೆಯ ರಾಜಕಾರಣಿ, ಅಧಿಕಾರಿ, ಯುವ ಸಂಘಗಳಿಗೆ ಇನ್ನಾದರೂ ಗೊತ್ತಾದರೆ ಒಳ್ಳೆಯದು.

ತೋರಿಸುತ್ತಿದ್ದಾನೆ. ಅಸಲಿ ಪತ್ರಕರ್ತರು ಎದುರಾದಾಗ ಅವಶ್ಯಕತೆಗಿಂತ ಹೆಚ್ಚಾಗಿ ಬೊಗ್ಗಿ ನಮಸ್ಕಾರ ಮಾಡುತ್ತಾನೆ.

ಇದಕ್ಕೂ ಮುನ್ನ ಬೆಂಗಳೂರಿನ ಕೆಲ ಸಂಘಗಳಿಂದ ಉಚಿತವಾಗಿ ಯಾವ್ಯಾವೋ ಪ್ರಶಸ್ತಿ ಪಡೆದು, ಆ ಸಂಘದ ಪ್ರಶಸ್ತಿ ಕೊಡಿಸುವ ಬ್ರೋಕರ್ ಆಗಿ, ನಿತ್ಯ ಶಿಕ್ಷಕರ ಮನೆಗೆ ಹೊರಟ. ಪೇಟಾದ ಖರ್ಚು ಐದು ಸಾವಿರ ಕೊಡಿ, ಸನ್ಮಾನದ ಖರ್ಚು ನೋಡಿಕೊಳ್ಳಿ ಸಾಕು ಎಂದು ನೂರಾರು ಜನರ ಜೀವ ತಿಂದು ಕೆಲವರಿಗೆ ಪ್ರಶಸ್ತಿಯನ್ನೂ ಕೊಡಿಸಿದ. ಈ ಹಿಂದೆ ಕೆಲವರಿಗೆ ತಾನೇ ಪ್ರಶಸ್ತಿ ಕೊಡಲು ಆರಂಭಿಸಿ ಆದಾಯ ಗಿಟ್ಟದೇ ಸುಮ್ಮನಾಗಿದ್ದ.




ಕೆಲ ವರ್ಷಗಳ ಹಿಂದೆ ಸ್ವರಭಾರತಿ ಗ್ರಾಮೀಣಾಭಿವೃದ್ಧಿ ಎಂಬ ಸಂಸ್ಥೆ ಆರಂಭಿಸಿ ಅದನ್ನು 'ಚೌರ ಭಾರತಿ' ಮಾಡಿಟ್ಟ. ದೂರದ ಕಾತರಕಿಯಲ್ಲಿ ಅನಾಥ ಆಶ್ರಮ ಮಾಡಿ ಅದ್ಯಾವ ಅನಾಥರಿಗೆ ಆಶ್ರಯ ಕೊಟ್ಟನೋ ಗೊತ್ತಿಲ್ಲ, ಕೊನೆಗೆ ಆತನ ಸಂಸ್ಥೆಯೇ ಅನಾಥವಾಗಿ ಈಗ ಭಾಗ್ಯನಗರದ ಮೂಲೆಯಲ್ಲಿ ಬಿದ್ದಿದೆ. ಇಲಾಖೆಗಳ ಯೋಜನೆ ಹೊಡೆದು ಬರೀ ದಾಖಲೆ ಸೃಷ್ಟಿಸಿರುವ ಬಗ್ಗೆ ಸರಿಯಾದ ತನಿಖೆ ನಡೆದರೆ ಸಾಕು ಈ ಮಂಜ್ಯಾ ಎಲ್ಲಿರಬೇಕಾಗುತ್ತೋ ಗೊತ್ತಿಲ್ಲ. ತನಿಖೆ ಮಾಡುವ...

-ಹುಸೇನ್ ಪಾಷಾ

ಹುಬ್ಬಳ್ಳಿ: ಮಟ್ಕಾ ಮುಠ್ಠಾಳ ಮೇತ್ರಾಣಿ ಮಟ್ಟ ಹಾಕುವವರಾರು?

ಕಮರಿಪೇಟೆ ಕರಾಬ್ ಡ್ರಿಂಕ್ಸ್ ಮಾಫಿಯಾದಷ್ಟೇ ಖತರ್‌ನಾಕ್ ಆಗಿದೆ ಈ ಮಟ್ಕಾ ಮುಠ್ಠಾಳರ ಮಾಫಿಯಾ! ಈ ಮಾಫಿಯಾಕ್ಕೆ ನೂರೆಂಟು ವಾರಸುದಾರರಿದ್ದರೂ, ಚಕ್ರವರ್ತಿ ಎನಿಸಿಕೊಂಡವನು ಬಾಕಳೆಗಲ್ಲಿಯ ಮೇತ್ರಾಣಿ.

O.C. (ಓಪನ್, ಕ್ಲೋಸ್) ಎಂದು ತಲೆ ಕೆಡಿಸಿಕೊಂಡವರೆಲ್ಲ ಈ ಮಟ್ಕಾ ಲೂಪ್‌ನಲ್ಲಿ ಸಿಕ್ಕು ಅಲ್ಲೇ ಕ್ಲೋಸ್ ಆಗುತ್ತಿದ್ದಾರೆ. ದುಡಿಯುವ ವರ್ಗವಷ್ಟೇ ಅಲ್ಲದೇ ಇತ್ತೀಚೆಗೆ ಕಾಲೇಜು ಯುವಕರಿಗೂ ಈ ಮಟ್ಕಾ ಹಿಡುಗು ಅಮರಿಕೊಂಡಿದೆ. ಬಡ್ತಿ ಪಡೆದು ಐಜಿಪಿಯಾಗಿರುವ ನಾರಾಯಣ ನಡಮನಿ ಕಣ್ಣಿಗೆ ಮಟ್ಕಾ ಎಂಬುದೊಂದು ಒಲಿಂಪಿಕ್ಸ್ ಗೇಮ್ ತರಹ ಕಂಗೊಳಿಸುತ್ತಿದೆ. ಕಡಕ್ ಆಫೀಸರ್ ಎಂದು ಪೋಸು ಕೊಡುವ ಹುಬ್ಬಳ್ಳಿ ಶಹರ ಸಿಪಿಐ ಬಡಿಗೇರ ರಾತ್ರಿಯೆಲ್ಲಾ ತಾನೇ ಜೀಪ್ ಡ್ರೈವ್ ಮಾಡಿಕೊಂಡು ತಿರುಗೇ ತಿರುಗುತ್ತಾನೆ. ಮಟ್ಕಾ ಮಾತ್ರ ಆತನ ಕಣ್ಣಿಗೆ ಬೀಳುವುದೇ ಇಲ್ಲ, ಏಕೆಂದರೆ ಈ ಬಡಿಗೇರನೇ ಮಟ್ಕಾ ಬಲೆಗೆ ಬಿದ್ದುಬಿಟ್ಟಿದ್ದಾನೆ. ಈ ಮಟ್ಕಾ ಮಾಡು ಬಡಿಗೇರ ತಿರುಗಾಡುವಾಗ ರಾತ್ರಿ 2 ಗಂಟೆಯಾದರೂ ತೆಗೆದೇ ಇರುವ ಸ್ಟೇಷನ್ ರೋಡ್‌ನ ಶೃಂಗಾರ್ ವೈನ್ಸ್ ಶಾಪ್ ನೋಡಿ ಖುಷಿಗೊಂಡು "ಹಿಂಗ ದುಡಿಬೇಕ್ ನೋಡ್ರಿ..... ಇಪ್ಪತ್‌ನಾಕು ತಾಸು ದುಡಿತಾರ ಪಾಪ...." ಎಂದು ಶಹಬಾಸ್‌ಗಿರಿ ಕೊಡುತ್ತಾನೆ. ದುರ್ಗದ ಬೈಲ್‌ನಲ್ಲಿ ರಾತ್ರಿ ಗಿರಮಿಟ್, ಪಾನಿಪುರಿ ವ್ಯಾಪಾರ ಮಾಡುವವರಿಂದ ಯಾವ್ಯಾವನೋ ದುಡ್ಡು ಕೀಳುತ್ತಲೇ ಇದ್ದಾನೆ. ಮೇತ್ರಾಣಿಯ ರಕ್ಷಕನಂತಿರುವ ಬಡಿಗೇರ್‌ಗೆ ಪುಡಾರಿ ಪ್ರಕಾಶ ಉಳ್ಳಾಗಡ್ಡಿ ಮಠ, ಗೂಂಡಾ ಸತೀಶ್ ಮೆಹರವಾಡೆಯ ಶಿಷ್ಯ ಕಿರಣ ಬಾಕಳೆಗಳ ಸಪೋರ್ಟು ಉಂಟು. ಗದಗ್ ರೋಡ್‌ನಲ್ಲಿ ರಾಮು ಹಾಗೂ ರೆಡ್ಡಿ ಎಂಬ ತೆಲುಗು ದೊಂಗರು ನಡೆಸುವ ಮಟ್ಕಾಕ್ಕೂ ಪೊಲೀಸಪ್ಪಗಳ ಸಹಕಾರ ಇದ್ದೇ ಇದೆ. 25 ವರ್ಷಗಳ ಹಿಂದೆ ಸಣ್ಣದಾದ ಸೈಕಲ್ ಅಂಗಡಿ ಇಟ್ಟುಕೊಂಡಿದ್ದ ಮೇತ್ರಾಣಿ ಕ್ರಮೇಣ ಬಡ್ಡಿ ವ್ಯವಹಾರದಲ್ಲಿ ತೊಡಗಿಕೊಂಡು, ಬಂಗಾರದ ವಸ್ತುಗಳನ್ನು ಇಟ್ಟುಕೊಂಡು ಸಾಲ ಕೊಡ ಲಾರಂಭಿಸಿದ. ಅಸಹಾಯಕರಿಗೆ ನಾಮ ಎಳೆದು ಶ್ರೀಮಂತನಾಗೇ ಬಿಟ್ಟ. ನಂತರ ಮಟ್ಕಾದಲ್ಲಿ 'ನೈಪುಣ್ಯತೆ' ಪಡೆದು ಇದೀ ಬಾಕಳೆಗಲ್ಲಿ ತುಂಬಾ ಮಟ್ಕಾ ವ್ಯಾಪಾರ ನಡೆಸುತ್ತಲೇ ಇದ್ದಾನೆ. ಚೆಡ್ಡಿಗಳ ಸಂಗದಲ್ಲಿ ಮೆರೆಯುತ್ತಲೇ ಇದ್ದಾನೆ.



ಐಜಿಪಿ ನಡಮನಿಗೆ "ಮಟ್ಕಾ ಎಂಬುದು ಒಲಿಂಪಿಕ್ಸ್ ಗೇಮ್ ಅಲ್ಲ" ಎಂದು ಮಾಜಿ ... ಕೆಟ್ಟರ್‌ಗಂತೂ ಚೆಡ್ಡಿಗಳ ಅರಸು ...

ಆದರೂ ಅವಳು ಅವನನ್ನು ಮನಸಾರ ಪ್ರೀತಿಸಿದ್ದಳು-ಕೆಲವೊಮ್ಮೆ. ಹಲವೊಮ್ಮೆ ಇಲ್ಲ. ಏನೀಗ? ಪ್ರೀತಿ ಎಂಬ ಒಡೆಯಲಾರದ ಒಗಟನ್ನು ಕಟ್ಟಿಕೊಂಡು ಈಗೇನು? ಅದೂ ತನ್ನತನವೆಂಬುದು ಬದುಕಿನ ಕಳೆದುಕೊಳ್ಳಬಾರದ ಅಮೂಲ್ಯ ಸ್ವತ್ತು ಎಂಬ ಅರಿವು ಹಠಾತ್ತನೆ ಅವಳನ್ನು ತುಂಬಿರುವಾಗ?

'ಮುಕ್ತ! ನನ್ನ ದೇಹ ಆತ್ಮಗಳೆರಡೂ ಮುಕ್ತ!' -ಮತ್ತೆ ಮತ್ತೆ ಪಿಸುಗುಟ್ಟಿಕೊಳ್ಳುತ್ತಲೇ ಇದ್ದಳು.

ಬದುವುದೇನೆ ನೆಪ್ಪಿಗೆ...?



[illegible]

ಒಂದೇ ಒಂದು ಗಂಟೆಯಲ್ಲಿ....

ಹೃದಯದ ಬೇನೆಯಿಂದ ನರಳುತ್ತಿದ್ದ ಶ್ರೀಮತಿ ಶರ್ಮಳಿಗೆ ಗಂಡ ಸತ್ತ ವಿಷಯವನ್ನು ನಾಜೂಕಾಗಿ ಹೇಳಬೇಕಾಯಿತು.

ಆಕೆಯ ತಂಗಿ ಮಾಧುರಿ ಈ ವಿಷಯವನ್ನು ಮುಚ್ಚುಮರೆಯ ಮಾತುಗಳಲ್ಲಿ, ಅರೆಬರೆ ವಾಕ್ಯಗಳಲ್ಲಿ ತಿಳಿಸಿದಾಗ ನಡೆದದ್ದೇನು ಎಂಬುದು ಆಕೆಯೆದುರು ಬಿಚ್ಚಿ ನಿಂತಿತ್ತು. ಈ ವಿಷಯ ಹೇಳುವಾಗ ಶರ್ಮನ ಸ್ನೇಹಿತ ಮಧುಕರ ಸಹ ಮಾಧುರಿಯ ಹತ್ತಿರವಿದ್ದ.



ರೈಲ್ವೇ ದುರಂತದ ಮಾಹಿತಿ ಪತ್ರಿಕೆಯ ಆಫೀಸನ್ನು ತಲುಪಿದಾಗ ಆತ ಅಲ್ಲಿಯೇ ಇದ್ದನಂತೆ. 'ಸತ್ತವರು' ಪಟ್ಟಿಯಲ್ಲಿ ದುರದೃಷ್ಟವಶಾತ್ ಶರ್ಮನ ಹೆಸರೇ ಮೊದಲನೆಯದು. ಮತ್ತೆ ಮತ್ತೆ ಖಾತರಿ ಮಾಡಿಕೊಂಡ ಮಧುಕರ ಶರ್ಮನ ಮನೆಗೆ ಇನ್ನೊಂದು ಕಾರು ಕಳುಹಿಸಿ, ತಾನು ಬರುವವರೆಗೂ ಶ್ರೀಮತಿ ಶರ್ಮಳಿಗೆ ವಿಷಯ ತಿಳಿಸಬಾರದೆಂದು ತಾಕೀತು ಮಾಡಿ ಸುಕೋಮಲ ಮನಸ್ಸಿನ ಶ್ರೀಮತಿ ಶರ್ಮಳಿಗೆ ಯಾವುದೇ ಆಘಾತವಾಗುವ ಮುಂಚೆ ತಾನು ಅಲ್ಲಿರಬೇಕೆಂದು ಓಡೋಡಿ ಬಂದಿದ್ದ.

ಶ್ರೀಮತಿ ಶರ್ಮ ಬೇರೆ ಹೆಂಗಸರಂತೆ ಸುದ್ದಿಯನ್ನು ಕೇಳಿ ನಂಬಲಾಗದೇ ತತ್ತರಿಸಲೂ ಇಲ್ಲ, ಮೂರ್ಛೆ ಹೋಗಲೂ ಇಲ್ಲ, ಧೊಪ್ಪನೆ ತಂಗಿಯ ತೆಕ್ಕೆಗೆ ಬಿದ್ದು ಹೃದಯ ಕರಗುವಂತೆ ಭೋ ಎಂದು ಅತ್ತಳು. ಸ್ವಲ್ಪ ಹೊತ್ತಿನ ನಂತರ ದುಃಖದ ಉಮ್ಮಳ ಕಡಿಮೆಯಾದಾಗ ಎದ್ದು ನಿಧಾನವಾಗಿ ತನ್ನ ಕೋಣೆಯೆಡೆಗೆ ಹೆಜ್ಜೆ ಹಾಕಿದಳು.

ಅವಳ ಹಿಂದೆ ಯಾರೂ ಬರಬಾರದಂತೆ.

ರೂಮಿನಲ್ಲಿ ತೆರೆದ ಕಿಟಕಿಯ ಕಡೆ ಮುಖ ಮಾಡಿ ನಿಂತಿದ್ದ ಹರವಾದ ಕುರ್ಚಿಯೊಂದು ಅವಳನ್ನು ಸ್ವಾಗತಿಸಿತು. ಅತೀವ ಸುಸ್ತಿನಿಂದ ಧೊಪ್ಪನೆ ಕುರ್ಚಿಯಲ್ಲಿ ಕುಸಿದಳು. ದೇಹವನ್ನು ಇನ್ನಿಲ್ಲದಂತೆ ದಣಿಸಿದ ಆಯಾಸ ಮೆಲ್ಲನೆ ಆತ್ಮದೊಳಗೂ ಇಳಿಯುತ್ತಿರುವಂತಿತ್ತು.

ಕಿಟಕಿಯಿಂದಾಚೆ ಕಾಣುತ್ತಿದ್ದ ಚೌಕದಲ್ಲಿ [illegible]ತ್ತಿದ್ದ ಮರಗಳ ತುದಿಗಳು ವಸಂತ ಋತುವಿನ ಹೊಸ ಸ್ಪರ್ಶದಿಂದ ತುಡಿಯುತ್ತಿರುವಂತೆ ಕಂಡವು. ಮಳೆಯ ಘಮ್ಮೆನ್ನುವ ಉಸಿರು ಸುತ್ತ ಹರಡಿತ್ತು. ಕೆಳಗೆ ಬೀದಿಯಲ್ಲಿ ಸರಕು ಮಾರುವವನೊಬ್ಬ ಗಟ್ಟಿ ಧ್ವನಿಯಲ್ಲಿ ಅರಚುತ್ತಿದ್ದ. ದೂರದಲ್ಲಿ ಯಾರೋ ಹಾಡುತ್ತಿದ್ದ ಹಾಡೊಂದು ಮೆಲುವಾಗಿ ಕೇಳಿಸುತ್ತಿತ್ತು. [illegible] ಲೆಕ್ಕವಿಲ್ಲದಷ್ಟು ಗುಬ್ಬಚ್ಚಿಗಳು ಚಿಲಿಪಿಲಿಗುಡುತ್ತಿದ್ದವು.

ಕಿಟಕಿಗೆದುರಾಗಿದ್ದ ಪಶ್ಚಿಮದ ಆಗಸದಲ್ಲಿ [illegible] ಒಂದರ ಮೇಲೊಂದು ಕವುಚಿಕೊಂಡಿದ್ದ ಮೋಡಗಳ ನಡುವಿಂದ ಅಲ್ಲಿ ಇಲ್ಲಿ ನೀಲ ಬಾನಿನ ಪಟ್ಟೆಗಳು ಕಾಣಿಸುತ್ತಿದ್ದವು

ಕುರ್ಚಿಯ ಒರಗುದಿಂಬಿಗೆ ತಲೆಯಾನಿಸಿ ಕಣ್ಣು ಮುಚ್ಚಿ ಸ್ತಬ್ಧಳಾಗಿ ಕುಳಿತಳು. ಹತೋಟಿ ಮೀರಿ ಅಳು ಗಂಟಲಿಗೆ ನುಗ್ಗುತ್ತಿತ್ತು- ಅತ್ತೂ ಅತ್ತೂ ಸುಸ್ತಾದ ಮಗುವೊಂದು ನಿದ್ದೆಯಲ್ಲೂ ಆಗಾಗ್ಗೆ ಬಿಕ್ಕಳಿಸುವಂತೆ.

ಅವಳು ಹರೆಯಗಾತಿ. ಶಾಂತವಾದ ಸುಂದರ ಮುಖಕಟ್ಟು, ಅವಳಲ್ಲಿದ್ದ ಸಂಯಮಕ್ಕೆ, ಆತ್ಮಶಕ್ತಿಗೆ ಸಾಕ್ಷಿಯಾಗಿದ್ದವು. ಆದರೀಗ ಕಣ್ಣುಗಳಲ್ಲಿನ ಹೊಳಪು ಕುಂದಿತ್ತು. ಎಲ್ಲೋ ದೂರದಲ್ಲಿದ್ದ ನೀಲಿ ಆಕಾಶದ ಪಟ್ಟೆಯಲ್ಲಿ ನಿಸ್ತೇಜ ಕಣ್ಣುಗಳನ್ನು ನೆಟ್ಟು ಕೂತಿದ್ದಳು. ಆ ನೋಟದಲ್ಲಿ ತನ್ಮಯತೆ ಇರಲಿಲ್ಲ. ಇನ್ನೇನು ಧುಮುಕಲಿದ್ದ ಪ್ರಚಂಡ ಶಕ್ತಿಯ ಸೆಲೆಯೊಂದನ್ನು ಹಿಡಿದು ನಿಲ್ಲಿಸಿದಂತಿತ್ತು.

....

ಹೇಳಲು ಬಾರದ ತಲ್ಲಣವೊಂದು ಸೆಲೆಯೊಡೆಯಲು ಕಾದು ನಿಂತಿತ್ತು. ಭಯದಿಂದ ಉಸಿರು ಬಿಗಿಹಿಡಿದು ಕಾಯುತ್ತಿದ್ದಳು ಅವಳು. ಏನದು? ಇಂಥದ್ದೇ ಎಂದು ಗೊತ್ತಿಲ್ಲದ್ದು? ಹೆಸರಿಗೆ ನಿಲುಕದ್ದು? ಅತೀ ಸೂಕ್ಷ್ಮವಾದದ್ದು? ಆದರೂ ಬಾನಿಂದ ಮೆಲ್ಲನೆ ಹರಿದು ಗಾಳಿಯಲ್ಲಿ ಹರಡಿದ್ದ ಬಣ್ಣ ಶಬ್ದ ಪರಿಮಳಗಳ ಮೂಲಕ ಯಾವುದೋ ಭಾವವೊಂದು ನಿಧಾನವಾಗಿ ಅವಳಲ್ಲಿ ತುಂಬುತ್ತಿತ್ತು.

ಯಾವುದೋ ಹುಯಿಲಿಗೆ ಸಿಕ್ಕಿದಂತೆ ಅವಳೆದೆ ಏರಿ ಇಳಿಯುತ್ತಿತ್ತು. ತನ್ನನ್ನು ಆವರಿಸಿಕೊಳ್ಳಲು ಬರುತ್ತಿದ್ದ ಪ್ರಚಂಡ ಅಲೆಯ ಹೊಳಹನ್ನು ಅವಳೀಗ ಗುರುತಿಸಬಲ್ಲವಳಾಗಿದ್ದಳು. ತನ್ನ ಮನೋಬಲದಿಂದ ಆ ಶಕ್ತಿಯನ್ನು ತಡೆದು ನಿಲ್ಲಿಸಲು ಒದ್ದಾಡುತ್ತಿದ್ದಳು. ಆದರೆ ಅವಳ ಬೆಳ್ಳಗಿನ ಸುಕೋಮಲ ಕೈಗಳಷ್ಟೇ ಅವಳ ಮನಸ್ಸೂ ದುರ್ಬಲವಾಗಿತ್ತು.

ತಲ್ಲಣದ ಹಂಗು ಮೀರಿದ ತಕ್ಷಣವೇ ಅವಳ ಬರುಕಿಸಿದ ತುಟಿಯಿಂದ ಪಿಸುಮಾತೊಂದು ತಪ್ಪಿಸಿಕೊಂಡಂತೆ ಹೊರಬಂತು. ಉಸಿರು ಬಿಗಿ ಹಿಡಿದು ಮತ್ತೆ ಮತ್ತೆ ಪಿಸುಗುಟ್ಟಿದಳು: 'ನಾನೀಗ ಮುಕ್ತಳು.....!' ಹಿಂದೆಯೇ ಬಂದ ಖಾಲಿತನದ ಭಾವ ಮತ್ತು ಭಯ ನಿಧಾನವಾಗಿ ಕಣ್ಣಿಂದ ಅಳಿಯಲಾರಂಭಿಸಿತು. ಕ್ರಮೇಣ ಅಲ್ಲಿ ಧೃಡತೆ ಮತ್ತು ಹೊಳಪು ಕೂಡಲಾರಂಭಿಸಿದವು. ಹೃದಯ ತೀವ್ರವಾಗಿ ಹೊಡೆದುಕೊಳ್ಳಲಾರಂಭಿಸಿತು. ರಭಸದಿಂದ ದೇಹದುದ್ದಕ್ಕೂ ನುಗ್ಗಿದ ರಕ್ತ ನಿಧಾನವಾಗಿ ಅವಳನ್ನು ಬೆಚ್ಚಗಾಗಿಸಿ ದೇಹದ ಪ್ರತೀ ಕಣವನ್ನೂ ಹಗುರಾಗಿಸಹತ್ತಿತು.

ಇದೆಂಥಾ ವಿಕಟ ಸಂತೋಷ? ಹಾಗಂತ ಕೇಳಿಕೊಳ್ಳಬೇಕೆನ್ನಿಸಲಿಲ್ಲ. ಶುದ್ಧವಾದ ಅನುಭೂತಿಯೊಂದು ಆ ಸಲಹೆಯನ್ನು ಕ್ಷುಲ್ಲಕವೆಂದು ತಳ್ಳಿಹಾಕಿತು.

ತಾನು ಮತ್ತೆ ಕುಸಿದು ಅಳುವೆನೆಂದು ಅವಳಿಗೆ ಗೊತ್ತಿತ್ತು. ಸಾವಿನೆದುರು ಜೋಡಿಸಲ್ಪಟ್ಟ ಆ ಮೃದು ಕೈಗಳನ್ನು ನೋಡಿದಾಗ, ಶುದ್ಧ ಪ್ರೀತಿಯ ಹೊಳೆಯನ್ನು ಹರಿಸುತ್ತಿದ್ದ ಕಣ್ಣುಗಳು ಈಗ ನಿಶ್ಚಲವಾಗಿ, ನಿರ್ಭಾವದಿಂದ ಶೂನ್ಯದೆಡೆ ನೆಟ್ಟಿರುವುದನ್ನು ನೋಡಿದಾಗ ಅವಳು ಮತ್ತೆ ಕುಸಿಯದಿರಲು ಹೇಗೆ ಸಾಧ್ಯ? ಆದರೂ ಸಧ್ಯಕ್ಕೆ ಅವಳಿಗೆ ಕಂಡಿದ್ದು ಈ ಭಯ ಹುಟ್ಟಿಸುವ ಗಳಿಗೆಗಳಲ್ಲ, ಅದಕ್ಕೂ ಆಚೆಯ ತನಗೆ ಮಾತ್ರ ಸೇರಿದ ಹಲವಾರು ವರ್ಷಗಳು. ತನಗೇ ಗೊತ್ತಿಲ್ಲದಂತೆ ಈ ವರ್ಷಗಳನ್ನು ತಬ್ಬಿ ಸ್ವಾಗತಿಸುವವಳಂತೆ ಕೈಗಳೆರಡನ್ನೂ ಹರವಾಗಿ ಚೆಲ್ಲಿದಳು.

ಆ ಬರುವ ವರ್ಷಗಳಲ್ಲಿ ತಾನು ಯಾರಿಗೋಸ್ಕರವೂ ಬದುಕಬೇಕಾಗಿಲ್ಲ, ತನಗೆ ಮಾತ್ರ. ಇನ್ನೊಬ್ಬರ ಮೇಲೆ ಗೊತ್ತಿಲ್ಲದಂತೆ ಹೊರೆಸುವ ಧೃಢಚಿತ್ತದವರ ವೈಯಕ್ತಿಕ ನಿರ್ಧಾರಗಳಿಗೆ ಅವಳಿನ್ನು ಶರಣಾಗಬೇಕಿಲ್ಲ. ಪ್ರೀತಿಯ ಹೆಸರಲ್ಲಿ ಮಾಡುವ ಈ ರೀತಿಯ ದೌರ್ಜನ್ಯಕ್ಕೂ ಕ್ರೌರ್ಯದ ದಬ್ಬಾಳಿಕೆಗೂ ವ್ಯತ್ಯಾಸವೇನೂ ಇಲ್ಲ ಎಂದು ಆ ಅನುಭೂತಿಯ ಕ್ಷಣಗಳಲ್ಲಿ ಅರಿವಾಗಿತ್ತು.

ಆದರೂ ಅವಳು ಅವನನ್ನು ಮನಸಾರ ಪ್ರೀತಿಸಿದ್ದಳು-ಕೆಲವೊಮ್ಮೆ. ಹಲವೊಮ್ಮೆ ಇಲ್ಲ. ಏನೀಗ? ಪ್ರೀತಿ ಎಂಬ ಒಡೆಯಲಾರದ ಒಗಟನ್ನು ಕಟ್ಟಿಕೊಂಡು ಈಗೇನು? ಅದೂ ತನ್ನತನವೆಂಬುದು ಬದುಕಿನ ಕಳೆದುಕೊಳ್ಳಬಾರದ ಅಮೂಲ್ಯ ಸ್ವತ್ತು ಎಂಬ ಅರಿವು ಹಠಾತ್ತನೆ ಅವಳನ್ನು ತುಂಬರುವಾಗ?

'ಮುಕ್ತ! ನನ್ನ ದೇಹ ಆತ್ಮಗಳೆರಡೂ ಮುಕ್ತ!' -ಮತ್ತೆ ಮತ್ತೆ ಪಿಸುಗುಟ್ಟಿಕೊಳ್ಳುತ್ತಲೇ ಇದ್ದಳು.

ಮುಚ್ಚಿದ ಬಾಗಿಲಿನೆದುರು ಮಾಧುರಿ ಕೀಹೋಲಿಗೆ ತುಟಿಯಾನಿಸಿ ಬಾಗಿಲು ತೆಗೆಯಲು ಮೆಲುದನಿಯಲ್ಲಿ ಬೇಡಿಕೊಳ್ಳುತ್ತಿದ್ದಳು. ನಳಿನಕ್ಕಾ... ಬಾಗಿಲು ತೆಗೆ.. ಪ್ಲೀಸ್...ಏನ್ಮಾಡಿಕೊಳ್ತಾ ಇದೀಯಾ? ನೋಡು...ಬಾಗಿಲು ತೆಗೆಯದಿದ್ದರೆ ದೇವರ ಮೇಲಾಣೆ...ಅಕ್ಕಾ...

.....

'ಇಲ್ಲ... ನಾನೇನು ಘಾತ ಮಾಡಿಕೊಳ್ಳುತ್ತಿಲ್ಲ. ಹೊರಟು ಹೋಗು..' -ಮತ್ತೆ ಪಿಸುಗುಟ್ಟಿದಳು ಶ್ರೀಮತಿ ಶರ್ಮ. ಘಾತ? ತೆರೆದ ಕಿಟಕಿಯಿಂದ ಬದುಕಿನ ಅಮೃತವನ್ನೇ ಕುಡಿಯುತ್ತ ಕೂತಿರುವವಳಿಗೆ ಘಾತ!!

ಮುಂಬರುವ ಬದುಕಿನ ದಿನಗಳ ಕಲ್ಪನೆಯಲ್ಲಿ ಮನಸ್ಸು ಹುಚ್ಚು ಹುಚ್ಚಾಗಿ ಅಲೆಯುತ್ತಿತ್ತು. ವಸಂತದ ದಿನಗಳು, ಬೇಸಗೆಯ ದಿನಗಳು, ಎಲ್ಲ ರೀತಿಯ ದಿನಗಳು ಅವಳೊಬ್ಬಳವೇ. 'ದೇವರೇ, ನನ್ನ ಬದುಕನ್ನು ಉದ್ದಗೊಳಿಸು...' ಒಂದು ಪುಟ್ಟ ಪ್ರಾರ್ಥನೆ ಅವಳ ತುಟಿ ಬಿರಿದು ಹೊರಬಂತು. ಹಿಂದಿನ ದಿನವಷ್ಟೇ ಅವಳು ಉದ್ದವೆಳೆಯುತ್ತಿದ್ದ ಬದುಕಿನ ದಿನಗಳನ್ನು ನೆನೆದು ನಡುಗಿರಲಿಲ್ಲವೇ?

ಎಷ್ಟೋ ಹೊತ್ತಿನ ಮೇಲೆ ನಿಧಾನವಾಗಿ ಎದ್ದು ಬಾಗಿಲು ತೆಗೆದು ಬೇಡಿಕೊಳ್ಳುತ್ತಿದ್ದ ತಂಗಿಯೆದುರು ನಿಂತಳು. ಉನ್ಮಾದದ ಕಣ್ಣುಗಳನ್ನು ಹೊತ್ತು ಗೆಲುವಿನ ಅಧಿದೇವತೆಯಂತೆ ತಂಗಿಯ ಸೊಂಟವನ್ನು ಬಳಸಿ ಅನಾಯಾಸವಾಗಿ ಮೆಟ್ಟಿಲನ್ನು ಇಳಿಯತೊಡಗಿದಳು. ಮಧುಕರ ಕೆಳಗೆ ನಿಂತಿದ್ದ.

ಯಾರೋ ಹೊರಗಿನ ಬಾಗಿಲಿಗೆ ಕೀ ತೂರಿಸಿ ತೆಗೆಯುತ್ತಿದ್ದದ್ದು ಕೇಳಿಸಿತು. ಸುಧಾಕರ ಶರ್ಮ!!! ಪ್ರಯಾಣದಿಂದ ಸ್ವಲ್ಪ ಬಳಲಿದವನಂತೆ ಕಂಡರೂ ಬ್ಯಾಗು ಮತ್ತು ಛತ್ರಿಯನ್ನು ಹೊತ್ತು ಧೃಢ ಹೆಜ್ಜೆಯನ್ನಿಡುತ್ತಾ ಒಳ ಬರುತ್ತಿದ್ದ ಸುಧಾಕರ ಶರ್ಮ! ಅಪಘಾತ ನಡೆದ ಸ್ಥಳದಿಂದ ದೂರವಿದ್ದವನು, ಈ ತರಹದ ಅಪಘಾತ ನಡೆದಿದೆ ಎಂಬ ಅರಿವೂ ಇಲ್ಲದವನು. ರಿಖ್ಖನೆ ವಿಕಾರವಾಗಿ ಕಿರುಚಿದ ಮಾಧುರಿಯನ್ನು, ಶ್ರೀಮತಿ ಶರ್ಮಳ ಕಣ್ಣಿಗೆ ಅವನು ಬೀಳದಂತೆ ಥಟ್ಟನೆ ಹಾರಿ ಮರೆ ಮಾಡಿದ ಮಧುಕರನನ್ನು ಕಂಡು ಗರ ಬಡಿದವನಂತೆ ನಿಂತುಬಿಟ್ಟ.

ಮಧುಕರನ ಪ್ರಯತ್ನ ಫಲಿಸಲಿಲ್ಲ, ಆಗಬಾರದ್ದು ಆಗೇ ಹೋಗಿತ್ತು.

ಡಾಕ್ಟರರು ಬರುವ ಹೊತ್ತಿಗೆ ಶ್ರೀಮತಿ ಶರ್ಮಳ ದೇಹ ನಿರ್ಜೀವವಾಗಿ ಮಲಗಿತ್ತು. ಅತಿಯಾದ ಸಂತೋಷ ಅವಳ ದುರ್ಬಲ ಹೃದಯವನ್ನು ಬಲಿ ತೆಗೆದುಕೊಂಡಿತಂತೆ.

(ಕೇಟ್ ಚಾಪಿನ್ನಳ ಸಣ್ಣ ಕಥೆ 'ದಿ ಸ್ಟೋರಿ ಆಫ್ ಎನ್ ಅವರ್' ಮೂಲದಿಂದ)


ತನ್ನ ಕಾಲಕ್ಕಿಂತ ತುಂಬ ಮುಂದಿದ್ದವಳು...

"ಬದುಕಿನುದ್ದಕ್ಕೂ ಭ್ರಮೆಗಳ ಬಲೆಯಲ್ಲಿ ಬಂಧಿಯಾಗಿರುವುದಕ್ಕಿಂತ ಯಾವತ್ತೋ ಒಂದು ದಿನ ತಡವಾಗಿಯಾದರೂ ಎಚ್ಚರವಾಗುವುದು ಮೇಲು. ಈ ಎಚ್ಚರ ಬರೀ ದುಃಖವನ್ನೇ ತಂದರೂ ಪರವಾಗಿಲ್ಲ."



1899 ರಲ್ಲಿ ಕೇಟ್ ಚಾಪಿನ್ ಹೇಳಿದ ಮಾತುಗಳಿವು. ಅವಳ ಕಾದಂಬರಿ 'ದಿ ಅವೇಕನಿಂಗ್' 1889 ರಲ್ಲಿ ಪ್ರಕಟವಾದಾಗ ಸುತ್ತಲಿನ ಸಮಾಜ ಬೆಚ್ಚಿಬಿದ್ದಿತ್ತು. ಅದರಲ್ಲಿ ಹೆಣ್ಣೊಬ್ಬಳ ಸಾಮಾಜಿಕ, ಲೈಂಗಿಕ ಮತ್ತು ಆಧ್ಯಾತ್ಮಿಕ ಎಚ್ಚರದ ಬಗ್ಗೆ ಕೇಟ್ ಬರೆದಿದ್ದಳು. ಮರ್ಯಾದಸ್ಥ ಮಹಿಳೆಗೂ ಲೈಂಗಿಕತೆ ಎಂಬುದು ಕಾಡುವ ವಿಚಾರ ಎನ್ನುವುದನ್ನು ಅಂದಿನ ಅಮೆರಿಕನ್ ಸಮಾಜ ಸಹ ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಹೆಣ್ಣೊಬ್ಬಳಿಗೆ ಲೈಂಗಿಕ ಸ್ವಾಯತ್ತತೆಯೆ? ಗಂಡು ಹೆಣ್ಣಿಗೆ ಒಂದೇ ಮಾನದಂಡವೇ? ಹಲವು ಓದುಗರಿಗೆ ಕೇಟಳ ಧೈರ್ಯ 'ಇದು ಸ್ವಲ್ಪ ಅತಿಯಾಯಿತು' ಅಂತ ಅನ್ನಿಸಿತ್ತು.

ಸೇಂಟ್ ಲೂಯಿಸ್‌ನಲ್ಲಿ 1850 ರಲ್ಲಿ ಹುಟ್ಟಿದ ಕೇಟ್ ಓಫ್ಲಹರ್ಟಿಗೆ ಐರಿಶ್ ತಂದೆ, ಫ್ರೆಂಚ್ ತಾಯಿ. ಮುತ್ತಜ್ಜಿ ಬಾಲಕಿ ಕೇಟಳಿಗೆ ಮಿಸಿಸಿಪಿಯಲ್ಲಿ ದೋಣಿ ನಡೆಸುತ್ತಾ ಬದುಕು ಸಾಗಿಸುತ್ತಿದ್ದ ತನ್ನ ಅಜ್ಜಿಯ ಕಥೆಯನ್ನಲ್ಲದೆ ಧೈರ್ಯದಿಂದ ಬದುಕಿದ ಇತರ ಹೆಂಗಸರ ಕಥೆಗಳನ್ನು ಹೇಳುತ್ತಾ ಬೆಳೆಸಿದಳು. ಪುಸ್ತಕಗಳನ್ನು ನುಂಗುವಂತೆ ಓದುತ್ತಿದ್ದ ಯುವತಿ ಕೇಟ್ ಮೋಜಿನ ಪಾರ್ಟಿಗಳಿಗೆ ಡಾನ್ಸ್ ಮಾಡಲು ಆಗಾಗ್ಗೆ ಹೋಗುತ್ತಿದ್ದರೂ 'ಬರೀ ತಿರುಗುವ ಕಾಲಿನ ಪ್ರತಿಭೆಯ ಗಂಡಸರು ಬೋರ್ ಹೊಡೆಸುತ್ತಿದ್ದರು' ಎಂದು ಹೇಳಿ ಕೊಂಡಿದ್ದಾಳೆ. ಸಿವಿಲ್ ಯುದ್ಧದ ಸಮಯದಲ್ಲಿ ಯೂನಿಯನ್ ಬಾವುಟವೊಂದನ್ನು ಕಿತ್ತು ಬಿಸಾಡಿ ಸ್ಥಳೀಯ ದಂತಕತೆಯಾಗಿದ್ದಳು. ಆಸ್ಕರ್ ಚಾಪಿನ್ ಎಂಬ ಯುವಕನನ್ನು ಮದುವೆಯಾಗಿ ಆರು ಮಕ್ಕಳ ತಾಯಿಯಾದಳು. ನ್ಯೂ ಆರ್ಲಿಯನ್ಸಿನ ಅನೇಕ ಸಾಮಾಜಿಕ ಪದ್ಧತಿಗಳನ್ನು ಧಿಕ್ಕರಿಸಿ ಬದುಕುತ್ತಿದ್ದ ಕೇಟಳಿಗೆ ಚಾಪಿನ್ ಸಮಾನಮನಸ್ಕ ಸಂಗಾತಿಯಾಗಿದ್ದ. 1882 ರಲ್ಲಿ ಗಂಡ ಗತಿಸಿದಾಗ ನೊಂದರೂ ಧೈರ್ಯಗೆಡಲಿಲ್ಲ, ಡಾಕ್ಟರ್ ಸ್ನೇಹಿತರೊಬ್ಬರ ಸಲಹೆಯಂತೆ ಕೇಟ್ ಬರೆಯಲಾರಂಭಿಸಿದಳು. ನಿಧಾನವಾಗಿಯಾದರೂ ಅವಳ ಕಥೆಗಳು ಅಲ್ಲಿ ಇಲ್ಲಿ ಪ್ರಕಟವಾಗತೊಡಗಿದವು. 'ದಿ ಅವೇಕನಿಂಗ್'ನ ನಾಯಕಿ ಎಡ್ನಾ ಒಂದು ಕಡೆ ಹೇಳುತ್ತಾಳೆ: "ಎಷ್ಟೋ ಅನವಶ್ಯಕಗಳನ್ನು ಬಿಡಬಲ್ಲೆ, ಹಣವನ್ನು ತ್ಯಜಿಸಬಲ್ಲೆ, ನನ್ನ ಮಕ್ಕಳಿಗೆ ನನ್ನ ಪ್ರಾಣವನ್ನೂ ಕೊಡಬಲ್ಲೆ. ಆದರೆ ನನ್ನತನವನ್ನು ತ್ಯಜಿಸಲಾರೆ." ಕೇಟಳ ನಾಯಕಿಯರ ಮುಖ್ಯ ಕಾಳಜಿ ಅದೇ. ತನ್ನತನವನ್ನು ಪಡೆದುಕೊಳ್ಳುವುದು ಮತ್ತು ಅದನ್ನು ಕಾಪಾಡಿಕೊಳ್ಳುವುದು. 'ದಿ ಅವೇಕನಿಂಗ್' ಎಷ್ಟು ವಿವಾದ ಹುಟ್ಟಿಸಿತೆಂದರೆ ರಾಜಿ ಮಾಡಿಕೊಳ್ಳದ ಕೇಟ್ ಹೆಚ್ಚು ಕಮ್ಮಿ ಬರೆಯುವುದನ್ನೇ ಬಿಟ್ಟಳು. ಅಧಿಕೃತವಾಗಿ ನಿಷೇಧಿಸಲ್ಪಟ್ಟಿಲ್ಲದಿದ್ದರೂ 'ದಿ ಅವೇಕನಿಂಗ್' ಸಮಾಜದ ಸ್ಮೃತಿಯಿಂದ ಕಣ್ಮರೆಯಾಯಿತು. ಐವತ್ತರ ದಶಕದಲ್ಲಿ ಅಮೆರಿಕನ್ ಮತ್ತು ಫ್ರೆಂಚ್ ವಿಮರ್ಶಕರು ಈ ಪುಟ್ಟ ಕಾದಂಬರಿಯನ್ನು ಮತ್ತೆ ಬೆಳಕಿಗೆ ತಂದರು. ಈಗ ಎಷ್ಟೋ ಕಾಲೇಜುಗಳಲ್ಲಿ ಪಠ್ಯವಾಗಿರುವ ದಿ ಅವೇಕನಿಂಗ್ ಹಲವು ಚಿತ್ರಗಳ ನಿರ್ಮಾಣಕ್ಕೆ ಸ್ಫೂರ್ತಿಯನ್ನಿತ್ತಿದೆ. ಹೆಚ್ಚುಕಮ್ಮಿ ಒಂದು ಶತಮಾನದ ನಂತರ ಅಮೆರಿಕನ್ ಸಾಂಸ್ಕೃತಿಕ ವಲಯ ಎಚ್ಚೆತ್ತು ತನ್ನ ಕಾಲದವರಿಗಿಂತ ತುಂಬ ಮುಂದಿದ್ದವಳ ನೆನಪಿಗೆ ಮರ್ಯಾದೆ ನೀಡಿದೆ.




ಕೇಟ್ ಸತ್ತಿದ್ದು ತನ್ನ ಐವತ್ತೆರಡನೆಯ ವಯಸ್ಸಿನಲ್ಲಿ.

'ದತ್ತ'- ಮಸಾಲ ಮಿಕ್ಸ್ ಸುತ್ತಾ

ನಮ್ಮ ಮುಂದೆ ಕೂತಿದ್ದ ಪಡ್ಡೆ ಹುಡುಗರು ಪಕ್ಕಾ ದರ್ಶನ್ ಅಭಿಮಾನಿಗಳು. ಸಿನಿಮಾ ಶುರುವಾಗುವ ಮೊದಲೇ ಗುಲಾಬಿ ಹೂಗಳನ್ನು, ಚಾಕ್ಲೆಟ್ ಪ್ಯಾಕೆಟ್‌ಗಳನ್ನು ಹಿಡಿದು ದರ್ಶನ್ ಎಂಟ್ರಿ ಆಗುತ್ತಿದ್ದಂತೆ ಪರದೆಯತ್ತ ಅವುಗಳನ್ನು ಎಸೆಯಲು ಸಿದ್ಧರಾಗಿದ್ದರು. ಅವರಲ್ಲಿ ಒಬ್ಬ ಹುಡುಗ ನನ್ನನ್ನು ಗುರುತಿಸಿ ನನಗೆ ಎರಡು ಗುಲಾಬಿ ಹೂಗಳನ್ನು ಕೊಟ್ಟನಲ್ಲದೆ, ಒಂದು ಕೋಕೋ ಕೋಲಾವನ್ನೂ ತಂದು ಕೊಟ್ಟ. "ಸೋ ಸ್ವೀಟ್" ಅಂದುಕೊಂಡು ಸಿನಿಮಾ ನೋಡಲು ಕೂತೆ.

ಕಥೆ: ದರ್ಶನ್ (ದತ್ತ) ಮತ್ತು ಕೋಮಲ್ ಮಾಮೂಲಿ ಕಳ್ಳರು. ಇವರಿಬ್ಬರೂ ಅನಾಥರಾಗಿದ್ದು, ತಾವು ಪಿಕ್ ಪಾಕೆಟ್ ಮಾಡಿದ ಹಣವನ್ನೆಲ್ಲ ವಠಾರದಲ್ಲಿ ಕಷ್ಟದಲ್ಲಿರುವವರಿಗೆ ಹಂಚುತ್ತಿರುತ್ತಾರೆ. ಈ ಕಾರಣಕ್ಕೆ ಅವರು ಕಳ್ಳರಾಗಿದ್ದರೂ ವಠಾರದವರು ಅವರನ್ನು ಗೌರವಿಸುತ್ತಿರುತ್ತಾರೆ, ತಮ್ಮ ಸಂಬಂಧಿಕರಂತೆ ನೋಡಿಕೊಳ್ಳುತ್ತಿರುತ್ತಾರೆ. ಒಂದು ಬಾರಿ ಬ್ರೀಫ್‌ಕೇಸನ್ನು ಕದ್ದಾಗ ಅದರಲ್ಲಿ ಹಣದ ಬದಲಾಗಿ ಹೆರಾಯಿನ್ ಸಿಗುತ್ತೆ. ಇದರಿಂದ ಬಚಾವಾಗಲು ತಮಗೆ ಗೊತ್ತಿಲ್ಲದೆ ಯಾರಿಂದ ಅದನ್ನು ಕದ್ದಿದ್ದರೋ ಅವನಿಗೇ ಮಾರಲು ಹೋಗುತ್ತಾರೆ.


ಆಮೇಲೆ ಅದ್ಭುತವಾಗಿ ಫೈಟ್ ಮಾಡಿ ತಪ್ಪಿಸಿಕೊಳ್ಳುತ್ತಾರೆ.



ಇನ್ನೊಂದು ಸರ್ತಿ ಬಡ ಕುಟುಂಬದ ಮದುವೆ ಖರ್ಚಿಗೆಂದು ರಮ್ಯಾಳ ಮನೆಯನ್ನು ದರೋಡೆ ಮಾಡಲು ಹೋಗುತ್ತಾರೆ. ರಮ್ಯಾ ಉರಿಯುತ್ತಿರುವ ನೂರಾರು ಮೊಂಬತ್ತಿಗಳ ಮಧ್ಯೆ ಸೊಗಸಾಗಿ ಮಲಗಿರುವುದನ್ನು ನೋಡಿ ದತ್ತ ಅವಳನ್ನು ಪ್ರೀತಿಸಲು ಶುರುಮಾಡುತ್ತಾನೆ. ರಮ್ಯಳ ಮನೆಯಿಂದ ಕದ್ದಿರುವ ಸಾಮಾನುಗಳಲ್ಲಿ ಅವಳ ಡೈರಿ ಕೂಡ ಇರುತ್ತೆ. ಅದರಲ್ಲಿ ಅವಳು "ನಾನು ಇಷ್ಟ ಪಡುವ ಹುಡುಗನಿಗೆ ಆರು ಭಾಷೆಗಳಾದರೂ ಗೊತ್ತಿರಬೇಕು, ವಿದ್ಯಾವಂತನಾಗಿರಬೇಕು. 'ಶಬ್ಧವೇದಿ' ಸಿನಿಮಾದಲ್ಲಿ ರಾಜ್‌ಕುಮಾರ್ ತರಹ ನಿಯತ್ತಿನ ಪೊಲೀಸ್ ಆಫೀಸರ್ ಆಗಿರಬೇಕು" ಅಂತ ಬರೆದಿರುತ್ತಾಳೆ. 'ಅಮೃತಧಾರೆ' ಚಿತ್ರದಲ್ಲಿ ಅವಳ ಆಸೆ ಅಮಿತಾಬ್ ಬಚ್ಚನ್ ಆದರೆ, ಈ ಸಿನಿಮಾದಲ್ಲಿ ನಮ್ಮ ಡಾ. ರಾಜ್‌ಕುಮಾರ್ ಮೇಲೆ ಅವಳ ಆಸೆ. (ಅಂದಹಾಗೆ, ಇತ್ತೀಚಿಗೆ ಎಲ್ಲರೂ ರಾಜ್ ಕುಮಾರ್‌ರವರನ್ನು ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳಲಾರಂಭಿಸಿದ್ದಾರೆ. ನಿಜವಾದ ಅಭಿಮಾನದಿಂದ ಹೀಗೆ ಮಾಡಿದರೆ ಅದು ಬೇರೆ ಮಾತು, ಆದರೆ ಕಮರ್ಷಿಯಲ್ ದೃಷ್ಟಿಯಿಂದ ಮಾಡಿದರೆ ಅದು ತಪ್ಪು, ಇದನ್ನು ತಡೆಯುವವರು ಯಾರು?)

Any way, ಹೀರೋ ದತ್ತನಿಗೆ ಕನ್ನಡ ಬಿಟ್ಟರೆ ಬೇರೆ ಭಾಷೆ ಬರೊಲ್ಲ. ಈ ಸಮಸ್ಯೆಯನ್ನು ಆತ ಕೋಮಲ್ ಜೊತೆ ಸೇರಿ ಬಟ್ಲರ್ ಇಂಗ್ಲಿಷ್‌ನಲ್ಲಿ ಮಾತನಾಡುತ್ತಾ ನಿಭಾಯಿಸುವ ದೃಶ್ಯಗಳು ಸಖತ್ತಾಗಿವೆ. ಪೊಲೀಸ್ ಆಫೀಸರ್ ತರಹ ಪೋಸ್ ಕೊಡಲು ಅವರಿಬ್ಬರು ಪೊಲೀಸ್ ಠಾಣೆಯನ್ನೇ ಅರ್ಧ ಗಂಟೆಗೆ ಬಾಡಿಗೆಗೆ ತಗೊಂಡು ಅವಳನ್ನು ನಂಬಿಸುತ್ತಾರೆ. ಆದರೆ ದರ್ಶನ್ ಮತ್ತು ಕೋಮಲ್‌ನ ಫೋಟೋಗಳು 'ವಾಂಟೆಡ್' ಅಂದರೆ ಕಳ್ಳರ ಗುಂಪಿನಲ್ಲಿ ಇರುವುದನ್ನು ನೋಡಿ ಅವಳಿಗೆ ಸಂಶಯ ಬರುತ್ತೆ. ಆಗ "ಮುಳ್ಳನ್ನು ಮುಳ್ಳಿಂದಾನೇ ತೆಗೆಯಬೇಕು" ಅಂತ ಹೇಳಿ "ನಾವು ಕಳ್ಳರ ತರಹ ನಟಿಸಬೇಕು" ಅಂತ ಹೇಳಿ ಬಚಾವ್ ಆಗುತ್ತಾರೆ.

ಆಮೇಲೆ ಅವಳಿಗೆ ಅವನು ನಿಜವಾಗಲೂ ಕಳ್ಳ ಅಂತ ಗೊತ್ತಾಗುತ್ತೆ. 'ರಂಗೀಲಾ'ದ ಆಮಿರ್‌ಖಾನ್ ತರಹ ಚಿತ್ರಮಂದಿರದ ಮುಂದೆ ಬ್ಲ್ಯಾಕ್ ಟಿಕೆಟ್ ಮಾರುತ್ತಿರುವ ದತ್ತನ ಕಪಾಳಕ್ಕೆ ರಮ್ಯ ಹೊಡೆದು ಹೋಗುತ್ತಾಳೆ. ಹೊಡೆಸಿಕೊಂಡ ನಂತರ ದತ್ತನಿಗೆ ಬೇಸರವಾಗಿ "ನಾನು ಇನ್ಮುಂದೆ ಕದಿಯೊಲ್ಲ" ಅಂತ ನಿರ್ಧರಿಸುತ್ತಾನೆ. ಆದರೆ ಶ್ರೀನಾಥ ಬಂದು "ನನ್ನ ಹೆಂಡತಿ ಕಾಯಿಲೆಯಿಂದ ನರಳುತ್ತಿದ್ದಾಳೆ. ಅವಳಿಗೆ ನೀನೇ ಅವಳ ಮಗ ಅಂತ ಹೇಳಿದರೆ ನಾನು ನಿನಗೆ ಹತ್ತು ಲಕ್ಷ ಕೊಡುತ್ತೇನೆ" ಅಂತಾನೆ. ದತ್ತನಿಗೆ ಆ ತಾಯಿಯ ಬಗ್ಗೆ ಕರುಣೆ ಹುಟ್ಟಿ ಶ್ರೀನಾಥನ ಜೊತೆ ಹಳ್ಳಿಗೆ ಹೋಗುತ್ತಾನೆ. ಆದರೆ ಅವನು ಹಳ್ಳಿಗೆ ಕಾಲು ಇಟ್ಟ ಕ್ಷಣವೇ ಅವನನ್ನು ಸಾಯಿಸಲು ಹಲವಾರು ರೌಡಿಗಳು ಮಚ್ಚು ಹಿಡಿದು ಕಾದಿರುತ್ತಾರೆ. ಯಾಕೆ?



ಶ್ರೀನಾಥನ ಮಗನನ್ನು ಸಾಯಿಸುವುದು ಅವನ ಆಜನ್ಮ ವೈರಿ ಅವಿನಾಶನ ಪ್ಲಾನ್. ಅದಕ್ಕೇ ಶ್ರೀನಾಥ ನಕಲಿ ಮಗ ದತ್ತನನ್ನು ಬಲಿ ಕೊಟ್ಟಾದ ಮೇಲೆ ತನ್ನ ನಿಜವಾದ ಮಗನನ್ನು ತರುವ ಸ್ಕೆಚ್ ಹಾಕಿರುತ್ತಾನೆ. ಅವಿನಾಶ್ ಮತ್ತು ಶ್ರೀನಾಥ್ ಯಾಕೆ ಇಪ್ಪತ್ತು ವರ್ಷಗಳಿಂದ ವೈರತ್ವ ಸಾಧಿಸುತ್ತಿರುತ್ತಾರೆ ಅನ್ನೋದು ಒಂದು ದೊಡ್ಡ ಕಥೆ. ಅದನ್ನು ಇಲ್ಲಿ ಹೇಳಲು ಸಾಧ್ಯವಿಲ್ಲ. ಯಾಕೆಂದರೆ ನಮ್ಮ ಸಂಪಾದಕಿ ಈ ಬಾರಿ ಹೆಚ್ಚು ಜಾಗ ಇಲ್ಲ ಅಂತ ಮೊದಲೇ ವಾರ್ನ್ ಮಾಡಿದ್ದಾಳೆ. ದರ್ಶನ್ "ನಾನೇ ನಿನ್ನ ಮಗ" ಅಂತ ಓವರ್ ಆಕ್ಟಿಂಗ್ ಮಾಡಿರುವ ವಿನಯ ಪ್ರಸಾದ್‌ಗೆ ಹೇಳುತ್ತಾನೆ. 'ಜೋಗಿ'ಯ ತರಹ 'ಅಮ್ಮ' ಅಂತ ಹಾಡು ಹೇಳುತ್ತಾನೆ. 'ಮುನ್ನಾಬಾಯಿ' ತರಹ ಡಾಕ್ಟರ್ ಬರೀ ಚಿಕಿತ್ಸೆ ನೀಡಿದರೆ ಸಾಲದು ಅಂತ ಹೇಳಿ ಅವನೇ ಪ್ರೀತಿಯಿಂದ ಅವಳನ್ನು ಗುಣಪಡಿಸುತ್ತಾನೆ. ಎಲ್ಲವನ್ನು ರಿವರ್ಸ್ ಮಾಡಿ ದರ್ಶನ್ ಸೇಡು ತುಂಬಿರುವ ಎರಡು ಸಂಸಾರಗಳನ್ನು ಒಂದು ಮಾಡುತ್ತಾನೆ.

ದರ್ಶನ್ ಈ ಚಿತ್ರದಲ್ಲಿ ಎಲ್ಲಾ ತರಹದ ಪಾತ್ರಗಳನ್ನು ಮಾಡಿದ್ದಾರೆ. ರಾಬಿನ್ ಹುಡ್ ತರಹ ಶ್ರೀಮಂತರಿಂದ ಕದ್ದು ಬಡವರಿಗೆ ಹಂಚುತ್ತಾರೆ. ಫ್ಯಾಂಟಮ್ ತರಹ 'ದತ್ತ' ಅಂತ ಬರೆದಿರುವ ಉಂಗುರದಿಂದ ವಿಲನ್‌ಗಳಿಗೆ ಹೊಡೆದು ಅವರ ಮುಖದ ಮೇಲೆ ತಮ್ಮ ಹೆಸರು ಅಚ್ಚಳಿಯದಂತೆ ಬಡಿಯುತ್ತಾರೆ. 'ಜೋಗಿ'ತರಹ ಅಮ್ಮ-ಮಗನ ಸೆಂಟಿಮೆಂಟಿನ ದೃಶ್ಯಗಳಲ್ಲೂ ನಟಿಸಿದ್ದಾರೆ. ಕೋಮಲ್ ಮತ್ತು ದರ್ಶನ್ ಕಾಂಬಿನೇಷನ್ ಸಖತ್ತಾಗಿದ್ದು ಅವರಿಬ್ಬರ ಕಾಮಿಡಿ ಸೀನ್‌ಗಳು ಚೆನ್ನಾಗಿವೆ. ಅದರಲ್ಲೂ "ರಾ ರಾ" ಅಂತ ಹೆಂಗಸರ ಆಭರಣಗಳು ದರ್ಶನ್‌ನನ್ನು ಕರೆಯುವ ಸೀನ್‌ಗಳಂತೂ ಮಜವಾಗಿವೆ. ದರ್ಶನ್‌ಗೆ ಒಂದೇ ಸಿನಿಮಾದಲ್ಲಿ ಎಲ್ಲಾ ರೀತಿಯ ಪಾತ್ರಗಳನ್ನು ಮಾಡಲು ನಿರ್ದೇಶಕ ಗುರುದತ್ ಅವಕಾಶ ಮಾಡಿಕೊಟ್ಟಿದ್ದಾರೆ. ಕಾಮಿಡಿ, ಫೈಟ್, ಸೆಂಟಿಮೆಂಟ್‌ನಂತಹ ಎಲ್ಲಾ ಮಸಾಲೆಗಳನ್ನು ಸರಿಯಾಗಿ ಮಿಕ್ಸ್ ಮಾಡಿರುವುದರಿಂದ 'ದತ್ತ' ಎಲ್ಲೂ ಬೋರ್ ಹೊಡೆಯೊಲ್ಲ, ದರ್ಶನ್ ಎಲ್ಲದರಲ್ಲೂ ಅಚ್ಚರಿ ಮೂಡಿಸುವಷ್ಟು ಚೆನ್ನಾಗಿ ನಟಿಸಿದ್ದಾರೆ.

ರಮ್ಯಳಿಗೆ ಹೆಚ್ಚಿನ ಪಾತ್ರವೇನಿಲ್ಲ. ಮುದ್ದಾಗಿ ಹಾಡಿಕೊಂಡು, ಕುಣಿದಾಡಿಕೊಂಡು ಕಾಲ ಕಳೆಯುತ್ತಾಳೆ.

ಹಿಂದೊಮ್ಮೆ ಕೇಳಿದ್ದ ಪ್ರಶ್ನೆಯನ್ನೇ ಮತ್ತೆ ಕೇಳುತ್ತೇನೆ: ಈ ಆರ್.ಪಿ. ಪಟ್ನಾಯಕ್ ಎಂಬಾತನಿಗೆ ಯಾಕೆ ನಮ್ಮ ಕನ್ನಡದವರಿಂದ ಇಷ್ಟು ಬೇಡಿಕೆ? ಎಷ್ಟೋ ಕಡೆ ಸಿನಿಮಾದಲ್ಲಿ ಕಾಮಿಡಿ ಚೆನ್ನಾಗಿದೆ ಅನ್ನಿಸಿದಾಗ ಡೈಲಾಗ್‌ಗಳೇ ಕೇಳಿಸದಷ್ಟು ಜೋರಾಗಿ ಹಿನ್ನೆಲೆ ಸಂಗೀತ ನೀಡಿದ್ದಾರೆ, ಅಲ್ಲಲ್ಲ ಗಲಾಟೆ ಮಾಡಿದ್ದಾರೆ.

'ದತ್ತ' ನೋಡಬಹುದೇ? ದರ್ಶನ್‌ಗೋಸ್ಕರ ನೋಡಿ! ಪೈಸಾ ವಸೂಲ್‌ಗಂತೂ ಮೋಸವಿಲ್ಲ.


-ಕವಿತಾ ಲಂಕೇಶ್

ಒಂದು ಕೊಲೆಯ ರಾಜಕೀಯ

ಗೋಹತ್ಯೆ: 'ಕೊಂದ ಪಾಪ ತಿಂದು ಪರಿಹಾರ'

(ಕಳೆದ ವಾರದ ಮುಂದುವರಿದ ಭಾಗ)

ಕೊಲೆಗಳು ನಡೆಯುವುದು ಹೆಣ್ಣು ಹೊನ್ನು ಅಥವಾ ಮಣ್ಣಿಗಾಗಿ ಎಂಬುದು ಲೋಕಜ್ಞಾನದ ಮಾತು. ಆದರೆ ಕಾವಡಿ ಕೃಷ್ಣಯ್ಯನವರ ಕೊಲೆ ನಡೆದದ್ದು ಈ ಯಾವ ಕಾರಣಕ್ಕಾಗಿಯೂ ಅಲ್ಲ, ಅದು ಒಂದು ಮಾಮೂಲಿ ಅಪರಾಧ ಅಲ್ಲ; ಅದನ್ನು ನಡೆಸಿದವರು ಸಾಮಾನ್ಯ ಜನಗಳೂ ಅಲ್ಲ. ಈ ಕೊಲೆ, ತಮ್ಮ ಹಿಂದೂತ್ವದ ಸಿದ್ಧಾಂತವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಭಜರಂಗದಳದ ಪದಾಧಿಕಾರಿಗಳೇ ಮುಂದೆ ನಿಂತು ನಡೆಸಿದ ಒಂದು ರಾಜಕೀಯ ಕೃತ್ಯ. ಕೃಷ್ಣಯ್ಯನವರ ಕೊಲೆಯ ಕೇಸನ್ನು ಮೊದಲು ದಾಖಲು ಮಾಡಿಕೊಂಡ ಕೋಟೆ ಪೊಲೀಸು ಠಾಣೆಯವರು "ಪೂರ್ವ ದ್ವೇಷ" ಕೊಲೆಗೆ ಕಾರಣವೆಂದು ನಮೂದು ಮಾಡಿದ್ದಾರೆ; ಈ ಕರಾವಳಿಯ ಪುಡಿ ಪತ್ರಿಕೆಯೊಂದು (ವಿಜಯ ಕಿರಣ) ಜಾಗದ ತಕರಾರು ಇತ್ತು ಎಂಬ ಗುಮಾನಿಯನ್ನೂ ತೇಲಿಬಿಟ್ಟಿದೆ. ಆದರೆ ಮೃತ ಕೃಷ್ಣಯ್ಯನವರ ಮನೆಯವರೇ ಹೇಳುವಂತೆ ಕೊಲೆ ಮಾಡಿದ ಕುಮಾರಸ್ವಾಮಿ ಮತ್ತು ಕೃಷ್ಣ ಶ್ಯಾನುಭಾಗನಿಗೆ ಕೃಷ್ಣಯ್ಯನವರ ಜೊತೆ ಯಾವ ಪೂರ್ವ ದ್ವೇಷವೂ ಇರಲಿಲ್ಲ, ವಾಸ್ತವವಾಗಿ ಅವರಿಬ್ಬರೂ ಕೃಷ್ಣಯ್ಯನವರ ಮನೆಯಲ್ಲಿ ಹಲವು ಬಾರಿ ಉಂಡು ಕೈ ತೊಳೆದುಕೊಂಡವರು. ಈ ಕೊಲೆಯ ಕೇಸು ಈಗ ಬ್ರಹ್ಮಾವರದ ಸರ್ಕಲ್ ಇನ್ಸ್‌ಪೆಕ್ಟರ್‌ರ ಕಚೇರಿಗೆ ವರ್ಗಾಯಿಸಲ್ಪಟ್ಟಿದ್ದು ಪೊಲೀಸರು ಕುಮಾರಸ್ವಾಮಿ ಮತ್ತು ಕೃಷ್ಣ ಶ್ಯಾನುಭಾಗನನ್ನು ಬಂಧಿಸಿದ್ದಾರೆ. ಅವರ ಮೇಲೆ, ಕೆಳ ಕೋರ್ಟುಗಳಲ್ಲಿ ಜಾಮೀನು ಸಿಗದ ಸೆಕ್ಷನ್ 302 (ಐಪಿಸಿ)ರ ಅಡಿಯಲ್ಲಿ ಮೊಕದ್ದಮೆ ದಾಖಲಾಗಿದೆ. ಕುಮಾರಸ್ವಾಮಿ ಪೆರೋಲ್ ಮೇಲೆ ಬಿಡುಗಡೆಯಾಗಿದ್ದಾನೆ ಎಂದು ಸುದ್ದಿ. ತಂಡದಲ್ಲಿದ್ದ ಇತರ ಸುಮಾರು 15 ಜನರಲ್ಲಿ ಇದುವರೆಗೂ ಯಾರನ್ನೂ ಬಂಧಿಸಿಲ್ಲ. ಪೊಲೀಸು ಮೂಲಗಳ ಪ್ರಕಾರ ಇವರೆಲ್ಲರೂ ಬಾರಕೂರು ಆಸುಪಾಸಿನ ಯುವಕರು ಮತ್ತು ಬಿಲ್ಲವ, ಮೊಗವೀರ ಮುಂತಾದ ಕೆಳಜಾತಿಗಳವರು. ಕರಾವಳಿಯಲ್ಲಿ ಹಿಂದೂತ್ವದ ಹಿಂಸೆಯನ್ನು ಪ್ರಯೋಜಿಸುವವರು ಮತ್ತು ಆದೇಶ, ಸಿದ್ಧಾಂತ, ಸಮರ್ಥನೆಗಳನ್ನು ಒದಗಿಸುವವರು ಬ್ರಾಹ್ಮಣ ಮತ್ತಿತರ ಮೇಲು ಜಾತಿಗಳವರು. ಚಾಕು, ಚೂರಿ, ಬಡಿಗೆಗಳಿಂದ ಬೀದಿಗಳಲ್ಲಿ ಹಿಂಸೆ ನಡೆಸುವವರು ಶೂದ್ರರು. ವರ್ಣಾಶ್ರಮ ಪದ್ಧತಿಯ ಶ್ರಮ ವಿಭಜನೆಯನ್ನು ಹಿಂದೂತ್ವ ಅಳವಡಿಸಿಕೊಂಡ ರೀತಿ ಇದು! ಕಾವಡಿ ಕೊಲೆ ಪ್ರಕರಣದಲ್ಲೂ ಈ ಶ್ರಮ ವಿಭಜನೆ ಸ್ಪಷ್ಟವಾಗಿ ಕಾಣುತ್ತದೆ.



ಗೋವಿನ ಪಾವಿತ್ರ್ಯ ಮತ್ತು ಗೋಹತ್ಯೆ ನಿಷೇಧದ ಕುರಿತ ಹಿಂದೂತ್ವದ ವಿಚಾರಗಳ ಮೂರ್ಖತನಕ್ಕೆ ಕೃಷ್ಣಯ್ಯನವರ ಕೊಲೆ ಒಂದು ಪಠ್ಯ ಪುಸ್ತಕದ ಉದಾಹರಣೆಯಂತಿದೆ. ಕಾವಡಿಯಲ್ಲಿ ಕೃಷ್ಣಯ್ಯ ಜಾನುವಾರು ವ್ಯಾಪಾರ ಮಾಡುತ್ತಿದ್ದುದು ಹೌದು. ಅವರು ಖಂಡಿತವಾಗಿಯೂ ಒಬ್ಬ ಹಿಂದೂ; ಅದರಲ್ಲೂ ಒಬ್ಬ ಬ್ರಾಹ್ಮಣನಾಗಿ ನೂರಕ್ಕೆ ನೂರು ಹಿಂದೂ. ಆದರೆ ಅವರು ಕರಾವಳಿಯಲ್ಲಿ ಜಾನುವಾರು ವ್ಯಾಪಾರ ಮಾಡುತ್ತಿರುವವ ಏಕಮಾತ್ರ ಹಿಂದೂ ಅಲ್ಲ, ಹಳ್ಳಿ ಹಳ್ಳಿಯಲ್ಲೂ ಈ ವ್ಯವಹಾರದಲ್ಲಿ ತೊಡಗಿಕೊಂಡಿರುವ ಹಿಂದೂಗಳಿದ್ದಾರೆ; ಬ್ರಾಹ್ಮಣರೂ ಇದ್ದಾರೆ. ಅದು ನಮ್ಮ ಹಳ್ಳಿಗಳಲ್ಲಿ ಒಂದು ಉಪವೃತ್ತಿ. ಕೃಷ್ಣಯ್ಯನಿಗೆ ಜಾನುವಾರು ವ್ಯಾಪಾರದ ಜೊತೆ ಜಾನುವಾರು ಸಾಕಣೆಯಲ್ಲೂ ಪರಿಣತಿ ಇತ್ತು. ಅವರ ಕಂಬಳದ (ಕರಾವಳಿಯ ಜಾನಪದ ಕ್ರೀಡೆಯಾದ ಕೋಣಗಳ ಓಟದ ಸ್ಪರ್ಧೆ) ಕೋಣಗಳು ಜಿಲ್ಲೆಯಲ್ಲಿ ಹೆಸರು ಮಾಡಿದ್ದವು. ಕೃಷ್ಣಯ್ಯನಿಗೆ ತನ್ನ ಹಟ್ಟಿಯ ಕಾಲ್ನಡೆಗಳ ಬಗ್ಗೆ ಎಷ್ಟು ಪ್ರೀತಿ ಇತ್ತು ಎಂದು ಬಣ್ಣಿಸುತ್ತ ಅವರ ಮನೆಯವರು ನಮಗೆ ಒಂದು ಫೋಟೋ ತೋರಿಸಿದರು. ಅದು ಕೃಷ್ಣಯ್ಯ ತನ್ನ ಮೊಮ್ಮಗನನ್ನು ಒಂದು ಎಳೆಗರುವಿನ ಜೊತೆ ನಿಲ್ಲಿಸಿ ತೆಗೆಸಿದ ಫೋಟೋ. ಅದನ್ನು ನೋಡುತ್ತ ನಮಗೆ, ಕೃಷ್ಣಯ್ಯ ಆ ಕರುವನ್ನು ನೆಪ ಮಾಡಿಕೊಂಡು ನಮ್ಮ ಮೊಮ್ಮಗನಲ್ಲಿ ಬಾಲಕೃಷ್ಣನನ್ನೇ ಕಂಡರು ಎಂದು ಅನ್ನಿಸಿತು. ಇದರಲ್ಲಿ ಏನೂ ವಿಶೇಷವಿಲ್ಲ, ಕರಾವಳಿಯಲ್ಲಿ ದನಕರು ಸಾಕುವ ಹಿಂದೂಗಳೆಲ್ಲರ ಭಾವನೆ ಇದು. ಆದರೆ ಈ ಭಾವನೆ ಬೇರೂರಿರುವುದು ಈ ಲೋಕದ, ಈ ಕ್ಷಣದ ಬದುಕಿನಲ್ಲಲ್ಲ. ಹಾಗಾಗಿ ಯಾರೂ ಹಾಲು ಕರೆಯದ, ಗಬ್ಬ ನಿಲ್ಲದ ದನ ಎಮ್ಮೆಗಳನ್ನಾಗಲೀ ಕೆಲಸಕ್ಕೆ ಬಾರದ ಎತ್ತು ಕೋಣ ಕಡಸು (ಗಂಡುಕರು)ಗಳನ್ನಾಗಲೀ ತಮ್ಮ ಹಟ್ಟಿಯಲ್ಲಿ ಅವು ಸಾಯುವವರೆಗೆ ಇರಿಸಿಕೊಂಡು ಸಾಕುವುದಿಲ್ಲ, ಉಡುಪಿಯ ಕೃಷ್ಣ ಮಠ ಬಿಟ್ಟರೆ ಬೇರೆ ಯಾರಿಗೂ ಹಾಗೆ ಸಾಕುವ ತ್ರಾಣವೂ ಇಲ್ಲ. ಇತರ ಕಡೆಗಳಂತೆ ಕರಾವಳಿಯಲ್ಲಿಯೂ ಜಾನುವಾರು ಕೊಳ್ಳುವುದು, ಸಾಕುವುದು, ಅವುಗಳ ಉಪಯೋಗ ತೀರಿದ ಮೇಲೆ ಅವನ್ನು ಮಾರುವುದು ನಿತ್ಯದ ವ್ಯವಹಾರ. ಈ ನಿರುಪಯುಕ್ತ ಜಾನುವಾರುಗಳನ್ನು ಕೊಳ್ಳುವವರು ಮಾಂಸಕ್ಕಾಗಿಯೇ ಅವನ್ನು ಕೊಳ್ಳುವುದು ಎಂಬುದೂ ಮಾರುವವರಿಗೆ ಗೊತ್ತು; ಮಾಂಸಕ್ಕಾಗಿ ದನಕರುಗಳನ್ನು ಕೊಳ್ಳುವ ಮುಸ್ಲಿಮರು ಹಿಂದೂ ಧರ್ಮವನ್ನು ಅವಮಾನಿಸಲೆಂದು ಹಾಗೆ ಮಾಡುತ್ತಿಲ್ಲ ಎನ್ನುವುದೂ ಗೊತ್ತು. 'ಕೊಂದ ಪಾಪ ತಿಂದು ಪರಿಹಾರ' ಎಂಬ ಗಾದೆ ಮಾತು ಕೂಡ ಈ ಲೋಕ ಜ್ಞಾನವನ್ನೇ ಸೂಚಿಸುತ್ತದೆ. ಭಜರಂಗಿಗಳು, ಉಡುಪಿಯ ಮಠಾಧೀಶರುಗಳು ಮತ್ತು ರಾಮಚಂದ್ರಾಪುರಮಠದ ಸ್ವಾಮಿಗಳು ವಾದಿಸುತ್ತಿರುವಂತೆ, ಜಾನುವಾರು ವ್ಯಾಪಾರ, ಸಾಗಾಣಿಕೆ ಮತ್ತು ಮಾಂಸಕ್ಕಾಗಿ ಅವುಗಳ ಕಸಾಯಿ, ಕದ್ದು ಮುಚ್ಚಿ ಮಾಡುವ ವ್ಯವಹಾರಗಳಲ್ಲ, ಕ್ರಿಮಿನಲ್ ಅಪರಾಧವೂ ಅಲ್ಲ. ಕರ್ನಾಟಕದ ಗೋಹತ್ಯೆ ನಿಷೇಧದ ಕಾಯ್ದೆ ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಿಲ್ಲ. ಕೆಲವು ಶರತ್ತುಗಳಿಗೆ ಒಳಪಟ್ಟು, ಮಾಂಸಕ್ಕಾಗಿ ಗೋಹತ್ಯೆ ನಡೆಸುವುದಕ್ಕೆ ಈ ಕಾನೂನಿನಲ್ಲಿ ಅವಕಾಶವಿದೆ. ಈಗ ಕೆಲವು ವರ್ಷಗಳ ಹಿಂದಿನವರೆಗೆ, ದನ ಸಾಗಾಣಿಕೆ ಕುರಿತು ಕ್ರಿಮಿನಲ್ ಕಂಪ್ಲೆಂಟುಗಳೇ ನಮ್ಮ ಪೊಲೀಸು ಠಾಣೆಗಳಲ್ಲಿ ದಾಖಲಾಗುತ್ತಿರಲಿಲ್ಲ.



ಮುಸ್ಲಿಮರ ವಿರುದ್ಧ ಹಿಂದೂಗಳ ಭಾವನೆಗಳನ್ನು ಕೆರಳಿಸಲು ಸಂಘ ಪರಿವಾರ ಕಳೆದ ಶತಮಾನದ ಆದಿಯಿಂದಲೇ ಗೋಹತ್ಯಾ ನಿಷೇಧದ ಬೇಡಿಕೆಯನ್ನು ಒಂದು ಉಪಾಯವಾಗಿ ಬಳಸುತ್ತ ಬಂದಿದೆ. ಅದು ದೇಶದ ರಾಜಕೀಯದಲ್ಲಿ ಮುನ್ನೆಲೆಗೆ ಬಂದ ಮೇಲೆ, ಕರಾವಳಿಯಲ್ಲಿ ಅದರ ದೊಣ್ಣೆ ವೀರರಾದ ಭಜರಂಗಿಗಳು ಊರುಊರುಗಳಲ್ಲಿ ದನ ಸಾಗಿಸುವ ಮುಸ್ಲಿಮರನ್ನು ಇನ್ನಿಲ್ಲದಂತೆ ಹಿಂಸಿಸತೊಡಗಿದರು; ಜೊತೆಗೆ ಅಕ್ರಮ ಜಾನುವಾರು ಸಾಗಾಣಿಕೆ ಕುರಿತು ಪೊಲೀಸು ಠಾಣೆಗಳಲ್ಲಿ ದೂರುಗಳನ್ನು ದಾಖಲಿಸ ತೊಡಗಿದರು. ಬ್ರಹ್ಮಾವರ ಸರ್ಕಲ್‌ನಲ್ಲಿ ಕಳೆದ ಮೂರು ವರ್ಷಗಳಲ್ಲಿ ಇಂತಹ 13 ದೂರುಗಳು ದಾಖಲಾಗಿದ್ದು ಬಹುತೇಕ ಎಲ್ಲವನ್ನೂ ತನಿಖೆಯ ನಂತರ ಕೈಬಿಡಲಾಗಿದೆ. ಯಾಕೆಂದರೆ ಆರೋಪಿಗಳು ತಾವು ಸಾಗಿಸುತ್ತಿದ್ದ ಜಾನುವಾರುಗಳನ್ನು ಖರೀದಿಸಿದ್ದರೇ ಹೊರತು ಕಳ್ಳತನದಲ್ಲಿ ಎಗರಿಸಿರಲಿಲ್ಲ ಎನ್ನುವುದು ಸಾಬೀತಾಗಿತ್ತು.

ಕೃಷ್ಣಯ್ಯ ಕಾವಡಿಯಲ್ಲಿ ಜಾನುವಾರು ವ್ಯಾಪಾರದ ಜೊತೆ ಗದ್ದೆ ಬೇಸಾಯವನ್ನೂ ಮಾಡುತ್ತಿದ್ದರು. ಜೊತೆಗೆ ಅವರು ಅಲ್ಲಿನ ಮಹಲಿಂಗೇಶ್ವರ ದೇವಸ್ಥಾನದ ಪಾಟಾಳಿ ಕೂಡ ಆಗಿದ್ದರು. ಪಾಟಾಳಿಗಳು ಎಂದರೆ ದೇವಸ್ಥಾನಗಳಲ್ಲಿ ಅರ್ಚಕರಿಗೆ ಸಹಾಯಕರಾಗಿ ಗರ್ಭಗುಡಿಯ ಆವರಣವನ್ನು ಸ್ವಚ್ಛಗೊಳಿಸುವುದು, ಪೂಜಾ ಸಾಮಗ್ರಿ ಅಣಿಗೊಳಿಸುವುದು, ನೈವೇದ್ಯದ ಅನ್ನ ಬೇಯಿಸುವುದು, ಉತ್ಸವದಲ್ಲಿ ದೇವರ ಸ್ವಸ್ತಿ ಹೇಳುವುದು-ಮುಂತಾದ ಕೆಲಸಗಳನ್ನು ಮಾಡುವವರು. ಹಳ್ಳಿಗಳ ರೆವಿನ್ಯೂ ಆಡಳಿತವನ್ನು ಶ್ಯಾನುಭೋಗ ಮತ್ತು ಪಟೇಲರು ನೋಡಿಕೊಳ್ಳುತ್ತಿದ್ದ ಕಾಲದಲ್ಲಿ ಕೃಷ್ಣಯ್ಯ ಗ್ರಾಮ ಉಗ್ರಾಣಿಯೂ ಆಗಿದ್ದರಂತೆ. ಸಮಾಜದ ಬದುಕಿಗೆ ಅರ್ಚಕರು, ಧರ್ಮ ಗುರುಗಳು, ಶಿಕ್ಷಕರು, ವೈದ್ಯರು ಮತ್ತು ವರ್ತಕರು ಎಷ್ಟು ಅವಶ್ಯವೋ ಜಾನುವಾರು ವ್ಯಾಪಾರಿಗಳೂ ಅಷ್ಟೇ ಅವಶ್ಯ. ಕಾವಡಿ ಕೃಷ್ಣಯ್ಯನವರ ಇತರ ವೃತ್ತಿಗಳಂತೆ ಅವರ ಜಾನುವಾರು ಸಾಕಣೆ ಮತ್ತು ವ್ಯಾಪಾರಗಳೂ ಕೂಡ ಆ ಗ್ರಾಮದ ಬದುಕಿಗೆ ಅತ್ಯವಶ್ಯವಾದ ಸೇವೆಗಳಾಗಿದ್ದವು. ಅವರು ತೀರಿಕೊಂಡ ಮೂರನೆಯ ದಿನ ನಾವು ಅವರ ಮನೆಯವರ ಜೊತೆ ಮಾತಾಡುತ್ತಿದ್ದಾಗಲೇ, ಪಕ್ಕದ ಒಂದು ಹಳ್ಳಿಯಿಂದ, "ಹೆಣ್ಣು ಕರು ಹಾಕಿದ ದನವೊಂದು ಮಾರಾಟಕ್ಕಿದೆ; ಗಿರಾಕಿ ಇದ್ದರೆ ತಿಳಿಸಿ" ಎಂಬ ಫೋನ್ ಕರೆ ಬಂದಿತ್ತು! ಬಹುಶಃ ಕರೆ ಮಾಡಿದವರಿಗೆ ನಡೆದ ಸಂಗತಿಯೇ ಗೊತ್ತಿರಲಿಲ್ಲ!

ಕೃಷ್ಣಯ್ಯನವರ ಕೊಲೆಗೆ ಉಡುಪಿಯ ಸಾರ್ವಜನಿಕ ಪ್ರತಿಕ್ರಿಯೆ ಕುರಿತು ಏನನ್ನೂ ಹೇಳದೇ ಇರುವುದೇ ಒಳ್ಳೆಯದು. ಜಿಲ್ಲೆಯ ಒಂದು ಪ್ರಮುಖ ಪಕ್ಷ ಜೆಡಿಎಸ್ ಪ್ರಕರಣದ ಬಗ್ಗೆ ಯಾಕೆ ಮೌನವಾಗಿದೆ ಎಂದು ವಿವರಿಸುವ ಅಗತ್ಯವಿಲ್ಲ; ಇನ್ನೊಂದು ಪ್ರಮುಖ ಪಕ್ಷ ಕಾಂಗ್ರೆಸ್ ಆತ್ಮಹತ್ಯೆ ಮಾಡಿಕೊಂಡು ವರ್ಷಗಳೇ ಕಳೆದಿವೆ. ಆದಿ ಉಡುಪಿಯ ಬೆತ್ತಲೆ ಪ್ರಕರಣದ ನಂತರ ನಡೆದ ಭಾರೀ ಪ್ರತಿಭಟನೆಯಿಂದಾಗಿ (ಇದರಲ್ಲಿ ಕೂಡ ಈ ಎರಡು ಪಕ್ಷಗಳ ಪಾತ್ರವೇನೂ ಇರಲಿಲ್ಲ) ಬಿಜೆಪಿ ತನಗೂ ಅದಕ್ಕೂ ಸಂಬಂಧವಿಲ್ಲ ಎಂಬ ಹೇಳಿಕೆಯನ್ನು ಹೊರಡಿಸಿ ಮಾನ ಉಳಿಸಿಕೊಳ್ಳುವ ಪ್ರಯತ್ನ ನಡೆಸಿತ್ತು. ಈ ಪ್ರಸಂಗದಲ್ಲಿ ಅದಕ್ಕೆ ಆ ಸಣ್ಣ ಕಿರಿಕಿರಿ ಕೂಡ ಇಲ್ಲ.

– ಜಿ.ರಾಜಶೇಖರ್, ಕೆ. ಫಣಿರಾಜ್

ಹೆಣ್ಣು ಯಾವಾಗಲೂ ಏನನ್ನಾದರೂ ಹೊತ್ತುತರುತ್ತಾನೆ -ಓವಿಡ್

ಅಣಕ

ಭಾರತೀಯ ಕ್ರಿಕೆಟ್ ವೀರರು ಏಕದಿನ ಪಂದ್ಯದಲ್ಲಿ ವೆಸ್ಟ್‌ಇಂಡೀಸ್ ಪಾಂಡಿಗರಿಂದ ಹಿಗ್ಗಾಮುಗ್ಗಾ ಚಚ್ಚಿಸಿಕೊಂಡದ್ದು, ಅದರಿಂದೇನೂ ತರಬೇತುದಾರ ಗ್ರೇಗ್ ಚಾಪೆಲ್ ತಲೆ ಕೆಡಿಸಿಕೊಂಡಿಲ್ಲ. ಗೆಲ್ಲುವ ಅವಕಾಶಗಳನ್ನು ಸೋಲಲು ಪರಿವರ್ತಿಸುವ ಭಾರತೀಯ ತಂಡದವರ ಪ್ರಾವೀಣ್ಯತೆಯಿಂದಲೂ ಅವರ ಮನ ನೊಂದಿಲ್ಲ. ತಮ್ಮ ಹುಡುಗರ ಮೇಲೆ ಅವರಿಗೆ ಅಪಾರ ನಂಬಿಕೆ. ವೆಸ್ಟ್‌ಇಂಡೀಸ್ ತಂಡದ ಎದುರು ಇಂತಹ ಹೀನಾಯ ಸೋಲು ಅನುಭವಿಸಿದ್ದು ಯಾಕೆ, ಆ ತಂಡವನ್ನು ಸದೆಬಡಿಯಲು ಏನು ಅಡ್ಡಿ ಇತ್ತು ಎಂಬಂತಹ ಪ್ರಶ್ನೆಗಳಿಗೆ 'ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದಾರೆ' ಎಂಬ ಘನವಾದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಸೂಕ್ತ ಸಮಯ' ಎಂಬ ಮಾತು ಇದುವರೆವಿಗೆ ರಾಜಕಾರಣಿಗಳಿಗೆ ಸೀಮಿತ ಆಗಿತ್ತು. ರಾಜಕಾರಣಿಗಳು ಮಾಧ್ಯಮದವರ ಎದುರು ತುತ್ತೂರಿ ಊದುವಾಗ 'ನಮ್ಮ ಎದುರು ಸಂಚು ಮಾಡುತ್ತಿರುವವರು ಯಾರು ಎಂಬುದು ನನಗೆ ತಿಳಿದಿದೆ', 'ಈ ಯೋಜನೆಗೆ ಅಡ್ಡಗಾಲು ಯಾರು ಹಾಕುತ್ತಿದ್ದಾರೆ ಎಂಬುದು ಗೊತ್ತು' ಎನ್ನುವಂತಹ ಮಾತುಗಳನ್ನು ಉರುಳಿಸುತ್ತಲೇ ಇರುತ್ತಾರೆ. 'ಎಲ್ಲಾನೂ ಹೇಳಿ ಇದೊಂದನ್ನು ಯಾಕೆ ಬಚ್ಚಿಡುತ್ತಿದ್ದೀಯಾ ಅವರ ಹೆಸರನ್ನು ಬೊಗಳು ಮಾರಾಯ' ಅಂದರೆ ಅವರಿಂದ ಬರುವ ಸಿದ್ಧ ಉತ್ತರ... 'ಸೂಕ್ತ ಸಮಯದಲ್ಲಿ ಬಹಿರಂಗಗೊಳಿಸುತ್ತೇನೆ!' ವಿಷಯ ಸ್ಪಷ್ಟೀಕರಿಸಲು ಬಯಸುವ ಯಾವುದೇ ವ್ಯಕ್ತಿ ಸಮಯ ಬರಲಿ ಅಂತ ಕಾಯ್ದು ಕುಳಿತಿರುವುದಿಲ್ಲ. ಜನರನ್ನು ಗೊಂದಲಕ್ಕೆ ಈಡು ಮಾಡುವ ಪ್ರಯತ್ನ ಇದು. ಈ ಮಾತುಗಳ ಅರ್ಥ ಏನು ಅಂದರೆ... ಇದರ ಹಿಂದೆ ಯಾರೂ ಇಲ್ಲ ಅಥವಾ ಯಾರು ಇದ್ದಾರೆ ಎಂಬುದು ತಿಳಿದಿಲ್ಲ! ಬಹಿಂಗಗೊಳಿಸುವ 'ಸೂಕ್ತ ಸಮಯ' ಎಂದೂ ಬರುವುದೇ ಇಲ್ಲ!

ಇದು ಏನೇ ಇರಲಿ. ರಾಜಕೀಯ ಕ್ಷೇತ್ರಕ್ಕೆ ಮೀಸಲಿದ್ದ ಈ ಮಾತುಗಳನ್ನು ಗ್ರೇಗ್ ಸಾಹೇಬರು ಕ್ರೀಡಾ ಕ್ಷೇತ್ರಕ್ಕೂ ವಿಸ್ತರಿಸಿರುವುದು ಭಾರತೀಯ ಮನೋಭಾವಕ್ಕೆ ಹೊಂದುವಂತೆಯೇ ಇದೆ. ಅದಕ್ಕೇ ಏನೋ ವೆಸ್ಟ್‌ಇಂಡೀಸರನ್ನು ಸದೆ ಬಡಿಯುವ ಸೂಕ್ತ ಸಮಯ ಯಾವಾಗ ಲಭಿಸುತ್ತದೆ ಎಂಬುದನ್ನು ಅವರು ಬಯಲುಗೊಳಿಸಿಲ್ಲ. ಭಾರತೀಯ ದೇವ-ದೇವತೆಗಳನ್ನು ಹೋಮ-ಹವನದಿಂದ ಸಂತೃಪ್ತಿ ಗೊಳಿಸಿದ ನಂತರ ಜ್ಯೋತಿಷಿಗಳನ್ನು ಸಂಪರ್ಕಿಸಿ ತಿಳಿಸಬಹುದೇನೋ!

ಸೂಕ್ತ ಸಮಯ ಎಂದಾಗ ಜಾರ್ಜ್ ಬರ್ನಾಡ್ ಷಾ ಅವರ ಬದುಕಿನ ಒಂದು ಘಟನೆ ನೆನಪಿಗೆ ಬರುತ್ತಿದೆ. ಷಾ ಅವರು ಅಮೆರಿಕದ ವಿರುದ್ಧ ಒಮ್ಮೆ ಕಾರವಾಗಿ ಪ್ರತಿಕ್ರಿಯಿಸಿದ್ದರು. ಇದಕ್ಕೆ ತಕ್ಕ ಉತ್ತರ ನೀಡಲು ಅಮೆರಿಕದ ಪತ್ರಿಕಾವಲಯ ಸೂಕ್ತ ಸಮಯಕ್ಕಾಗಿ ಕಾಯುತ್ತಿತ್ತು.

ಷಾ ಒಮ್ಮೆ ಅಮೆರಿಕಕ್ಕೆ ಭೇಟಿ ನೀಡಿದ್ದರು. ಅವರ ಜೊತೆ ಅವರ ಹೆಂಡತಿಯೂ ಇದ್ದರು. ಷಾ ಅವರಿಗೆ ಅಲ್ಲಿನ ಜನತೆ ಅಭೂತಪೂರ್ವ ಸ್ವಾಗತ ನೀಡಿದರು. ಅಲ್ಲಿನ ಪತ್ರಿಕೆಗಳು ವರದಿ ಮಾಡಿದವು: 'ಮಿಸೆಸ್ ಷಾ ಅವರಿಗೆ ಅದ್ದೂರಿ ಸ್ವಾಗತ' ಎಂಬ ಶೀರ್ಷಿಕೆಯಡಿ ಮಿಸೆಸ್ ಷಾ ಅವರನ್ನು ಹಾಡಿ ಹೊಗಳಿ ಕೊನೆಯಲ್ಲಿ ಸೇರಿಸಿದ್ದು- ಮಿಸೆಸ್ ಷಾ ಅವರೊಡನೆ ಶ್ರೀಯುತ ಬರ್ನಾಡ್‌ನ ಷಾ ಸಹ ಇದ್ದರು!


ಷಾ ಅವರಿಗೆ ವೈಟ್‌ಹೌಸ್‌ನಲ್ಲಿ ಔತಣ ಕೂಟ ಇತ್ತು; ಪತ್ರಿಕೆಗಳು ಮಿಸೆಸ್ ಷಾ ಅವರ ಉಡುಗೆ ತೊಡುಗೆ, ಅವರ ನಡಿಗೆ ಶೈಲಿ, ಊಟದ ವೈಖರಿ ಎಲ್ಲವನ್ನು ವರ್ಣರಂಜಿತವಾಗಿ ಬಣ್ಣಿಸಿ ಕೂಟದ ವಿವರ ನೀಡಿತು. ಕೊನೆಯ ಸೇರ್ಪಡೆ ಏನು ಅಂದರೆ ಅವರ ಜೊತೆ ಅವರ ಪತಿ ಷಾ ಸಹ ಇದ್ದರು!

ಹೀಗೆ ಹಲವು ದಿನ ಷಾರಿಂದ ಹಲವಾರು ಕಾರ್ಯಕ್ರಮಗಳು. ಆದರೆ ಎಲ್ಲ ಪತ್ರಿಕೆಗಳಲ್ಲೂ ಮಿಸೆಸ್ ಷಾ ಅವರದ್ದೇ ದರ್ಬಾರು. ನಮ್ಮ ಪತ್ರಿಕೆಗಳಲ್ಲಿ ಬರುವ ಫೋಟೋ ಕೆಳಗೆ ಕೆಲವರ ಹೆಸರು ಹೇಳಿ ಹಾಗೂ ಇತರರು ಇದ್ದಾರೆ ಅಂತ ಬರೆದಿರೋದಿಲ್ವೆ ಹಾಗೇನೇ ಬರ್ನಾರ್ಡ್ ಷಾ ಅವರ ಪಾಡೂ ಆಗಿತ್ತು!

ಹಾಜರಾತಿ ಇದ್ದರೆ ವಿವರಣೆ. ಇಲ್ಲ ಅವರಿಗಾಗಿ ಕಾಯುವ ಸಾವಧಾನ. ಅವರು ಬಂದ ನಂತರವೇ ಚಟುವಟಿಕೆಗಳು.

ಅದು ಹಾಗಿರಲಿ. ನಾನು ಹೇಳಬೇಕೆಂದಿರುವುದು ಆ ಕಾಲದ ಮಾತು. 'ಎಷ್ಟೇ ಖರ್ಚಾಗಲಿ ನನ್ ಫೋಟೋ ಪೇಪರ್ನಾಗೆ ಬರ್ಬೇಕುಸಾ' ಅಂತಿದ್ದ ಕಾಲದ ಮಾತು. ಫೋಟೋ ಹಾಕಬೇಕಾದರೆ ಕಾರಣ ಅಂತ ಒಂದು ಬೇಕಲ್ಲ, ನಿಧನ ಅಂತ ಹಾಕಬಹುದು. ಆದರೆ ಅವನು ಸಾಯಬೇಕು. ಸತ್ತ ಮೇಲೆ ಅವನು ಫೋಟೋ ನೋಡೋಕಾಗಲ್ಲ. ಹಣದ ಆಸೆ ನೋಡಿ, ಒಬ್ಬ ಪತ್ರಕರ್ತ ಸದವಕಾಶ ಬಳಸಿ ಅವನನ್ನು ವೇದಿಕೆ

ಸೂಕ್ತ ಸಮಯದಲ್ಲಿ....



ಪತ್ರಿಕೆಗಳಲ್ಲಿ ಬರುವ ಫೋಟೋ ವಿಷಯ ಅಂತ ಹೇಳಿದೆನಲ್ಲ, ಅದು ಹಳೆ ಕಾಲದ ಮಾತು. ಈಗ ಪತ್ರಿಕೆಗಳಿಗಿಂತ ಟಿವಿಯಲ್ಲಿ ತಮ್ಮ ಮುಖ ಕಾಣಿಸಿಕೊಳ್ಳಬೇಕು ಎಂಬ ಆಸೆ ಬಲು ಜನಕ್ಕೆ. ಬಹಳಷ್ಟು ಚಳವಳಿಗಳು ಟಿವಿ ಚಳವಳಿಗಳು. 'ಎಲ್ಲಿಯವರೆಗೆ ಹೋರಾಟ,' ಅಂದರೆ 'ಸಾಯುವವರೆಗೆ ಹೋರಾಟ' ಅಂತ ಕೂಗುತ್ತಾರಲ್ಲ ಅದು ನಿಜಕ್ಕೂ ಏನು ಅಂದರೆ 'ಟಿವಿಯವರು ಬಂದು ಹೋಗುವವರೆಗೆ ಹೋರಾಟ.' ಟಿವಿ ಕ್ಯಾಮೆರಾ ಎದುರು ಬಂದು ಹೋದರೆ ಮುಗೀತು. ಚಳವಳಿ ಅಂದಿಗೆ ಅಂತ್ಯ. ಎಷ್ಟೋ ಸಲ ಕ್ಯಾಮೆರಾದವರೆ ಘೋಷಣೆ ಕೂಗಿ ಅಂತ ಹೇಳಿ ಕೂಗಿಸಿ ಆಕ್ಷನ್ ಫೋಟೋ ತೆಗೆದುಕೊಳ್ಳಬೇಕಾಗುತ್ತೆ. ಇದರಲ್ಲೇನೂ ತಪ್ಪಿಲ್ಲ ಬಿಡಿ. ಪಾಪ ಚಳವಳಿಗಾರರು ಎಷ್ಟು ಹೊತ್ತು ಅಂತ ಘೋಷಣೆ ಕೂಗುವುದಕ್ಕೆ ಆಗುತ್ತೆ ಹೇಳಿ. ಸೊರಗಿ ಸುಸ್ತಾದವರ ಫೋಟೋ ತೆಗೆಯುವುದಕ್ಕಾಗುತ್ತಾ. ಅದಕ್ಕೆ ಈ ಪರಿಪಾಠ ಬೆಳೆದು ಬಂದಿದೆ.

ಮೊದಲು ಯಾವ ಯಾವ ಪತ್ರಿಕೆಯವರು ಬಂದಿದ್ದಾರೆ ಅಂತ ತಿಳಿದುಕೊಂಡು ಪ್ರಸಿದ್ಧ ಪತ್ರಿಕೆಗಳ ವರದಿಗಾರರು ಬಂದಿದ್ದಾರೆ ಅಂತ ಗೊತ್ತಾದ ಮೇಲೆ ಗೋಷ್ಠಿಯ, ಚಳವಳಿಯ ವಿವರ ನೀಡುತ್ತಿದ್ದರು. ಅದು ಆಕಾಲ. ಈ ಕಾಲ ಹೇಗಿದೆ ಎಂದರೆ ಟಿವಿಯವರು ಬಂದಿದ್ದಾರೆ ಅಂತ ಖಾತರಿ ಪಡಿಸಿಕೊಳ್ತಾರೆ. ಅವರ

ಮೇಲೆ ನಿಲ್ಲಿಸಿದ. ಫೋಟೋ ತೆಗೆದು ಪತ್ರಿಕೆಯಲ್ಲಿ ಪ್ರಕಟಿಸಿಯೂ ಬಿಟ್ಟ.

'ಎಷ್ಟಾನ ಖರ್ಚಾಗಲಿ' ಫೋಟೋದಲ್ಲಿ ಧಿಕಾವಾಗಿ ಕಾಣುತ್ತಿದ್ದ. ಆದರೆ ಮಾರನೆ ಬೆಳಿಗ್ಗೆ ಅವನು ಪತ್ರಿಕಾ ಕಚೇರಿಗೆ ಬಂದಾಗ ಮನುಷ್ಯ ಆಗಿರಲಿಲ್ಲ.

'ಏನ್ಸಾ ಇದು?' ಗುಟುರು ಹಾಕಿದ.

ಅವನ ಕೈಲಿದ್ದ ಪತ್ರಿಕೆಯನ್ನು ತನ್ನ ಕೈಗೆ ತೆಗೆದುಕೊಂಡ ಪತ್ರಕರ್ತ 'ಏನು ಫೈನ್ ಆಗಿ ಬದ್ದೀದಿಯೋ ಗೌಡ' ಅಂದ.

'ಫೋಟೋ ಏನೋ ಸರಿ ಸಾ. ಇಲ್ನೋಡಿ ಇಲ್ಲಿ, ಎಲ್ಲಾವನ ಹೆಸರೂ ಹಾಕಿದ್ದೀರಿ ನನ್ನೆಸ್ರೇ ಇಲ್ವಲ್ಲ'

ಫೋಟೋದಲ್ಲಿರುವವರೆಲ್ಲರ ಹೆಸರನ್ನೂ ಮುದ್ರಿಸಬೇಕಾದರೆ ಅರ್ಧ ಪುಟ ಅದಕ್ಕೇ ಬೇಕಾಗಿತ್ತು. ಆದರೆ ಈ ಗೌಡ ಉರೀತಾಬದ್ದವ್ನೆ. ತಲೆ ಉಪಯೋಗಿಸಿದ ಪತ್ರಕರ್ತ.

'ನಿಂದೂ ಅದಲ್ಲ ಗೌಡ್ರೆ.'

'ಎಲ್ಲದೆ ಸಾ?'

'ಇಲ್ಲೇ ಅದಲ್ಲ ಗೌಡ್ರೆ.'

'ಎಲ್ಲಿ ಸಾ?'

'.... ಹಾಗೂ ಇತರರು ಅಂತ ಇಲ್ಲಾ....'

'ಹಂಗಿದ್ರೇನಾಯ್ತು ಸಾ' ತಬ್ಬಿಬ್ಬಾದ 'ಎಷ್ಟಾನ ಖರ್ಚಾಗಲಿ'.

'ಅರೆ ಇತರರು ಅಂದರೆ ನೀನು ಸೇರ್ಕಂಡಂಗೇ!'

****

ಸೂಕ್ತ ಸಮಯಕ್ಕಾಗಿ ಭಾರತೀಯ ಜನತಾ ಪಕ್ಷದ ಮುತ್ಸದ್ದಿ ವಾಜಪೇಯಿ ಕಾಯುತ್ತಿದ್ದರು.

ಭಾರತೀಯ ಜನತಾ ಪಕ್ಷಕ್ಕೆ ಕಳಂಕ ಬಂದಿತ್ತು ಪಕ್ಷದ ಕಣ್ಮಣಿ ಪ್ರಮೋದ್ ಪುತ್ರ ರಾಹುಲ್ ಮಹಾಜನ್ ಮಾದಕ ವಸ್ತು ಸೇವಿಸಿದ್ದು ಬಹಿರಂಗ ಆಗಿತ್ತು! ಇಂತಹವೆಲ್ಲ ಭಾಜಪ ಅವರಲ್ಲಿ ಇರಲಿಲ್ಲ ಅಂತ ಅಲ್ಲ, ಬೇಕಾದಷ್ಟು ಇದ್ದರು. ಗುಟ್ಟಾಗಿ ನಡೆಯುತ್ತಿತ್ತು, ಮಾಧ್ಯಮದವರೂ ಇದನ್ನ ಗೋಪ್ಯವಾಗಿಡಲು ಶ್ರಮಿಸುತ್ತಿದ್ದರು. ಅಪೋಲೋ ಆಸ್ಪತ್ರೆ ವೈದ್ಯರ ಸಹಕಾರಾನೂ ಮರೆಯುವಂತಿಲ್ಲ, ಯಡವಟ್ಟು ಕೆಲಸಗಳಿಂದ ದೇಹಕ್ಕೆ ಹೆಚ್ಚು ಕಡಿಮೆ ಆದರೂ ಅದು ಹೊರಗಡೆ ಬರದಂತೆ ಮುಚ್ಚಿ ಹಾಕುವ ಛಾತಿ ಇತ್ತು, ಅದಕ್ಕೆ ಈ ಮಹಾರಾಯ ರಾಹುಲ್‌ನ ಅಲ್ಲಿಗೆ ಸೇರಿಸಿದ್ದು. ಪಾಪ ವೈದ್ಯರದ್ದೇನೂ ತಪ್ಪಿಲ್ಲ, ಮೊದ ಮೊದಲು ರಾಹುಲ್ ದೇಹದಲ್ಲಿ ಯಾವುದೇ ವಿಷದ ಅಂಶವಿಲ್ಲ, ಅವನು ಮಾದಕ ವಸ್ತು ಸೇವಿಸಿಯೇ ಇಲ್ಲ ಅಂತಾನೇ ಹೇಳಿಕೆ ನೀಡಿದರು. ಆದರೆ ಆಮೇಲೆ ಈ ವಿರೋಧ ಪಕ್ಷದವರ ಕೈವಾಡ ಇರಬೇಕು, ವಿಷ ವಸ್ತು ಇದೆ ಅಂದು ಬಿಟ್ಟರು!

ಈ ಕಳಂಕ ತೊಳೆದುಕೊಳ್ಳುವುದು ಹೇಗೆ?

ಸುಷ್ಮ ಸ್ವರಾಜ್ ಹೇಳಿದರು: 'ಇದು ಕೌಟುಂಬಿಕ ದುರಂತ.' ಇದಕ್ಕೂ ಪಕ್ಷಕ್ಕೂ ಯಾವುದೇ ಸಂಬಂಧ ಇಲ್ಲ.'

ಇದನ್ನೇ ಪಕ್ಷದ ಇತರ ನಾಯಕರು ಉಚ್ಚರಿಸಿದರು.

ಆದರೆ ಜನ? ಇದನ್ನ ನಂಬಲಿಲ್ಲ. ಭಾಜಪದ ಯುವ ಪಡೆ ರಾಹುಲ್ ತರಹದವರದ್ದು ಎಂಬ ಅನುಮಾನ ಅವರಿಗೆ.

ವೃದ್ಧ ವಾಜಪೇಯಿ ಕಣಕ್ಕಿಳಿದರು: 'ಯೌವ್ವನದಲ್ಲಿ ಇದೆಲ್ಲ ಸಹಜ'

ಎಂತಹ ಮೋಹಕ ಮಾತು!

ಯೌವ್ವನಿಗರಿಗೆ ಆನಂದ!

ಕಾನೂನಾತೀತ ಕೃತ್ಯಗಳಿಗೆ ಅಂಜುವಂತಿಲ್ಲ! ಶಿಕ್ಷೆಯ ಹೆದರಿಕೆ ಇಲ್ಲ!

ತಾತ ಅಂದರೆ ವಾಜಪೇಯಿ ತರಹದ ತಾತ ಇರಬೇಕು.

****

ವಿಶ್ವ ತಂಬಾಕು ನಿಷೇಧ ದಿನ.

'ಸಿಗರೇಟು ಸೇದೋದ ಬಿಡೊ' ಅಂದೆ.

'ಬಿಡ್ತೀನಿ' ಅಂದ ವಿನಯದಿಂದ.

'ಯಾವಾಗ' ಅಂದೆ.

'ಸೂಕ್ತ ಸಯಮ ಬರಲಿ' ಅಂದ!

****

ಮದ್ಯಪಾನ ನಿರೋಧ ದಿವಸ.

'ಕುಡಿಯೋದ ಬಿಡೊ' ಅಂದೆ.

'ಬಿಡ್ತೀನಿ' ಅಂದ. ಅದೇ ನಯ ವಿನಯ.

'ಯಾವಾಗ' ಅಂದೆ.

'ಸೂಕ್ತ ಸಮಯದಲ್ಲಿ ಅಂದ!


****

ಹೀಗೆ ನೋಡಿದರೆ ಎಲ್ಲಾರೂ ದುಷ್ಟ ಚಟಗಳನ್ನೆಲ್ಲ ಬಿಡಬಹುದು. ಸೂಕ್ತ ಸಮಯದಲ್ಲಿ!

-ಎಚ್.ಎಲ್. ಕೇಶವಮೂರ್ತಿ

'ಲಂಕೇಶ್' ಪ್ರಯತ್ನ ಸಮಯೋಚಿತವಾಗಿದೆ

ಮೀಸಲಾತಿಯ ನೆಪದಲ್ಲಿ ಜಾತಿ ಜಾತಿಗಳ ನಡುವೆ ನಡೆಯುತ್ತಿರುವ ಮೇಲಾಟ, ಹಂಗಿಸುವಿಕೆ, ಹತ್ತಿಕ್ಕುವಿಕೆಯ ಈ ಹೊತ್ತಿನಲ್ಲಿ ಅದ್ಯಾವುದರ ಪರಿವೆಯಿಲ್ಲದಂತೆ ನಿರ್ಲಿಪ್ತರಾಗಿರುವ ಕೆನೆಪದರ ಬಲಿತ ದಲಿತರನ್ನೂ ಒಳಗೊಂಡು ಒಟ್ಟಾರೆ ಸಮುದಾಯಕ್ಕೆ ಮೀಸಲಾತಿಯ ತುರ್ತನ್ನು ಮನವರಿಕೆ ಮಾಡಿಕೊಡಲು ಸಮ್ಮೆಲ್ಲರ ಸಾಕ್ಷಿಪ್ರಜ್ಞೆಯಂತಿರುವ 'ಲಂಕೇಶ್' ನಡೆಸುತ್ತಿರುವ ಪ್ರಯತ್ನ ಸಮಯೋಚಿತವಾಗಿದೆ.



'ಲಂಕೇಶ್' ಪ್ರತಿಪಾದಿಸಿರುವ ಶೇ. ನೂರು ಮೀಸಲಾತಿ, 80:20 ಅನುಪಾತದಲ್ಲಿನ ಶೇ.20 ಕೃಪಾಂಕದ ಮಾದರಿಗಿಂತ ಸಮರ್ಪಕವಾದದ್ದು, ಸಾವಿರಾರು ವರ್ಷಗಳಿಂದ ಶ್ರೇಣೀಕೃತ ಜಾತಿ ವ್ಯವಸ್ಥೆಯ ಗಟಾರದಲ್ಲೇ ಬಿದ್ದು ಒದ್ದಾಡಿರುವ ನಮ್ಮ ಸಮಾಜದಲ್ಲಿ ಇದು ಕೊಂಚ ಸಮಾನಹಕ್ಕು, ಸಮಾಧಾನ ತರಬಹುದು.

ಪ್ರಸ್ತುತ ಯುಪಿಎ ಸರ್ಕಾರ ತನ್ನ ಅವಕಾಶವಾದಿತನದ ಮಧ್ಯೆಯೂ ಜಾತ್ಯತೀತತೆ ಉಳಿಸಿಕೊಂಡಿದ್ದೇ ಆದರೆ ಸಂಪತ್ತು ಸೃಷ್ಟಿಯಾಗುವ ಎಲ್ಲ ವಲಯಗಳಲ್ಲಿ ಶೇಕಡಾ ನೂರು ಮೀಸಲಾತಿಯನ್ನು ಜಾರಿಗೆ ತರುವ ದೃಢ ಸಂಕಲ್ಪ ಕೈಗೊಳ್ಳಬೇಕು. ಇದಕ್ಕೆ ಪೂರ್ವಭಾವಿಯಾಗಿ ಜನರಲ್ಲಿ ವ್ಯಾಪಕ ಜನಜಾಗೃತಿ ಮೂಡಿಸಿ, ಮೀಸಲಾತಿಯನ್ನು ವಿವಾದದ ಕೇಂದ್ರಬಿಂದುವಾಗದಂತೆ ನೋಡಿಕೊಳ್ಳಬೇಕು.

ಸದಾನಂದ ಸಿ. ಗಂಗನಬೀಡು
ಬೆಂಗಳೂರು

'ಟಿ.ಎನ್. ಸೀತಾರಾಮ್ ಎಂಬ ಸರ್ಪ' ಓದಿ ನನಗೇನೂ ಆಶ್ಚರ್ಯವಾಗಲಿಲ್ಲ. ಲಂಕೇಶರಿಗೆ 20 ವರ್ಷದ ಒಡನಾಡಿಯಾಗಿ, ಅವರ ಸಿನಿಮಾದಲ್ಲಿ ಹೀರೋ ಆಗಿ ಮೇಲೆ ಬಂದ ಈ ವ್ಯಕ್ತಿ ನಿಜ ಜೀವನದಲ್ಲಿ ಒಂದು ಕೇಸನ್ನೂ ಗೆಲ್ಲಲಾಗದಿದ್ದರೂ, ಟಿ.ವಿ. ಧಾರಾವಾಹಿಯಲ್ಲಿ ಗೆಲ್ಲುತ್ತಿರುವುದು ತಮಾಷೆಯಾಗಿದೆ. ಇನ್ನೂ ಒಂದು ವಿಶೇಷವೇನೆಂದರೆ, ಟಿ.ಎನ್. ಸೀತಾರಾಮ್‌ರಲ್ಲಿ ಇಂತಹ ನಾಜೂಕಯ್ಯನೊಬ್ಬ ಇರುವುದನ್ನು ಎಂದೋ ಪತ್ತೆ ಹಚ್ಚಿದ್ದ ಲಂಕೇಶರು ಕಠೋರವಾಗಿ ಅವರನ್ನು ದೂರವಿಟ್ಟಿದ್ದರು. ಸೀತಾರಾಮ್ ಬಗ್ಗೆ ಲಂಕೇಶರಿಗೆ ಎಷ್ಟು ಸಿಟ್ಟು ಬಂದಿತ್ತೆಂದರೆ ಅವರ [illegible] ಮರ'ದಲ್ಲಿ, ಈ ಸೀತಾರಾಮ್ ಪ್ರಸ್ತಾಪವೇ ಇಲ್ಲ!




ಈಗ ಸೀತಾರಾಮ್ 'ಮುಕ್ತ' ಧಾರಾವಾಹಿಯಲ್ಲಿ ಸುನಿಲ್ ಕುಮಾರ್ ಎಂಬ ಚೆಡ್ಡಿ ಶಾಸಕನನ್ನು ಹಾಕಿಕೊಂಡು, ಅವನ ಪಾತ್ರಕ್ಕೆ ಪ್ರಕಾಶ್ ಎಂಬ ಹೆಸರಿಟ್ಟು ಅವನನ್ನು ಸುಸಂಸ್ಕೃತನಾಗಿ ತೋರಿಸುತ್ತಿದ್ದಾರೆ. ಆದರೆ ಅದೇ ಹೊತ್ತು ಮುನಿಯಪ್ಪ ಎಂಬ ಹೆಸರಿನ ಇನ್ನೊಂದು ಪಾತ್ರಧಾರಿಯ ಬಾಯಲ್ಲಿ ದಗಲುಬಾಜಿ ರೌಡಿತನದ ಮಾತನಾಡಿಸುತ್ತಿದ್ದಾರೆ. 'ಪ್ರಕಾಶ್', ಮತ್ತು 'ಮುನಿಯಪ್ಪ' ಸೀತಾರಾಮರ ಮನಸ್ಸಿನಲ್ಲಿರುವ ಜನಿವಾರ ಬುದ್ಧಿಯ ಪ್ರತೀಕಗಳು ಎಂಬುದು ಸ್ಪಷ್ಟವಾಗಿದೆ. ಸೀತಾರಾಮ್ ಯಾವುದೇ ಸಂಕೋಚವಿಲ್ಲದೆ ಹೀಗೆ ಜಾತಿಬೇಧ ವ್ಯಕ್ತಪಡಿಸುತ್ತಿರುವುದು ಮತ್ತು ಆ ಮೂಲಕ ಸಮಾಜದಲ್ಲಿ ಕೆಳವರ್ಗದವರನ್ನು ಕೀಳಾಗಿ ತೋರಿಸುತ್ತಿರುವುದು ಲಂಕೇಶರಿಗೆ ಬಗೆದ ದ್ರೋಹ.

ಆದರೆ ವಿಪರ್ಯಾಸ ಏನೆಂದರೆ ಇಂತಹ ಸೂಕ್ಷ್ಮತೆಗಳಿಂದ ಸೀತಾರಾಮ್ ದೂರಹೋಗಿ ಬಹಳ ಕಾಲವಾಗಿದೆ.

ಸಿ.ಟಿ. ರಘುಪತಿ,
ಚಿಕ್ಕನಾಯಕನಹಳ್ಳಿ

ನಿರೂಪಣೆ: ಸದಾಶಿವ ಶೆಣೈ 7



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಈ ಹಿಂದೆ ಹೇಳಿದಂತೆ ನಾನು ವಿದ್ಯಾಭ್ಯಾಸಕ್ಕಿಂತ ಕ್ರೀಡೆಯಲ್ಲಿ ಮುಂದಿದ್ದೆ. ಕ್ರಿಕೆಟ್ ಮತ್ತು ವಾಲಿಬಾಲ್ ಎಂದರೆ ನನಗೆ ಪಂಚಪ್ರಾಣ. ಓದಬೇಕಾದ ಸಮಯದಲ್ಲಿ ಚೆನ್ನಾಗಿ ಓದುತ್ತಿದ್ದ ನಾನು ತುಂಬಾ brilliant student ಆಗಿರದಿದ್ದರೂ average student ಆಗಿದ್ದೆ. ಸಾಧಾರಣವಾಗಿ ಪರೀಕ್ಷೆಗಳಲ್ಲಿ ಶೇ. 50 ಅಂಕಗಳನ್ನು ಗಳಿಸುತ್ತಿದ್ದೆ. ಇದೆಲ್ಲವನ್ನು ನನ್ನ ಅಪ್ಪಾಜಿ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಹಾಗೆಯೇ 'ಶ್ರೀನಿವಾಸ ಕಲ್ಯಾಣ' ದಲ್ಲಿ ನಾನು ಬಾಲನಟನಾಗಿ ನಟಿಸುತ್ತಿದ್ದಾಗಲೂ ಅದರಲ್ಲಿ ನನ್ನ ನಿರಾಸಕ್ತಿಯನ್ನು ಕೂಡಾ ಅವರು ಗಮನಿಸಿದ್ದರು. ಇದೆಲ್ಲವನ್ನು ಕಂಡೇ ಅವರು ಮುಂದೊಂದು ದಿನ ನಾನು ದೊಡ್ಡ ಕ್ರೀಡಾಪಟುವಾಗುತ್ತೇನೆ ಎಂದು ಬಂಧುಗಳಲ್ಲಿ ಹೇಳುತ್ತಿದ್ದರು.

ವೇಲಾಂಕಣಿಯಲ್ಲಿ ನಾನು ಐದನೇ ತರಗತಿ ಮುಗಿಸಿ ಆರನೇ ತರಗತಿಗೆ ಸೇರಿದಾಗ ನನ್ನ ತಮ್ಮ ರಾಘು ಅದೇ ಸ್ಕೂಲಿಗೆ ಬಂದ. ಆತನೊಂದಿಗೆ ನನ್ನ ಕಸಿನ್ಸ್‌ಗಳಾದ ನಟ (ನಟರಾಜ) ಮತ್ತು ಬಾಲರಾಜ್ ಕೂಡ ಅದೇ ಶಾಲೆಗೆ ಸೇರಿದರು. ಸ್ಪೋರ್ಟ್ಸ್‌ನಲ್ಲಿ ನನ್ನಷ್ಟು ಆಸಕ್ತಿ ಇರದಿದ್ದ ರಾಘು ವಿದ್ಯಾಭ್ಯಾಸದಲ್ಲಿ ಸಿಕ್ಕಾಪಟ್ಟೆ ಮುಂದಿದ್ದ. ನಟ ಕೂಡ ಸ್ಟಡೀಸ್‌ನಲ್ಲಿ ಸಾಕಷ್ಟು ಮುಂದಿದ್ದ. ಆದರೆ ಬಾಲು ಮಾತ್ರ ನನಗಿಂತಲೂ ತುಂಟನಾಗಿದ್ದ. He was very rough and tuff. ಆತ ಎಷ್ಟೋ ಬಾರಿ ಹಾಸ್ಟೆಲ್‌ನಿಂದ ಓಡಿಹೋಗಿದ್ದು ನನಗಿನ್ನೂ ಚೆನ್ನಾಗಿ ನೆನಪಿದೆ. ನಾನು ಅವರೆಲ್ಲರಿಗಿಂತ ಒಂದು ಕ್ಲಾಸು ಮುಂದಿದ್ದೆ. ಆಗ ಶಾಲೆಯ ಕ್ಯಾಂಪಸ್‌ನಲ್ಲಿ ನಾನು ಅಲ್ಲಿ-ಇಲ್ಲಿ ಓಡಾಡುತ್ತಿದ್ದಾಗ ಬಾಲುವಿನ ಫ್ರೆಂಡ್ಸ್ ನನ್ನ ಬಳಿ ಬಂದು ಆತ ಹಾಸ್ಟೆಲ್‌ನಿಂದ ಓಡಿಹೋದ ವಿಷಯವನ್ನು ನನಗೆ ತಿಳಿಸುತ್ತಿದ್ದರು. ಅದನ್ನು ಕೇಳಿ ನಾನು "ಹೌದಾ?" ಎಂದು ಮೊದಮೊದಲು ಆಶ್ಚರ್ಯ ಪಡುತ್ತಿದ್ದೆ.

ಆದರೆ ಎಂದೂ ಬಾಲು ಹಾಸ್ಟೆಲ್‌ನಿಂದ ಓಡಿಹೋದ ವಿಷಯವನ್ನು ನಾನು ಮನೆಯವರಿಗೆ ಹೇಳುತ್ತಿರಲಿಲ್ಲ. ನಾನು ಮಾತ್ರವಲ್ಲ ರಾಘು ಮತ್ತು ನನ್ನ ಉಳಿದ ಕಸಿನ್ಸ್ ಕೂಡ ಬಾಲು ವಿರುದ್ಧ ಮನೆಯವರಿಗೆ ದೂರುತ್ತಿರಲಿಲ್ಲ. ಯಾವುದೇ ಕಾರಣಕ್ಕೆ ನಾವು ನಮ್ಮ ಕಸಿನ್ಸ್‌ಗಳನ್ನು ಬಿಟ್ಟುಕೊಡಬಾರದು ಎಂಬುದೇ ನಮ್ಮ ನಿಲುವಾಗಿತ್ತು. ಹೀಗಾಗಿ ಬಾಲುನನ್ನು ರಕ್ಷಿಸಲು ಮತ್ತು ಅವನಿಗೆ ತೊಂದರೆ ಆಗಬಾರದೆಂದು ನಾವು ಮನೆಯಲ್ಲಿ ಅನೇಕ ಬಾರಿ ಸುಳ್ಳು ಹೇಳಿದ್ದೂ ಉಂಟು. "ಇಲ್ಲ ಈ ಹಾಸ್ಟೆಲ್ ಸರಿಯಿಲ್ಲ, ಅಲ್ಲಿ ಸರಿಯಾಗಿ ಊಟ ಹಾಕುವುದಿಲ್ಲ" ಎಂದು ಏನೇನೋ ಸುಳ್ಳಿನ ಕಂತೆಯನ್ನು ನಾವು ಹೇಳುತ್ತಿದ್ದೆವು. ಆ ದಿನಗಳಿಂದಲೇ ಯಾರ ಬಗ್ಗೆಯೂ ದೂರಬಾರದು, ಯಾರನ್ನೂ ಹಿಯಾಳಿಸಿ ಮಾತನಾಡಬಾರದು ಎಂಬುದನ್ನು ನಾವು ಕಲಿತ್ತಿದ್ದೆವು.

ಇದೆಲ್ಲ ನಮಗೆ ಸಾಧ್ಯವಾದದ್ದು ನಮ್ಮ ಮನೆಯ ವಾತಾವರಣ ಮತ್ತು ಹಿರಿಯರ ವರ್ತನೆಯಿಂದ. ಅವರನ್ನು ನೋಡಿ ನಾವು ಕೂಡ ಅವರ ಹಾದಿಯಲ್ಲೇ ಬೆಳೆಯುತ್ತಿದ್ದೆವು. ಏಕೆಂದರೆ ಇಂತಹ ವಿಷಯಗಳನ್ನು ಯಾವ ಶಾಲೆಯಲ್ಲಿ ಅಥವಾ ಪುಸ್ತಕಗಳಲ್ಲಿ ಹೇಳಿಕೊಡಲಾಗುವುದಿಲ್ಲ, ಮನೆಯೇ ಮೊದಲ ಪಾಠಶಾಲೆ ಅಂತಾರಲ್ಲ, ಹಾಗೆ ನಮಗೆಲ್ಲ ನಮ್ಮ ತಂದೆ-ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ ಆಗಿತ್ತು.

ಈಗ ಶಾಲೆಗೆ ಮಕ್ಕಳನ್ನು ಸೇರಿಸುವಾಗ ತಂದೆ-ತಾಯಿಯರು ವಿದ್ಯಾವಂತರಾಗಿರಬೇಕೆಂದು ಹೇಳುತ್ತಾರೆ. ಆದರೆ ನಾನು ಇದನ್ನು ಒಪ್ಪುವುದಿಲ್ಲ. ಏಕೆಂದರೆ ಎಬಿಸಿಡಿ ಗೊತ್ತಿರುವುದೇ ವಿದ್ಯೆ ಅಲ್ಲ, ಅಕ್ಷರ ಜ್ಞಾನವನ್ನು ಯಾರು ಬೇಕಾದರೂ ಪಡೆಯಬಹುದು. ಆದರೆ ಅದಕ್ಕಿಂತಲೂ ಮುಖ್ಯವಾದದ್ದು ಇತರರೊಂದಿಗೆ ನಾವು ಹೇಗೆ ನಡೆದುಕೊಳ್ಳುತ್ತೇವೆ ಎಂಬುದು. ನನ್ನ ಪ್ರಕಾರ ನಿಜವಾದ ಎಜುಕೇಷನ್ ಅಂದರೆ ಇದು, ಎಬಿಸಿಡಿ ಎಂಬ ಅಕ್ಷರ ಜ್ಞಾನವಲ್ಲ.

ಬರೀ ಎಬಿಸಿಡಿ ಕಲಿಕೆ ಯಾರಿಗೆ ಬೇಕು? ಎಬಿಸಿಡಿ ಕಲಿತರೂ ಹಿರಿಯರಿಗೆ ಗೌರವ ಸಲ್ಲಿಸುವುದು, ಸಮಾಜದಲ್ಲಿ ಸಜ್ಜನನಾಗಿ ಬಾಳುವುದು ಗೊತ್ತಿಲ್ಲದಿದ್ದರೆ ಏನು ಪ್ರಯೋಜನ? ಅಂತಹ ಕಲಿಕೆಯಿಂದ ನಾವೇನು ಸಾಧಿಸಿದಂತಾಗುತ್ತದೆ? ಆದ್ದರಿಂದ ಹೆತ್ತವರು ವಿದ್ಯಾವಂತರಾಗಿರಬೇಕು, ಅಂತಹವರ ಮಕ್ಕಳಿಗೆ ಮಾತ್ರ ತಮ್ಮ ಶಾಲೆಯಲ್ಲಿ ಸೀಟು ಕೊಡುತ್ತೇವೆ ಎನ್ನುವವರನ್ನು ನಾನು ವಿರೋಧಿಸುತ್ತೇನೆ. ಇದೆಲ್ಲ ಶಾಲೆಯವರು ತಮ್ಮ ಸ್ವಾರ್ಥಕ್ಕಾಗಿ, ಅನುಕೂಲಕ್ಕಾಗಿ ಮಾಡಿಕೊಂಡ ಕಾನೂನುಗಳಷ್ಟೇ.

ಕೆಲವು ಪೋಷಕರು ಓದದೇ ಇದ್ದರೂ ಅವರ ಮಕ್ಕಳು ವಿಶೇಷವಾದ ಜ್ಞಾನ ಹೊಂದಿರಬಹುದು. ಯಾರಲ್ಲಿ ಯಾವ ರೀತಿಯ ಪ್ರತಿಭೆ ಇದೆ ಎಂದು ಯಾರಿಗೆ ಗೊತ್ತು? ವಿದ್ಯಾವಂತರ ಮಕ್ಕಳು ಮಾತ್ರ ವಿದ್ಯಾವಂತರಾಗುತ್ತಾರೆಯೇ? ಹಾಗೆಯೇ ಅವಿದ್ಯಾವಂತರ ಮಕ್ಕಳು ದಡ್ಡರಾಗಿರುತ್ತಾರೆಯೇ? ಹಾಗೇನು ಇಲ್ಲವಲ್ಲ? ಎಷ್ಟೋ ಜನ ವಿದ್ಯಾವಂತರ ಮಕ್ಕಳು ಡುಂಕಿ ಹೊಡೆದಿದ್ದನ್ನು ನಾನು ನೋಡಿದ್ದೇನೆ. ಹಾಗೆಯೇ ಅವಿದ್ಯಾವಂತರ ಮಕ್ಕಳು ರ್‍ಯಾಂಕ್ ಗಳಿಸಿರುವುದನ್ನು ಕೂಡ ನಾನು ಕಂಡಿದ್ದೇನೆ.

ನಮ್ಮ ಅಪ್ಪಾಜಿಯವರನ್ನೇ ನೋಡಿ. ಅವರು ಹೆಚ್ಚೇನೂ ಓದದಿದ್ದರೂ ಅವರ ಪ್ರತಿಭೆಯನ್ನು ನೋಡಿ ಮೈಸೂರು ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ನೀಡಿತು. ನಟಸಾರ್ವಭೌಮ ಎಂದು ಜನ ಅವರನ್ನು ಕೊಂಡಾಡಿದರು. ನನ್ನ ಅಪ್ಪಾಜಿಗೆ ಇಷ್ಟೆಲ್ಲ ಗೌರವ, ಪ್ರಶಸ್ತಿ, ಬಿರುದುಗಳು ಬಂದಿದ್ದು ಅಕ್ಷರ ಕಲಿಕೆಯಿಂದಲ್ಲ.




ನಾನು ಚಿಕ್ಕಂದಿನಿಂದಲೇ ಹಲವಾರು ವಿಷಯಗಳನ್ನು ಅಪ್ಪಾಜಿಯಿಂದಲೇ ಕಲಿತುಕೊಂಡಿದ್ದೆ. ಅಪ್ಪಾಜಿಯನ್ನು ನೋಡಲು ಮದರಾಸಿನಲ್ಲಿರುವ ನಮ್ಮ ಮನೆಗೆ ಕರ್ನಾಟಕದಿಂದ ಜನ ಬಸ್ಸು ಮಾಡಿಕೊಂಡು ಬರುತ್ತಿದ್ದರು. ಕೆಲಸದ ಒತ್ತಡ ಎಷ್ಟೇ ಇದ್ದರೂ ಅದನ್ನೆಲ್ಲಾ ಬದಿಗೊತ್ತಿ ಅವರನ್ನೆಲ್ಲ ಅಪ್ಪಾಜಿ ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಅವರೊಂದಿಗೆ ಫೋಟೋಗಳಿಗೆ ಪೋಸು ನೀಡುತ್ತಿದ್ದರು. ಇದು ವಾರದಲ್ಲಿ ಆಲ್‌ಮೋಸ್ಟ್ ಮೂರು ನಾಲ್ಕು ದಿನ ನಡೆಯುತ್ತಲೇ ಇರುತ್ತಿತ್ತು. ಆದರೆ ಎಂದೂ ಅಪ್ಪಾಜಿ ತಾಳ್ಮೆ ಕಳೆದುಕೊಳ್ಳುತ್ತಿರಲಿಲ್ಲ.

ಹೀಗೆ ಬಸ್ಸುಗಳಲ್ಲಿ ಜನ ಅಪ್ಪಾಜಿಯನ್ನು ನೋಡಲು ಬರುತ್ತಿದ್ದಾಗ ನಾವೆಲ್ಲಾ ತುಂಬಾ ಚಿಕ್ಕವರಾಗಿದ್ದೆವು. ನಾವು ದೂರದಲ್ಲೇ ನಿಂತು ಈ ದೃಶ್ಯಗಳನ್ನು ನೋಡುತ್ತಿದ್ದೆವು. ನಾವು ದೂರ ನಿಂತಿರುತ್ತಿದ್ದದ್ದನ್ನು ಹಲವೊಮ್ಮೆ ಜನ ಗಮನಿಸಿ ನಮ್ಮ ಹತ್ತಿರ ಬಂದು ನನ್ನ ಕೈಯನ್ನು ಹಿಡಿದುಕೊಳ್ಳುತ್ತಿದ್ದರು. ಈತ ಡಾ. ರಾಜ್‌ಕುಮಾರ್ ಮಗ ಎಂದು ನನ್ನನ್ನು ಹೆಮ್ಮೆಯಿಂದ ಮಾತನಾಡಿಸುತ್ತಿದ್ದರು. ಆದರೆ ನಾನು ನಾಚಿಕೆಯಿಂದ ಅಲ್ಲಿಂದ ಕೂಡಲೇ ಓಡಿ ಹೋಗುತ್ತಿದ್ದೆ. ಜನರ ಪ್ರೀತಿ ಮತ್ತು ಅಭಿಮಾನ ನೋಡಿ ನಾವು ಎಷ್ಟು ಪುಣ್ಯವಂತರು ಎಂದು ಆಗ ನನಗನ್ನಿಸುತ್ತಿತ್ತು. ನಿಜಕ್ಕೂ ಮತ್ತೊಮ್ಮೆ ಹೇಳುತ್ತೇನೆ, ಡಾ. ರಾಜ್‌ಕುಮಾರ್ ಅವರ ಮಗನಾಗಿ ಹುಟ್ಟಿದ್ದು ನನ್ನ ಏಳೇಳು ಜನ್ಮದ ಪುಣ್ಯ.

ಅಪ್ಪಾಜಿಯವರು Caste, Creed, Colour ಇದೆಲ್ಲವನ್ನು ಮೀರಿ ಬೆಳೆದ ಕಾರಣದಿಂದಲೇ ಇಷ್ಟೊಂದು ಅಭಿಮಾನಿಗಳು ಅವರನ್ನು ಆರಾಧಿಸುತ್ತಾರೆ ಎಂಬುದು ನಮಗೆ ಬಾಲ್ಯದಲ್ಲೇ ಅರಿವಾಗಲು ಶುರುವಾಗಿತ್ತು. ಇಲ್ಲದಿದ್ದರೆ ಎಲ್ಲ ಜಾತಿಯ ಮತ್ತು ವರ್ಗದ ಜನ ಕರ್ನಾಟಕದಿಂದ ಬಸ್ಸು ಮಾಡಿಕೊಂಡು ಅಪ್ಪಾಜಿಯನ್ನು ನೋಡಲು ಬರುವ ಅಗತ್ಯವಾದರೂ ಏನಿತ್ತು ಅಲ್ಲವೆ?

ಹೀಗಾಗಿ ಅಪ್ಪಾಜಿಯೇ ನಮ್ಮೆಲ್ಲರ ಮೇಲೆ ಪ್ರಭಾವ ಬೀರಿದ್ದರು. ಅವರು ಯಾವತ್ತೂ ಎಂದೂ ಅದು ಮಾಡಬೇಡ, ಇದು ಮಾಡಬೇಡ ಎಂದು ಬೋಧನೆ ಮಾಡಿದವರಲ್ಲ. ಆದರೆ ಅವರ ವ್ಯಕ್ತಿತ್ವ ಮತ್ತು ಮಾತುಗಳಿಂದ ಪರೋಕ್ಷವಾಗಿ ನಮ್ಮ ಮೇಲೆ ಪ್ರಭಾವ ಬೀರಿದ್ದರು. ಇದನ್ನೇ ನಾನು ವಿದ್ಯಾಭ್ಯಾಸಕ್ಕೆ ಮತ್ತು ಜೀವನಾನುಭವಕ್ಕೆ ಇರುವ ವ್ಯತ್ಯಾಸ ಎಂದು ಕರೆಯುತ್ತೇನೆ. ನಾನು ಸ್ಕೂಲು-ಕಾಲೇಜುಗಳಲ್ಲಿ ಕಲಿತದ್ದಕ್ಕಿಂತ ಹೆಚ್ಚು ವಿಷಯಗಳನ್ನು ನನ್ನ ಅಪ್ಪಾಜಿಯ ಸನಿಹದಲ್ಲಿ ಮತ್ತು ಪ್ರೀತಿಯಲ್ಲಿ ಕಲಿತಿದ್ದೇನೆ.

ಅಕ್ಷರ ಜ್ಞಾನವೇ ವಿದ್ಯೆ ಅಲ್ಲ...




ಎಬಿಸಿಡಿ ಗೊತ್ತಿರುವುದೇ ವಿದ್ಯೆ ಅಲ್ಲ. ಅಕ್ಷರ ಜ್ಞಾನವನ್ನು ಯಾರು ಬೇಕಾದರೂ ಪಡೆಯಬಹುದು. ಆದರೆ ಅದಕ್ಕಿಂತಲೂ ಮುಖ್ಯವಾದದ್ದು ಇತರರೊಂದಿಗೆ ನಾವು ಹೇಗೆ ನಡೆದುಕೊಳ್ಳುತ್ತೇವೆ ಎಂಬುದು. ನನ್ನ ಪ್ರಕಾರ ನಿಜವಾದ ಎಜುಕೇಷನ್ ಅಂದರೆ ಇದು; ಎಬಿಸಿಡಿ ಎಂಬ ಅಕ್ಷರ ಜ್ಞಾನವಲ್ಲ.

ನಾವು ಮದರಾಸಿನಲ್ಲಿದ್ದಾಗ ಅಲ್ಲಿಯ ಸ್ಥಳೀಯ ಜನ ಕೂಡ ನಮ್ಮ ಅಪ್ಪಾಜಿಗೆ ವಿಶೇಷವಾದ ಗೌರವವನ್ನು ಸಲ್ಲಿಸುತ್ತಿದ್ದರು. ಸಹಜವಾಗಿಯೇ ನಮಗೂ ಕೂಡ. ಡಾ. ರಾಜ್‌ಕುಮಾರ್ ಅವರ ಮಗ ಎಂಬ ಏಕೈಕ ಕಾರಣದಿಂದ ಅಲ್ಲಿಯ ಜನ ನನ್ನ ಮೇಲೆ ವಿಶೇಷವಾದ ಪ್ರೀತಿ, ಗೌರವ ಮತ್ತು ಅಭಿಮಾನವನ್ನು ಹೊಂದಿದ್ದರು.

ನಾನು ಆರಂಭದಲ್ಲೇ ಹೇಳಿದಂತೆ ವಿದ್ಯಾಭ್ಯಾಸಕ್ಕಿಂತ ಕ್ರೀಡೆಯಲ್ಲಿ ಮುಂದಿದ್ದೆ. ಹೀಗಾಗಿ ನಾನು ಒಂದು ಕ್ರಿಕೆಟ್ ತಂಡವನ್ನು ಕೂಡ ಕಟ್ಟಿದ್ದೆ. ಅದಕ್ಕೆ 'ಯಾರ್ಕ್ ಷೈರ್ ಕ್ರಿಕೆಟ್ ಕ್ಲಬ್' ಎಂಬ ಹೆಸರನ್ನಿಟ್ಟಿದ್ದೆ. ಈ ಕ್ರಿಕೆಟ್ ತಂಡಕ್ಕೆ ನಾನೇ ಕ್ಯಾಪ್ಟನ್. ಈ ಕ್ರಿಕೆಟ್ ತಂಡದ ಬಗ್ಗೆ ನನಗೆ ಹೇಳಲು ಬೇಕಾದಷ್ಟಿದೆ. ಅದೆಲ್ಲ ಮುಂದಿನ ವಾರ......

(ಮುಂದಿನ ವಾರಕ್ಕೆ....)

ಶಾಟ್ ಕಟ್



'ಸ್ತ್ರೀವಸ್ತ'ನ 'ಮರ್ಡರ್'!

ತುಹಿ ಮೇರಾ ಪ್ಯಾಸ್, ತುಹಿ ಮೇರಾ ಜಾನ್
ಕಭ ಮೇರೆ ಸಾಥ್, ಕೋಯಿರಾತ್ ಗುಜಾಲ್
ತುಜೆ ಸುಬಹ್ ತಕ್ ಮೈ ಕರೂ ಪ್ಯಾರ್
ಪ್ಪೊ ಪ್ಪೊ ಪ್ಪೊ... ಹೊ ಹೊ ಹೊ....

ಹೆಣ್ಣಿನ ಸೌಂದರ್ಯ ವರ್ಣಿಸುವ, ಮುಂಬಾಯಿಸಿಟಿಗೂ ಅಕೆಯನ್ನು ಪ್ರೀತಿಸುವುದಾಗಿ ಸಾರುವ ಈ ಹಿಂದಿನ 'ಮರ್ಡರ್' ಹಾಡು ಅನುಮಲ್ಲಿಕ್ ಸಂಗೀತದಲ್ಲಿ ಕುನಾಲ್ ಗಾಂಜಾವಾಲಾ ಧ್ವನಿಯಲ್ಲಿ ಕೇಳಿಬರುತ್ತಿದ್ದರೆ ಕರ್ಣಾನಂದ! ಹಾಗೆಯೇ ಈ ಹಾಡಿನ ದೃಶ್ಯಗಳು ಯುವ ಜನತೆಗೆ ನಯನಾನಂದ... ಮನದಾನಂದ...

ಸ್ವಲ್ಪ ಆಯ ತಪ್ಪಿದ್ದರೂ ತೀರಾ vulgar ಆಗಿಬಿಡಬಹುದಿತ್ತು. ಮಹೇಶ್ ಭಟ್‌ನ ಹುಡುಗರು ಪೂರ್ತಿ ಹಾದಿ ತಪ್ಪಲಿಲ್ಲ.

ಕನ್ನಡದಲ್ಲಿ 'ಮರ್ಡರ್'ನ ಕೊಲೆ ನಡೆದಿದೆ. ಈ ಮೇಲಿನ ಹಾಡನ್ನು ಅದ್ಭುತವಾಗಿ ರವೀ 'ಸ್ತ್ರೀವಸ್ತ' ಚಿತ್ರಿಸಿದ್ದಾನೆಂದು ಸ್ಶೈಲೇಂದ್ರ ಬಾಬು ರೀಲು ಬಿಟ್ಟಿದ್ದಾನೆ. ಚಿತ್ರ ನೋಡಿದ ಪತ್ರಕರ್ತರು ಕೈಗೆ ಕಲ್ಲು ತೆಗೆದುಕೊಳ್ಳುವುದಷ್ಟೇ ಬಾಕಿಯಿತ್ತು. ಬೆಂಗಳೂರಿನ ಗೋಡೆಗಳನ್ನೆಲ್ಲ ಆವರಿಸಿರುವ 'ಗಂಡ-ಹೆಂಡತಿ' ಚಿತ್ರದ ಪೋಸ್ಟರ್‌ಗಳನ್ನು ನೋಡಿದವರು ಥೂ, ಛೀ ಎನ್ನುತ್ತಿದ್ದಾರೆ.

ಪುಟ್ಟಾಪೂರಾ ಭಟ್ಟಂಗಿ ಆಗಿರುವ ಶ್ರೀವತ್ಸ ಹೀರೋ, ಹೀರೋಯಿನ್‌ಗಳನ್ನು ಬೆತ್ತಲೆ ಮಾಡಿ ಅವರ ಪಕ್ಕದಲ್ಲಿ ತನ್ನದೇ ಟೇಸ್ಟ್‌ನ ತನ್ನ ಗುರುವಿನ ಸ್ಟಿಲ್ ಹಾಕಿದ್ದಾನೆ. ಪೋಷಕ ಪಾತ್ರಕ್ಕೆ ಮೊದಲ ಬಾರಿ ಕವರೇಜ್ ಸಿಗುತ್ತಿದೆ. ನಟಿಸಬೇಕು, ನಿರ್ದೇಶಿಸಬೇಕು ಎಂಬ ತೆವಲು ಇದ್ದಾಗ ಕವರೇಜ್ ಮಾಡಿಕೊಳ್ಳದೇ ಇರುತ್ತಾರಾ?

ಈ 'ಭಾ-ರತಿ' ಸಿನಿಮಾ out of coverage!

'ಫ್ಲಾಪಿಸ್ಟ'ರ ಟೈಮ್‌ಬಾಂಬ್!



'ಕ್ಷಣ ಕ್ಷಣ' ಎಂಬ ಟೈಮ್‌ಬಾಂಬ್ ಹೊರಬರುತ್ತಿದೆ. ಫ್ಲಾಪ್ ಹೀರೋ ಆದಿತ್ಯ, ಫ್ಲಾಪ್ ಹೀರೊಯಿನ್ ಪ್ರೇಮಾ, ಫ್ಲಾಪೆಸ್ಟ್ ಡೈರೆಕ್ಟರ್ ಸುನೀಲ್‌ಕುಮಾರ್ ದೇಸಾಯಿಯವರ ಕಾಂಬಿನೇಷನ್‌ಗೆ ಅದ್ಯಾರೋ ಸಿರಿವಂತ ನಿರ್ಮಾಪಕ ಒಲಿದಿದ್ದಾನೆ. ಅದ್ಯಾರಿ ಆಹ್ವಾನ ಪತ್ರಿಕೆ ಬಂದಾಗಿದೆ.

'ರಮ್ಯ ಚೈತ್ರ ಕಾಲ'ದ ಮೊದಲ ಶೋಗೆ ಕೇವಲ ಮೂರೇ ಪ್ರೇಕ್ಷಕರಿದ್ದ ವಿಚಾರ ಈ ಮೂವರು ಫ್ಲಾಪಿಸ್ಟರಿಗೆ ಬೇಜಾರು ತಂದಿದೆಯಂತೆ. 'ರಮ್ಯ ಚೈತ್ರ ಕಾಲ'ದಲ್ಲಿ ಮುಂದಾಳ ಹೂವನ್ನು ಅರಳಿಸಿ ಬೋರ್ ಹೊಡೆಸಿದ ದೇಸಾಯಿ 'ಕ್ಷಣ ಕ್ಷಣ'ದಲ್ಲಿ ತರ್ಕ, ನಿಷ್ಕರ್ಷ ಮಾಡಲಿದ್ದಾರೆ ಅಷ್ಟೇ.

R.B.P. LANKESH, Kannada Weekly Price Rs. 10/- 21-6-2006 RNI No. KARKAN2005/14648 Regd.No.KA/BG(S)/2036/2005-0

ಅಸಹ್ಯ ಹುಟ್ಟಿಸುವ 'ಗಂಡ-ಹೆಂಡತಿ'!



ಮೊನ್ನೆ 'ಗಂಡ-ಹೆಂಡತಿ' ಚಿತ್ರಕ್ಕೆ ಸಂಬಂಧಪಟ್ಟ ಹಾಡುಗಳ ಮತ್ತು ದೃಶ್ಯಗಳ ತುಣುಕುಗಳನ್ನು ನಿರ್ಮಾಪಕ ಶೈಲೇಂದ್ರ ಬಾಬು ಮತ್ತು ನಿರ್ದೇಶಕ-ರವಿ ಶ್ರೀವತ್ಸ ಪತ್ರಕರ್ತರಿಗೆ ತೋರಿಸಿದರು.

ಇವನ್ನು ನೋಡಿದ ಹೆಚ್ಚಿನವರು ಹೇಳಿದ್ದು ಒಂದೇ: 'ಗೌರಮ್ಮ' ಮತ್ತು 'ಕುಟುಂಬ'ದಂತಹ ಸದಭಿರುಚಿಯ ಚಿತ್ರಗಳನ್ನು ನಿರ್ಮಿಸಿದ್ದ ಶೈಲೇಂದ್ರ ಬಾಬುವಿಗೆ ಇಂತಹ ಕಳಪೆ ಚಿತ್ರವನ್ನು ತೆಗೆಯುವ ದರ್ದು ಏನಿತ್ತು? ಯಾಕೆಂದರೆ ಈ ಚಿತ್ರದ ತುಣುಕುಗಳು ಬ್ಲ್ಯೂ ಫಿಲಂಗಿಂತಲೂ ಕಳಪೆಯಾಗಿವೆ. ಇದು ಹಿಂದಿಯ ಯಶಸ್ವಿ ಚಿತ್ರ 'ಮರ್ಡರ್'ನ ರೀಮೇಕ್ ಆದರೂ ಇಲ್ಲಿ ಹಾಡುಗಳನ್ನು ಸಭ್ಯತೆ ಮತ್ತು ಸಂಸ್ಕೃತಿಯನ್ನು ಮೀರಿ ಚಿತ್ರಿಸಲಾಗಿದೆ.



'ದೆಡ್ಲಿ ಸೋಮ' ಚಿತ್ರದ ಮುಖಾಂತರ ಭರವಸೆ ಮೂಡಿಸಿದ್ದ ನಿರ್ದೇಶಕ ರವಿ ಶ್ರೀವತ್ಸ ತಮ್ಮ ಎರಡನೇ ಚಿತ್ರಕ್ಕೆ ಇಷ್ಟೊಂದು ಪಾತಾಳಕ್ಕೆ ಇಳಿಯಬಾರದಿತ್ತು. ಈ ಚಿತ್ರದ ದೃಶ್ಯಗಳು ಅಷ್ಟು ಕೆಟ್ಟದಾಗಿವೆ. ಇನ್ನು ಈ ಚಿತ್ರದ ಪೋಸ್ಟರ್‌ಗಳೂ ಅಸಹ್ಯ ಹುಟ್ಟಿಸುವಂತಿವೆ.


ಇದೇನೇ ಇರಲಿ ಒಳ್ಳೊಳ್ಳೆಯ ಚಿತ್ರಗಳನ್ನು ನಿರ್ಮಿಸಿ, ಅನೇಕ ಚಿತ್ರಗಳಿಗೆ ಫೈನಾನ್ಸ್ ಕೂಡ ಮಾಡಿ ಒಳ್ಳೆಯ ಹೆಸರನ್ನು ಸಂಪಾದಿಸಿದ್ದ ಶೈಲೇಂದ್ರ ಬಾಬು ಈ ಚಿತ್ರದ ಮುಖಾಂತರ ಕನ್ನಡ ಚಿತ್ರರಂಗದ 'ವಿಲನ್' ಆಗಿದ್ದಾರೆ. ಈ ಚಿತ್ರ ಸೆನ್ಸಾರ್ ಕತ್ತರಿಗೆ ಬಲಿಯಾಗದೇ ಹಾಗೇ ಪ್ರದರ್ಶನ ಕಂಡಲ್ಲಿ ಕಂಡಿತವಾಗಿಯೂ ಇದು ನಮ್ಮ ಯುವಜನರನ್ನು ತಪ್ಪು ದಾರಿಗೆ ಎಳೆಯುತ್ತದೆ.

ಹೀಗಾಗಿ ಸೆನ್ಸಾರ್ ಮಂಡಳಿಯವರು ಯಥೇಚ್ಛವಾಗಿ ಕತ್ತರಿ ಪ್ರಯೋಗ ಮಾಡಿ ಕನ್ನಡಿಗರ ಮಾನ ಮರ್ಯಾದೆಯನ್ನು ಉಳಿಸುತ್ತಾರೆಂದು ನಂಬೋಣ.





ಶಿವಣ್ಣನ 'ಬಂಧು-ಬಳಗ'!



ಶಿವರಾಜ್ ಕುಮಾರ್ ಮತ್ತೆ ತಮ್ಮ ಸ್ವಂತಿಕೆ ಮತ್ತು ಸದಭಿರುಚಿಯನ್ನು ಪ್ರದರ್ಶಿಸಿದ್ದಾರೆ. ಒಂದು ಕಾಲದ ವಿಷ್ಣುವಿನ ಬಲಗೈ ಬಂಟ ಸೂರಪ್ಪ ಬಾಬು ನಿರ್ಮಾಣದ ಚಿತ್ರದಲ್ಲಿ ನಟಿಸುತ್ತಿರುವ ಸಿನಿಮಾಗೆ ಶಿವು 'ಬಂಧು-ಬಳಗ' ಎಂಬ ಹೆಸರನ್ನಿಟ್ಟಿದ್ದಾರೆ. ಶಿವರಾಜ್‌ಕುಮಾರ್ ಅವರ ಇತ್ತೀಚಿನ ಚಿತ್ರಗಳ ಹೆಸರನ್ನು ಗಮನಿಸಿ ನೋಡಿ. 'ಚಿಗುರಿದ ಕನಸು', 'ತವರಿಗೆ ಬಾ ತಂಗಿ', 'ತವರಿನ ಸಿರಿ', 'ಅಣ್ಣ-ತಂಗಿ', 'ಜೋಗಿ', 'ಅಶೋಕ' ಹೀಗೆ ಶಿವು ನಟನೆಯ ಚಿತ್ರಗಳ ಟೈಟಲ್‌ಗಳು ಇಡೀ ಸಂಸಾರವನ್ನೇ ಆಕರ್ಷಿಸುವಂತಿರುತ್ತವೆ. ಈಗ ಎಲ್ಲರೂ ಮಚ್ಚು-ಲಾಂಗು, ರೌಡಿಯಿಸಂ ಇರುವ ಹೆಸರುಗಳನ್ನು ಇಡುತ್ತಿದ್ದರೆ, ಶಿವಣ್ಣ ಮಾತ್ರ ಈಗಲೂ ಹಳೇ ಕಾಲವನ್ನು ನೆನಪಿಸುವಂತಹ ಹೆಸರುಗಳನ್ನೇ ತಮ್ಮ ಚಿತ್ರಗಳಿಗೆ ಸೂಚಿಸುತ್ತಿದ್ದಾರೆ.

ಅದೇನೇ ಇರಲಿ, ವಿಷ್ಣು ಚಿತ್ರ ಮಾಡಿ ಕೋಟ್ಯಂತರ ರೂಪಾಯಿ ಕಳೆದುಕೊಂಡ ಸೂರಪ್ಪ ಬಾಬು ಈ ಚಿತ್ರದ ಮುಖಾಂತರ ಮತ್ತೆ ಲೈಮ್ ಲೈಟಿಗೆ ಬಂದರೆ ಅದು ಅವರಿಗೂ ಲಾಭ, ಗಾಂಧಿನಗರಕ್ಕೂ ಲಾಭ. ಯಾಕೆಂದರೆ ಸೂರಪ್ಪ ಬಾಬುನಂತಹ ಹಳೇ ಜಮಾನದ ನಿರ್ಮಾಪಕರು ಕನ್ನಡ ಚಿತ್ರರಂಗಕ್ಕೆ ಬೇಕಿದ್ದಾರೆ.

ಸೋಲೋ ಹೀರೋ ಉಪ್ಪಿಯೀಗ 'ಪುಡಾರಿ'!




ಕಳೆದ ವಾರ 'ಮಾಸ್ತಿ'ಯಾಗಲು ಹೊರಟಿದ್ದ ರಿಯಲ್ ಸ್ಟಾರ್ ಉಪೇಂದ್ರ ಈ ವಾರ 'ಪುಡಾರಿ'ಯಾಗಲು ರೆಡಿಯಾಗಿನಿಂತಿದ್ದಾರೆ. ಇದು ಚಿತ್ರರಂಗದ ದುರಂತವೋ ಅಥವಾ ಉಪ್ಪಿಯ ವೃತ್ತಿ ಬದುಕಿನ ವಿಚಿತ್ರವೋ, ಬಲ್ಲವರಾರು?

ಹಲವು ವರ್ಷಗಳ ಹಿಂದೆ 'ಎ' ಮತ್ತು 'ಉಪೇಂದ್ರ'ದಂತಹ ಸಿನಿಮಾಗಳ ಮೂಲಕ ಪಡ್ಡೆ ಹುಡುಗರಿಂದ ಶಿಳ್ಳೆಗಳನ್ನು ಗಳಿಸಿದ್ದ ಉಪ್ಪಿ ಆನಂತರ 'ಗೌರಮ್ಮ' ಮತ್ತು 'ಕುಟುಂಬ' ತರಹದ ಸಿನಿಮಾಗಳ ಮೂಲಕ ಮಹಿಳೆಯರ ಮನಸ್ಸನ್ನು ಗೆಲ್ಲಲು ನೋಡಿದ್ದರು. ಈ ಮಧ್ಯೆ 'ಉಪ್ಪಿ ದಾದಾ ಎಂಬಿಬಿಎಸ್' ನಲ್ಲಿ ಕಾಮಿಡಿ ಮತ್ತು 'ತಂದೆಗೆ ತಕ್ಕ ಮಗ' ದಲ್ಲಿ ಡ್ರಾಮ ಮಾಡಿ ಉಪ್ಪಿ ಮುಗ್ಗರಿಸಿದ್ದರು. ಈಗ ಮತ್ತೆ ಪಡ್ಡೆ ಹುಡುಗರೇ ಗತಿ ಎಂಬಂತೆ 'ಪುಡಾರಿ' ಚಿತ್ರದಲ್ಲಿ ಯಕಶ್ಚಿತ್ ಪುಡಾರಿಯಾಗಲು ತಯಾರಾಗಿದ್ದಾರೆ.

ಅಂದಹಾಗೆ, ಸಾಯಿಪ್ರಕಾಶ್ ಈ 'ಪುಡಾರಿ'ಯನ್ನು ನಿರ್ದೇಶಿಸುತ್ತಿದ್ದರೆ, ಇದನ್ನು ನಿರ್ಮಿಸುತ್ತಿರುವವರು ಯಾರು ಗೊತ್ತಾ? 'ಯಜಮಾನ' ಚಿತ್ರವನ್ನು ಮಾಡಿ ಗಳಿಸಿದ್ದ ಹಣವನ್ನೆಲ್ಲ ಬೇರೆ ಸಿನಿಮಾಗಳಲ್ಲಿ ಕಳೆದುಕೊಂಡು ಹೈರಾಣಾಗಿರುವ ರೆಹಮಾನ್!

'ಪುಡಾರಿ' ಯಜಮಾನ ರೆಹಮಾನ್‌ಗೆ ಬ್ರೇಕ್ ನೀಡುತ್ತಾನೋ ಅಥವಾ ಸೋಲಿನ ಸರಪಳಿಯಲ್ಲಿ ಸಿಲುಕಿರುವ ಪಡ್ಡೆಗಳ ಹೀರೋ ಉಪ್ಪಿಯನ್ನು ಬಚಾವ್ ಮಾಡುತ್ತಾನೋ, ಪ್ರೇಕ್ಷಕರು ನಿರ್ಧರಿಸಲಿದ್ದಾರೆ.

ತೆಲುಗು ಸಾಯಿಗೆ ಕನ್ನಡ ಹುಟ್ಟು!



ಸದ್ಯಕ್ಕೆ ಗಾಂಧಿನಗರದಲ್ಲಿ ಅತ್ಯಂತ ಬೇಡಿಕೆಯಲ್ಲಿರುವ ತೆಲುಗು ಮೂಲದ ನಿರ್ದೇಶಕ ಸಾಯಿಪ್ರಕಾಶ್ ಕನ್ನಡದ ಚಿತ್ರರಂಗಕ್ಕೆ ಅನಿವಾರ್ಯವಾಗಿದ್ದಾರೆ. ಕ್ರೇಜಿ ಸ್ಟಾರ್ ರವಿಚಂದ್ರನ್‌ರ ಮೂರು ಚಿತ್ರಗಳನ್ನು, ಅವುಗಳ ಜೊತೆ ಜೊತೆಗೆ ಶಿವರಾಜ್‌ಕುಮಾರ್ ಅವರ ಮೂರು ಹೊಸ ಚಿತ್ರಗಳನ್ನೂ ಸಾಯಿಪ್ರಕಾಶ್ ನಿರ್ದೇಶಿಸುತ್ತಿದ್ದಾರೆ. ಈ ಮಧ್ಯೆ ಉಪೇಂದ್ರ ನಟಿಸಲಿರುವ 'ಪುಡಾರಿ' ಎಂಬ ಸಿನಿಮಾಗೂ ಇವರೇ ಸಾರಥಿ. ಅಷ್ಟೇ ಅಲ್ಲದೆ, ಹೊಸ ನಟ ದಿಲೀಪ್ ಪೈ ಮತ್ತು ಹೊಸ ನಟಿ ಆಶಿತಾ ಇರುವ 'ರೋಡ್ ರೋಮಿಯೋ' ಚಿತ್ರವನ್ನು ಸಾಯಿಪ್ರಕಾಶ್ ಮಾಡಿ ಮುಗಿಸಿದ್ದಾರೆ.

ಹೀಗೆ ದೊಡ್ಡ ಸ್ಟಾರ್‌ಗಳಿಗೂ, ಈಗಷ್ಟೇ ಗಾಂಧಿನಗರಕ್ಕೆ ಕಾಲಿಟ್ಟಿರುವ ನವ ಸ್ಟಾರ್‌ಗಳಿಗೂ ಈ ಸಾಯಿಪ್ರಕಾಶ್‌ರೇ ನಿರ್ದೇಶಕರಾಗಿದ್ದಾರೆ. ಆದರೆ ಇವರ ನಿರ್ದೇಶನದ 'ಅಣ್ಣ-ತಂಗಿ' ಚಿತ್ರ ಬಾಕ್ಸ್ ಆಫೀಸಿನಲ್ಲಿ ಹಣವನ್ನು ಲೂಟಿಹೊಡೆದದ್ದು ಬಿಟ್ಟರೆ ಇವರ ನಿರ್ದೇಶನದ ಬೇರೆ ಚಿತ್ರಗಳು ಸಾಧಿಸಿದ್ದು ಅಷ್ಟಕ್ಕಷ್ಟೆ. ಆದರೂ ಇವರಿಗೆ ಹೇಗೆ ಇಷ್ಟು ಬೇಡಿಕೆ ಎಂಬುದು ಗಾಂಧಿನಗರಿಗಳು ಬಿಡಿಸಲಾಗದ ಒಗಟಾಗಿದೆ.

ಹಲವಾರು ದಶಕಗಳಿಂದ ಗಾಂಧಿನಗರದಲ್ಲಿ ದುಡಿದಿರುವ ಖ್ಯಾತ ನಿರ್ದೇಶಕ ಭಾರ್ಗವ ಈಗ ನಿರ್ದೇಶಿಸುತ್ತಿರುವ 'ಕುಮಾರರಾಮ' ಅವರ ಐವತ್ತನೆಯ ಚಿತ್ರ. ಆದರೆ, ನೆನ್ನೆ ಮೊನ್ನೆ ಕನ್ನಡ ಚಿತ್ರರಂಗಕ್ಕೆ ಬಂದ ಸಾಯಿಪ್ರಕಾಶ್ ಸುಲಭವಾಗಿ ಅರ್ಧ ಸೆಂಚುರಿ ಬಾರಿಸಿ ಎಪ್ಪತ್ತೈದರತ್ತ ಮುನ್ನುಗ್ಗುತ್ತಿದ್ದಾರೆ.

ಈ ಅಂಕಿ ಅಂಶವೇ ಸಾಕಲ್ಲವೆ, ಹೇಗೆ ಪರಭಾಷೆಯ ಈ ನಿರ್ದೇಶಕನನ್ನು ನಮ್ಮವರು ರತ್ನಗಂಬಳಿ ಹಾಸಿ ಪೋಷಿಸುತ್ತಿದ್ದಾರೆ ಎಂಬುದನ್ನು ತೋರಿಸುವುದಕ್ಕೆ.



PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676427, Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44